ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 8 ಗುರುವಾರ 2025

₹4

ಸಂಪುಟ: 46 | ಸಂಚಿಕೆ: 22 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ತುರ್ತು ಸಂದರ್ಭದಲ್ಲಿ ಕರ್ತವ್ಯ ನಿರ್ವಹಣೆಗೆ ಮೈಸೂರು ಜಿಲ್ಲಾಡಳಿತದಿಂದ

12 ಸೇವಾ ತಂಡಗಳ ರಚನೆ



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಎಡಿಸಿ ಪಿ.ಶಿವರಾಜ್, ಬುಧವಾರ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಮೇ 7(ಆರ್‌ಕೆ)–ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ಹಿನ್ನೆಲೆಯಲ್ಲಿ ತುರ್ತು ಸಂದರ್ಭ ಎದುರಾದಲ್ಲಿ ನಾಗರಿಕರ ರಕ್ಷಣೆ ಮಾಡಲು ಮೈಸೂರು ಜಿಲ್ಲಾಡಳಿತವು ಹಲವು ಇಲಾಖೆಗಳನ್ನೊಳಗೊಂಡ 12 ತಂಡಗಳನ್ನು ರಚಿಸಿದೆ.

ಈ ಕುರಿತು ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದಂತೆ ನಾಗರಿಕರ ರಕ್ಷಣೆ ತುರ್ತು ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸಲು ಸಮರ್ಥ ಅಧಿಕಾರಿಗಳ ನೇತೃತ್ವದಲ್ಲಿ ತಂಡಗಳನ್ನು ರಚಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ತಿಳಿಸಿದ್ದಾರೆ.

ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಿದ ಅವರು, ವಿಶ್ವ ಪ್ರಸಿದ್ಧ ಪ್ರವಾಸಿ ತಾಣವಿರುವ ನಗರವಾದ್ದರಿಂದ ಮೈಸೂರಲ್ಲಿ ಎಲ್ಲರೂ ಜಾಗರೂಕರಾಗಿ ಸಮಯ ಪ್ರಜ್ಞೆಯಿಂದ ಕೆಲಸ ಮಾಡಬೇಕು. ಅಗತ್ಯ ಸಂದರ್ಭದಲ್ಲಿ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವುದು, ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಪ್ರದೇಶಗಳ ಭದ್ರತೆ, ಮುಂಜಾಗ್ರತಾ ಕ್ರಮ ಕೈಗೊಳ್ಳಲು ಎಲ್ಲಾ ಇಲಾಖೆ ಅಧಿಕಾರಿಗಳು ಸಹ ಸಮನ್ವಯ ಸಾಧಿಸಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಎಡಿಸಿ ಶಿವರಾಜ್ ಸೂಚಿಸಿದರು.

ಸಂವಹನ ಸೇವೆ, ಬೆಂಕಿ ಸಂಬಂಧಿತ ತುರ್ತು ಪರಿಸ್ಥಿತಿ, ಕಲ್ಯಾಣ ಸೇವೆ, ನಾಗರಿಕರ ರಕ್ಷಣಾ ಸೇವೆ, ಸಾರಿಗೆ ನಿರ್ವಹಣೆಗೆ 12 ತಂಡ ರಚಿಸಲಾಗಿದ್ದು, ನಗರ ಪೊಲೀಸ್ ಕಮಿಷ್ನರ್, ಎಸ್ಪಿ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಸಹಾಯಕ ಆಯುಕ್ತರು, ತಹಶೀಲ್ದಾರ್‌ಗಳು, ಜಿಲ್ಲಾ ಆರೋಗ್ಯಾಧಿಕಾರಿ, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕರು, ಅಗ್ನಿಶಾಮಕ ಪ್ರಾದೇಶಿಕ ಅಧಿಕಾರಿ, ಏರ್‌ಪೋರ್ಟ್ ನಿರ್ದೇಶಕರು, ರೈಲ್ವೆ ಅಧಿಕಾರಿಗಳು, ಆಕಾಶವಾಣಿ ಸೇರಿದಂತೆ ಹಲವು ಇಲಾಖೆಗಳ ಅಧಿಕಾರಿಗಳು ತಂಡದಲ್ಲಿದ್ದಾರೆ.

ತಂಡಗಳು ದಿನದ 24 ಗಂಟೆಯೂ ಕರ್ತವ್ಯ ನಿರ್ವಹಿಸಲಿದ್ದು, ತುರ್ತು ಸಂದರ್ಭ ಎದುರಾದರೆ ಜನರಿಗೆ ಆತ್ಮಸ್ಥೈರ್ಯ ತುಂಬಲು ಮುಂದಾಗುವಂತೆಯೂ ಸೂಚನೆ ನೀಡಿದ ಶಿವರಾಜ್, ಕೇಂದ್ರ ಸ್ಥಾನ ಸೇವೆ, ವಾರ್ಡನ್, ಸಂಪರ್ಕ, ತುರ್ತು ಸೇವೆ, ಅಗ್ನಿಶಾಮಕ ರಕ್ಷಣೆ, ಕ್ಷೇಮ ಪಾಲನೆ, ಪೂರೈಕೆಯಂತಹ ಸೇವೆಗಳಿಗೆ ಸನ್ನದ್ಧವಾಗುವಂತೆ ತಿಳಿಸಿದರು.

ಚಾಮುಂಡೇಶ್ವರಿಗೆ ಆಷಾಢ ಶುಕ್ರವಾರದ ಪೂಜಾ ಮಹೋತ್ಸವಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಿ



ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಆಷಾಢ ಮಾಸದ ಶುಕ್ರವಾರ ಹಾಗೂ ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವದ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ನಡೆಸಿದರು.

- ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸೂಚನೆ
- ಜೂ.27, ಜು.4, 11, 18 ಆಷಾಢ ಶುಕ್ರವಾರ; ಜು.17 ಚಾಮುಂಡೇಶ್ವರಿ ವರ್ಧಂತ್ಯುತ್ಸವ

ಮೈಸೂರು, ಮೇ 7(ಎಂಟಿವೈ)–ಆಷಾಢ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವ ಹಾಗೂ ನಾಡದೇವಿ ಚಾಮುಂಡೇಶ್ವರಿಯ ವರ್ಧಂತ್ಯುತ್ಸವದ ವೇಳೆ ಚಾಮುಂಡಿಬೆಟ್ಟಕ್ಕೆ ಅಪಾರ ಸಂಖ್ಯೆಯ ಭಕ್ತರು ಬರುವ ಹಿನ್ನೆಲೆಯಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸೂಚಿಸಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯತ್‌ನ ಡಿ.ದೇವರಾಜ ಅರಸ್ ಸಭಾಂಗಣದಲ್ಲಿ ಬುಧವಾರ ಅಧಿಕಾರಿಗಳೊಂದಿಗೆ ಪೂರ್ವಾಭಾವಿ ಸಭೆ ನಡೆಸಿದ ಅವರು, ಆಷಾಢ ಶುಕ್ರವಾರದಂದು ಬೆಟ್ಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುವುದರಿಂದ ಯಾವುದೇ ಸಮಸ್ಯೆ ಆಗದಂತೆ ಕಟ್ಟೆಚ್ಚರ ವಹಿಸಬೇಕು. ಭದ್ರತೆ, ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಆರೋಗ್ಯ ಸೇವೆ, ಬ್ಯಾರಿಕೇಡ್ ಅಳವಡಿಕೆ, ಸಾರಿಗೆ ಬಸ್‌ಗಳ ಸಂಚಾರ, ಪಾರ್ಕಿಂಗ್, ಪ್ರಸಾದ ವಿನಿಯೋಗ ಸೇರಿದಂತೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಸಣ್ಣ ಲೋಪವಾಗದಂತೆ ಕಟ್ಟೆಚ್ಚರ ವಹಿಸಬೇಕು ಎಂದರು.

ಈ ಬಾರಿಯೂ ಆಷಾಢ ಶುಕ್ರವಾರ ಹಾಗೂ ವರ್ಧಂತಿ ದಿನದಂದು ಖಾಸಗಿ ವಾಹನಗಳಿಗೆ ಚಾಮುಂಡಿಬೆಟ್ಟ ಪ್ರವೇಶ ನಿರ್ಬಂಧಿಸಲಾಗುತ್ತದೆ. ಖಾಸಗಿ ವಾಹನಗಳನ್ನು ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಪಕ್ಕದ ಮೈದಾನದಲ್ಲಿ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಬೇಕು. ಅಲ್ಲಿಂದಲೇ ಚಾಮುಂಡಿಬೆಟ್ಟಕ್ಕೆ ಭಕ್ತರಿಗೆ ಬಸ್ ವ್ಯವಸ್ಥೆ ಮಾಡುವಂತೆ ಸಲಹೆ ನೀಡಿದರು.

ಪ್ರಸಕ್ತ ಸಾಲಿನಲ್ಲಿ ಜೂನ್ 27, ಜುಲೈ 4, ಜುಲೈ 11, ಜುಲೈ 18ರಂದು ನಾಲ್ಕು ಆಷಾಢ ಶುಕ್ರವಾರಗಳು ಹಾಗೂ ಜುಲೈ 17ರಂದು ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ನಡೆಯಲಿದೆ. ಅಷ್ಟರೊಳಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು. ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸಾಕಷ್ಟು ಸಮಯಾವಕಾಶವಿದ್ದು, ಅಷ್ಟರೊಳಗೆ ವಿವಿಧ ಇಲಾಖೆಗಳ ಸಹಕಾರ ಹಾಗೂ ಸಮನ್ವಯತೆಯಿಂದ ಸಿದ್ಧತಾ ಕಾರ್ಯ ಪೂರ್ಣಗೊಳಿಸಬೇಕು ಎಂದರು.

ಪೊಲೀಸ್ ಇಲಾಖೆಯಿಂದ ಅಗತ್ಯ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು. ಸಂಚಾರ ನಿಯಂತ್ರಣ ವ್ಯವಸ್ಥೆ ಮಾಡಬೇಕು. ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಶುದ್ಧ ಕುಡಿಯುವ ನೀರಿನ ಪೂರೈಕೆ ಹಾಗೂ ಸ್ವಚ್ಛತೆ ಮಾಡಬೇಕು. ಚೆಸ್ಕಾಂ ವತಿಯಿಂದ 1000 ಮೆಟ್ಟಿಲುಗಳ ಬಳಿಯಿರುವ ವಿದ್ಯುತ್ ದೀಪಗಳ ದುರಸ್ತಿ ಹಾಗೂ ಬೆಟ್ಟದ ದೇವಾಲಯಗಳಿಗೆ ದೀಪಾಲಂಕಾರ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಆಷಾಢ ಶುಕ್ರವಾರ ಹಾಗೂ ಆಷಾಡ ಮಾಸದ ಶನಿವಾರ ಹಾಗೂ ಭಾನುವಾರಗಳಂದು ಸಾಮಾನ್ಯ ದರ್ಶನದೊಂದಿಗೆ 50 ರೂ. ಹಾಗೂ 300 ರೂ.ಗಳ ಟಿಕೆಟ್ ಪಡೆದು ವಿಶೇಷ ದರ್ಶನ ಮಾಡಬಹುದು ಎಂದರು. ಸಭೆಯಲ್ಲಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್ ಆಸಿಫ್, ಉಪವಿಭಾಗಾಧಿಕಾರಿ ಕೆ.ಆರ್. ರಕ್ಷಿತ್, ಡಿಸಿಪಿ ಮುತ್ತುರಾಜ್, ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಎಂ.ಜೆ.ರೂಪ, ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಅರ್ಚಕರು, ಪುರೋಹಿತರಿಗೆ ಜೀವವಿಮಾ ಪಾಲಿಸಿ ವಿತರಣೆ



ಜಗದ್ಗುರು ಶ್ರೀ ಶಂಕರಾಚಾರ್ಯರು ಹಾಗೂ ಶ್ರೀ ರಾಮಾನುಜಾಚಾರ್ಯರ ಜಯಂತಿ ಸಂದರ್ಭದಲ್ಲಿ ಅರ್ಚಕರು ಹಾಗೂ ಪುರೋಹಿತರಿಗೆ ಜೀವವಿಮಾ ಪಾಲಿಸಿಯ ಪತ್ರವನ್ನು ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ವಿತರಿಸಿದರು.

ಮೈಸೂರು, ಮೇ7–ನಗರದ ವಿದ್ಯಾರಣ್ಯಪುರಂನಲ್ಲಿರುವ ಅಖಿಲ ಭಾರತ ಅಸಂಘಟಿತ ಪುರೋಹಿತ ಕಾರ್ಮಿಕ ಫೆಡರೇಶನ್ ವತಿಯಿಂದ ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರ ಜಯಂತಿ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಆಚಾರ್ಯತ್ರಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ನಂತರ ಅರ್ಚಕರು ಹಾಗೂ ಪುರೋಹಿತರಿಗೆ ಜೀವವಿಮಾ ಪಾಲಿಸಿ ಪತ್ರವನ್ನು ಶಾಸಕ ಟಿ.ಎಸ್.ಶ್ರೀವತ್ಸ ವಿತರಿಸಿದರು.

ಈ ವೇಳೆ ಮಾತನಾಡಿದ ಶ್ರೀವತ್ಸ ಅವರು, ಇಂತಹ ಕಾರ್ಯಕ್ರಮದಲ್ಲಿ ಸರ್ಕಾರದ ಸೌಲಭ್ಯ ತೆಗೆದುಕೊಳ್ಳುವಂತಹ ಕಾರ್ಯವು ಆಗುತ್ತಿರುವುದು ಸಂತಸದ ವಿಚಾರ ಎಂದು ಹೇಳಿದರು. ಕಳೆದ ಅಧಿವೇಶನದಲ್ಲಿ ಅರ್ಚಕರ ಇನಾಂ ಜಮೀನಿಗೆ ಸಂಬಂಧಪಟ್ಟಂತೆ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಇನಾಮ್ ಜಮೀನಿಗೆ ಅರ್ಜಿಗಳನ್ನು ತೆಗೆದುಕೊಳ್ಳಲಾಗಿದೆ ಎಂಬ ಪ್ರಶ್ನೆಯನ್ನು ಹಾಕಿದ್ದೆವು. ಆದರೆ ಇಡೀ ಮೈಸೂರು ಜಿಲ್ಲೆಯಲ್ಲಿ ಇನಾಂ ಜಮೀನಿಗೆ ಸಂಬಂಧಪಟ್ಟಂತೆ ಅರ್ಚಕರ ಕಡೆಯಿಂದ ಒಂದೇ ಒಂದು ಸಿಂಗಲ್ ಅರ್ಜಿ ಹೋಗಿಲ್ಲ. ಇದು ಅಚ್ಚರಿ ತಂದಿದೆ ಎಂದು ತಿಳಿಸಿದರು.

ಇತ್ತೀಚೆಗೆ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾ ರೆಡ್ಡಿ ಅವರು ಜಗನ್ಮೋಹನ ಅರಮನೆಗೆ ಸಂಸ್ಕೃತ ಕಲಿತ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ಕೊಡುವ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಆ ಸಂದರ್ಭದಲ್ಲಿ ಅವರೊಂದಿಗೆ ಅರ್ಚಕ ವೃತ್ತಿ ಅರ್ಚಕರ ಬಗ್ಗೆ ಮಾತನಾಡಿದ್ದೇನೆ. ಜೊತೆಗೆ ವಿಧಾನಸೌಧದಲ್ಲೂ ಖಾಸಗಿಯಾಗಿ ಅರ್ಚಕ ವೃತ್ತಿ ಮಾಡುವವರಿಗೆ ಐಡಿ ಕಾರ್ಡ್ ಕೊಟ್ಟರೆ ಬ್ಯಾಂಕುಗಳಲ್ಲಿ ಸಾಲ ಸಿಗಬಹುದೇನೋ ಎಂಬ ಕಾರಣಕ್ಕೆ ಖಾಸಗಿಯಾಗಿ ಅರ್ಚಕ ವೃತ್ತಿ ಮಾಡುವವರಿಗೆ ಐಡಿ ಕಾರ್ಡ್ ಕೊಡಿಸುವ ಕುರಿತು ಮಾತನಾಡಿದ್ದೇನೆ ಎಂದು ಹೇಳಿದರು.

ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ ರಾಮಪ್ರಸಾದ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ.ಲಕ್ಷ್ಮೀದೇವಿ, ಬಿಜೆಪಿ ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಗೋಪಾಲ್‌ರಾಜ್ ಅರಸು, ಶಾಂತಕ್ಕ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಸ್ಥೆಯ ಗೌರವ ಅಧ್ಯಕ್ಷ ಲಕ್ಷ್ಮೀಶ, ಅಧ್ಯಕ್ಷ ಸಂತೋಷ್ ಕುಮಾರ್, ಉಪಾಧ್ಯಕ್ಷ ಗಣೇಶ್, ಕಾರ್ಯದರ್ಶಿ ರವಿಶಂಕರ್, ಖಜಾಂಚಿ ಮನೋಹರ್, ನಿರ್ದೇಶಕರಾದ ರಾಜಣ್ಣ, ವಿಜಯ ವಿಠಲಾಚಾರ್ಯ, ಗುರುರಾಜ್, ಶರ್ಮಾ, ಪ್ರಸನ್ನಕುಮಾರ್, ವೇಣುಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

ಅಂತಃಕರಣ, ಪ್ರೀತಿ, ಕಾರುಣ್ಯ ಪ್ರತಿಪಾಲಿಸಿದ ಬಸವಣ್ಣ

ಬಸವೇಶ್ವರ ಜಯಂತಿಯಲ್ಲಿ ಶಂಕರ್ ದೇವನೂರು ಅಭಿಪ್ರಾಯ



ಮೈಸೂರು ವಿವಿ ಪ್ರಸಾರಾಂಗದ ವತಿಯಿಂದ ಕುವೆಂಪು ಸಭಾಂಗಣದಲ್ಲಿ ಬುಧವಾರ ಬಸವೇಶ್ವರರ ಜಯಂತಿ ಆಚರಿಸಲಾಯಿತು.

ಮೈಸೂರು, ಮೇ 7(ಜಿಎ)–ಬಸವಣ್ಣ ಮಹಾತಾಯಿಯಂತಾಗಿ ಅಂತಃಕರಣ ಮತ್ತು ಪ್ರೀತಿ, ಕಾರುಣ್ಯವನ್ನು ಪ್ರತಿಪಾದಿಸಿದರು. ಅದನ್ನು ನಾವೆಲ್ಲರೂ ಅನುಸರಿಸಬೇಕು ಎಂದು ಸಾಂಸ್ಕೃತಿಕ ಚಿಂತಕ ಶಂಕರ್ ದೇವನೂರು ಅಭಿಪ್ರಾಯಪಟ್ಟರು.

ಮೈಸೂರು ವಿವಿ ಪ್ರಸಾರಾಂಗದ ವತಿಯಿಂದ ಕುವೆಂಪು ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವೇಶ್ವರರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಗತ್ತಿನಲ್ಲಿ ಒಳಗೊಳ್ಳುವ ಸಂಸ್ಕೃತಿಯನ್ನು ಮೊದಲು ಪ್ರತಿಪಾದಿಸಿದವರು ಬಸವಣ್ಣ. ಒಳಗೊಳ್ಳುವಿಕೆಯೇ ಬಸವಣ್ಣನ ಧರ್ಮ ಎಂದರು.

ನಾವೆಲ್ಲರೂ ಇರಲು ಬಂದವರಲ್ಲ. ಇರುವುದನ್ನು ಅರಿಯಲು ಬಂದವರು. ಆದರೆ, ವರ್ತಮಾನದ ತಲ್ಲಣ್ಣಗಳು, ಗೊಂದಲಗಳು, ಜಾತಿಗಳು ನರ್ತಿಸುತ್ತಿವೆ. ಹುಟ್ಟಿದ್ದೇವೆ ಸಾಯುತ್ತೇವೆ. ಬದುಕಿರುವಾಗ ಅಂತರಂಗದ ಮೌಲ್ಯ ಕಳೆದುಕೊಂಡರೆ ನಿಜದ ಸಾವು ಎಂಬ ಅರಿವು ಕಂಡುಕೊಳ್ಳಬೇಕು ಎಂದು ನುಡಿದರು.

ಎರಡನೇ ಮಹಾಯುದ್ಧದಲ್ಲಿ ಐದು ಕೋಟಿ ಜನರು ಸತ್ತರು. ಮನುಷ್ಯರ ಮೆದುಳಿನಲ್ಲಿ ಯುದ್ಧದ ಚಿಂತನೆಗಳು ಹುಟ್ಟಿ ಬೀದಿಗೆ ಬರುತ್ತದೆ. ಈಗ ಶಾಂತಿಯ ಕಡೆಗೆ ನಮ್ಮ ಮನಸ್ಸು ಕೊಡಬೇಕು. ಮನುಷ್ಯರಾಗಿ ಎಲ್ಲರನ್ನೂ ಪ್ರೀತಿಸುವುದನ್ನು ಕಲಿಯಬೇಕು. ಮನೋ ಶುದ್ಧೀಕರಣದ ಶಾಂತಿ ಬಸವ ಧರ್ಮ ಎಂದು ಹೇಳಿದರು.

"ನೊಂದವರು, ಅಸ್ಪೃಶ್ಯರನ್ನು ದೇವರಾಗಿ ನೋಡಿದ್ದು ಬಸವ ಧರ್ಮ. ಬಸವಣ್ಣನ ಒಳದನಿಯ ಧರ್ಮದ ಭಾಷೆ ಕೊರಳ ಭಾಷೆ ಅಲ್ಲ. ಕರುಳಿನ ಭಾಷೆಯಾಗಿತ್ತು. ಬಸವಣ್ಣ ಶೂದ್ರ ಮಹಿಳೆಗೆ ಜಲವ ಕೇಳಿದೆ ನಿನ್ನ ಕುಲವ ಕೇಳಲಿಲ್ಲ ಎನ್ನುತ್ತಾನೆ. ಆದರೆ, ಕಲಿತವರು ಜಾತಿಯಿಂದ ಅಳೆಯುವ ಮೌಢ್ಯ ಬೆಳೆದಿದೆ. ಅದೇ ದುರಂತ ಎಂದರು.

ಒಂದು ಕಾಲಘಟ್ಟದಲ್ಲಿ ಹೊರಗಿಟ್ಟ ಕಾಯಕ ಸಮುದಾಯಗಳ ಜನರನ್ನು ಒಳಗೆ ಕರೆದುಕೊಂಡವರು ಬಸವಣ್ಣ. ಜಗತ್ತಿನಲ್ಲಿ ಮೊದಲು ಒಳಗೊಳ್ಳುವ ಸಂಸ್ಕೃತಿ ಪರಿಚಯಿಸಿದರು. ಸೇತುವೆಯಾಗಬೇಕಾದ ನಾವೆಲ್ಲರೂ ದ್ವೀಪಗಳಾಗಿ ಬದುಕುತ್ತಿದ್ದೇವೆ. ಬಸವಣ್ಣ ಮಹಾಸೇತುವೆಯಾಗಿದ್ದರು ಎಂದರು.

ಬಸವಣ್ಣರ ಆರಾಧನೆಯಿಂದ ಗೌರವ ಬರುವುದಿಲ್ಲ. ಅನುಸರಣೆಯಿಂದ ಗೌರವ ಬರುತ್ತದೆ. ಒಂದು ಹೂ ನಿಂತ ನೆಲೆಯಲ್ಲಿ ಜಗತ್ತನ್ನು ಸುಂದರಗೊಳಿಸುತ್ತದೆ. ಮನುಷ್ಯರು ಹೂವಿನಂತಾಗಬೇಕು. ಅದೇ ಶರಣ ತತ್ವ. ಬಸವಣ್ಣರ ಚಿಂತನೆ ಜೀವ ಕೇಂದ್ರಿತ, ಮನುಷ್ಯ ಕೇಂದ್ರಿತವಲ್ಲ ಎಂದು ತಿಳಿಸಿದರು. ಮೈಸೂರು ವಿವಿ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಸಾಹಿತಿ ಪ್ರೊ.ಮೊರಬದ ಮಲ್ಲಿಕಾರ್ಜುನ, ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು ಉಪಸ್ಥಿತರಿದ್ದರು.

ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ

ಮೈಸೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಇಂದು ಬಹಳ ಪ್ರಸ್ತುತವಾದ Lakes-2025: Healthy lakes, Healthy Lives: The Need for conservation ಎಂಬ ವಿಷಯದ ಮೇಲೆ ಮೇ 22 ಮತ್ತು 23ರಂದು ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಅಕಾಡೆಮಿ ಕಚೇರಿಯಲ್ಲಿ ಆಯೋಜಿಸಲಾಗುತ್ತಿದೆ. ಕಾರ್ಯಾಗಾರದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದು, ಕಾರ್ಯಾಗಾರದಲ್ಲಿ ಸ್ನಾತಕೋತ್ತರ ವಿಜ್ಞಾನಿ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಯುವ ವಿಜ್ಞಾನಿಗಳು, ಶೈಕ್ಷಣಿಕ ತಜ್ಞರು, ಯುವ ಉದ್ಯಮದಾರರು ಭಾಗವಹಿಸಬಹುದಾಗಿದೆ. ಅಲ್ಲದೆ, ಯುವ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು Research paper presentation ಮಂಡಿಸಲು ಅವಕಾಶ ಕಲ್ಪಿಸಲಾಗಿದ್ದು, ಆಯ್ಕೆಯಾದ Research paper ಗಳಿಗೆ ನಗದು ಬಹುಮಾನವನ್ನು ನೀಡಲಾಗುವುದು. ಆಸಕ್ತ ಪ್ರತಿನಿಧಿಗಳು ಮೇ 17ರೊಳಗಾಗಿ google form https://forms.gle/qYAgXUgaH7 ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ: 9845258894, 9620767819, 9611198189 ಸಂಪರ್ಕಿಸಬಹುದಾಗಿದೆ.

ರಿಯಲ್‌ಮಿ ಸಿ75 5ಜಿ ಮೊಬೈಲ್ ಬಿಡುಗಡೆ



ಇತ್ತೀಚೆಗೆ ಮೈಸೂನಲ್ಲಿ ನಡೆದ Realme ಡೀಲರ್ ಮೀಟ್ ಸಂದರ್ಭದಲ್ಲಿ Realme C75 ಬಿಡುಗಡೆ ಮಾಡಲಾಯಿತು. (ಎಡದಿಂದ) UTL ಪ್ರಾದೇಶಿಕ ಮಾರಾಟ ವ್ಯವಸ್ಥಾಪಕ (RSM) ಸುಧೀಂದ್ರ, ರಿಯಲ್‌ಮಿ ವಲಯ ಮಾರಾಟ ವ್ಯವಸ್ಥಾಪಕ (ZSM) ವಿರು ಪಾಕ್ಸಿ, RK ಮಾರ್ಕೆಟಿಂಗ್ ಮಾಲೀಕ ಸತ್ಯನಾರಾಯಣ, ರಿಯಲ್‌ಮಿ ಚಾನೆಲ್ ವಿತರಣಾ ವ್ಯವಸ್ಥಾಪಕ (CDM) ಸೈಯದ್ ಫರಾಜ್ ಚಿತ್ರದಲ್ಲಿದ್ದಾರೆ.

ಮೈಸೂರು, ಮೇ 7– ರಿಯಲ್‌ಮಿ ಅಧಿಕೃತವಾಗಿ ತನ್ನ ಬಜೆಟ್ ಸ್ನೇಹಿ ಮೊಬೈಲ್ ಫೋನ್ ರಿಯಲ್ ಮಿ C75 5G ಅನ್ನು ಬಿಡುಗಡೆ ಮಾಡಿದೆ. ಇದು ಬಜೆಟ್ 5G ಸ್ಮಾರ್ಟ್‌ಫೋನ್ ವರ್ಗಕ್ಕೆ ಹೊಸ ಸೇರ್ಪಡೆಯಾಗಿದೆ.

ದಕ್ಷ ಮೀಡಿಯಾ ಟೆಕ್ ಡೈಮೆನ್ಸಿಟಿ 6300 ಚಿಪ್‌ಸೆಟ್‌ನಿಂದ ಇದು ಚಾಲಿತವಾಗಿದ್ದು, 6nm ಆರ್ಕಿಟೆಕ್ಚರ್‌ನಲ್ಲಿ ನಿರ್ಮಿಸಲಾಗಿದೆ ಮತ್ತು ದೈನಂದಿನ ಬಳಕೆಗೆ ಘನ ಕಾರ್ಯಕ್ಷಮತೆಯನ್ನು ನೀಡುವಂತೆ ವಿನ್ಯಾಸಗೊಳಿಸಲಾಗಿದೆ.

ಈ ಫೋನ್ ಅನ್ನು ಎರಡು ರೂಪಾಂತರಗಳಲ್ಲಿ ನೀಡಲಾಗುತ್ತದೆ–4GB RAM ಮತ್ತು 128 GB ಸಂಗ್ರಹಣೆ; 6GB RAM ಮತ್ತು 128GB ಸಂಗ್ರಹಣೆ–ಇವು ಅಧಿಕೃತ ರಿಯಲ್‌ಮಿ ವೆಬ್‌ಸೈಟ್‌ನಲ್ಲಿ ಮತ್ತು ಆಫ್‌ಲೈನ್ ಚಿಲ್ಲರೆ ಅಂಗಡಿಗಳಿಂದ ಖರೀದಿಗೆ ಲಭ್ಯವಿದೆ.

ರಿಯಲ್ ಮಿ ಅ75 5G 6.67–ಇಂಚಿನ HD+ ಡಿಸ್ಪ್ಲೆಯೊಂದಿಗೆ 120Hz ರಿಫ್ರೆಶ್ ದರ ಮತ್ತು 625 nitsವರೆಗಿನ ಗರಿಷ್ಠ ಹೊಳಪಿನೊಂದಿಗೆ ದೊರಕುತ್ತದೆ. ಜೊತೆಗೆ ಸುಗಮ ಮತ್ತು ಪ್ರಕಾಶಮಾನವಾದ ವೀಕ್ಷಣೆಯ ಅನುಭವವನ್ನು ನೀಡುತ್ತದೆ. ಇದು 180Hz ಟಚ್ ಸ್ಯಾಂಪ್ಲಿಂಗ್ ದರವನ್ನು ಬೆಂಬಲಿಸುತ್ತದೆ. ಅಲ್ಲದೆ, ಗೇಮಿಂಗ್ ಮತ್ತು ವೇಗದ ಸಂವಹನಗಳಿಗೆ ಸೂಕ್ತವಾಗಿದೆ. ಛಾಯಾಗ್ರಹಣಕ್ಕಾಗಿ, ಹ್ಯಾಂಡ್‌ಸೆಟ್ AI–ಬೆಂಬಲಿತ ಕ್ಯಾಮೆರಾ ವ್ಯವಸ್ಥೆಯೊಂದಿಗೆ 32MP ಪ್ರಾಥಮಿಕ ಹಿಂಭಾಗದ ಸಂವೇದಕವನ್ನು ಹೊಂದಿದೆ. 8MP ಮುಂಭಾಗದ ಕ್ಯಾಮೆರಾವು ಸೆಲ್ಫಿಗಳು ಮತ್ತು ವೀಡಿಯೊ ಕರೆಗಳಿಗಾಗಿ ಸಜ್ಜುಗೊಂಡಿದೆ. ಅಂತರ್ನಿರ್ಮಿತ AI ಎಡಿಟಿಂಗ್ ಪರಿಕರಗಳಿಂದ ವರ್ಧಿಸಲ್ಪಟ್ಟಿದೆ.

ಇದರ ಗುರುತರ ವೈಶಿಷ್ಟ್ಯವೆಂದರೆ ಅದರ 6,000 mAh ಬ್ಯಾಟರಿ. ಇದು 45W SuperVOOC ವೇಗದ ಚಾರ್ಜಿಂಗ್, 5W ರಿವರ್ಸ್ ಚಾರ್ಜಿಂಗ್ ಅನ್ನು ಮತ್ತಷ್ಟು ಬೆಂಬಲಿಸುತ್ತದೆ.

ವಿದ್ಯುತ್ ಸರಬರಾಜಲ್ಲಿ ವ್ಯತ್ಯಯ

ಮೈಸೂರು, ಮೇ 7(ಎಂಕೆ)– ಮೈಸೂರಿನ ಕಡಕೋಳ, ಆಯರಹಳ್ಳಿ, ವಾಜಮಂಗಲ ಮಾರ್ಗದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಡೆಯುತ್ತಿರುವ ಹಿನ್ನಲೆಯಲ್ಲಿ ಮೇ 9, 11, 13, 15, 17 ಮತ್ತು 19 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ತುಮ್ಮನೇರಳೆ ಮತ್ತು ಹೊಸಪೇಟೆ, ಹದಿನಾರು, ಹದಿನಾರು ಮೋಳೆ, ಮೂಡಹಳ್ಳಿ, ಮಲ್ಲರಾಜನಹುಂಡಿ ಗ್ರಾಮ ಹಾಗೂ ಗ್ರಾಪಂ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಸದರಿ ದಿನಗಳಂದು ಆಯರಹಳ್ಳಿ(ಭರಣಿ, ವಾಟಾಳ್ ತೋಟ), ಮರಡೀಹುಂಡಿ (ನಂದಗುಂದಪುರ, ಮರಡೀಹುಂಡಿ, ಕುರಟ್ಟಿಕಾವಲ್, ನಾಗಲಿಂಗೇಶ್ವರ) ವಿದ್ಯುತ್ ಪ್ರಸರಣ ಕೇಂದ್ರದಿಂದ ಹೊರಹೊಮ್ಮುವ ಐಪಿ ಮಾರ್ಗಗಳಿಗೆ ರಾತ್ರಿ ವೇಳೆ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.


ಶತಾಯುಷಿ ಪುಟ್ಟಗೌರಮ್ಮ ನಿಧನ



ಮೈಸೂರು, ಮೇ7–ಮೈಸೂರು ಹೆಬ್ಬಾಳಿನ ನಿವಾಸಿ ಗೆರಸನಹಳ್ಳಿಯ ಶಿವಾರ್ಚಕರಾದ ಲೇಟ್ ಬಸಪ್ಪನವರ ಧರ್ಮಪತ್ನಿ ಶತಾಯುಷಿ ಪುಟ್ಟ ಗೌರಮ್ಮ(106) ಮಂಗಳವಾರ ನಿಧನರಾದರು.

ಮೃತರು ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಪುಟ್ಟಗೌರಮ್ಮ ನಿಧನಕ್ಕೆ ಗೆರಸನಹಳ್ಳಿಯ ಗ್ರಾಮಸ್ಥರು, ಸಂತಾಪ ಸೂಚಿಸಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಗೆರಸನಹಳ್ಳಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.05.2025 ಗುರುವಾರ, ಮಳೆ ನಕ್ಷತ್ರ: ಭರಣಿ 27.04.2025ರಿಂದ 10.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ–2025 ಮತ್ತು ರಾಜಗೋಪುರಕ್ಕೆ ಭೂಮಿಪೂಜೆ, ಬೆಳಗ್ಗೆ 9ಕ್ಕೆ ಚತುಸ್ಥಾನಾರ್ಚನೆ, ನಿತ್ಯಹೋಮ, ಅಷ್ಟಲಕ್ಷ್ಮಿ ಹೋಮ, ಡೋಲೋತ್ಸವ, ಸಂಜೆ 6ಕ್ಕೆ ರಾಮತಾರಕ ಹೋಮ, ಪಂಚಮುಖಿ ಹನುಮಾನ್ ಮಂತ್ರ ಹೋಮ, ಹನುಮಂತೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, 3ನೇ ಹಂತ, ಗೋಕುಲಂ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಸಮಾರೋಪ ಭಾಷಣ : ಗಾಂಧಿ ಸ್ಮಾರಕ ನಿಧಿ ನಿರ್ದೇಶಕ ಪ್ರೊ. ಜಿ.ಬಿ. ಶಿವರಾಜು, ಶಾಸಕ ಜಿ.ಡಿ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಚಲನಚಿತ್ರ ನಟಿ ಕು. ಅನುಷಾ ರೈ, ಅಧ್ಯಕ್ಷತೆ : ಕು. ನಿದಾ ತರನ್ನುಂ, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಡಾ. ಸಿ.ಕೆ. ರೇಣುಕಾರ್ಯ, ಡಾ. ಎಸ್.ಆರ್. ರಮೇಶ್, ಸ್ಥಳ: ಡಾ. ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.45ಕ್ಕೆ.

■ **ಮೈಸೂರು ವಿವಿ ಭೂ ವಿಜ್ಞಾನ ಅಧ್ಯಯನ ವಿಭಾಗ :** ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಮತ್ತು ಕುಲಸಚಿವರಾದ ಶ್ರೀಮತಿ ಸವಿತಾ ಅವರಿಂದ ರೀಚಾರ್ಜ್ ಬೋರ್‌ವೆಲ್ ಉದ್ಘಾಟನೆ, ಉಪಸ್ಥಿತರು : ಭೂ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಡಿ. ನಾಗರಾಜು, ಪ್ರೊ. ಬಿ.ವಿ. ಸುರೇಶ್‌ಕುಮಾರ್, ಸ್ಥಳ: ಭೂ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿವಿ, ಬೆಳಗ್ಗೆ 11ಕ್ಕೆ

■ **ಮೈಸೂರು ವಿವಿ, ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ ಮತ್ತು ರಾಚಪ್ಪಾಜಿ ಅಧ್ಯಯನ ಪೀಠ :** ವಿಶೇಷ ಉಪನ್ಯಾಸ ಕಾರ್ಯಕ್ರಮಗಳು, ಕನ್ನಡ ಜನಪದ ಮಹಾಕಾವ್ಯಗಳ ಸಂಕಥನಗಳು, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ.ಎನ್.ಕೆ.ಲೋಲಾಕ್ಷಿ, ಪ್ರೊ. ಕೇಶವಶರ್ಮ ಅವರಿಂದ ಉಪನ್ಯಾಸ, ಉಪಸ್ಥಿತರು: ಪ್ರೊ.ವಿಜಯಕುಮಾರಿ ಎಸ್.ಕರಿಕಲ್, ಪ್ರಸಾರಾಂಗ ನಿರ್ದೇಶಕ ಪ್ರೊ. ನಂಜಯ್ಯ ಹೊಂಗನೂರು, ನಾಗರಾಜು, ಸ್ಥಳ: ಸಮಿತಿ ಕೊಠಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮಾರೋಪ ಭಾಷಣ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಮುಖ್ಯ ಅತಿಥಿಗಳು : ವಿಶ್ರಾಂತ ಪ್ರಾಂಶುಪಾಲ ಪ್ರೊ. ಎಂ. ಕೃಷ್ಣೇಗೌಡ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಸನ್ಮಾನಿತರು : ಖೋ ಖೋ ವಿಶ್ವಕಪ್ ವಿಜೇತೆ ಕು. ಬಿ. ಚೈತ್ರ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಎಂ. ಪ್ರಭು, ಸ್ಥಳ: ಸುವರ್ಣ ಮಹೋತ್ಸವ ಸಭಾಂಗಣ, ಬೆಳಗ್ಗೆ 11ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಮಕ್ಕಳ ಲೋಕ :** ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ಉದ್ಘಾಟನೆ : ದೂರದರ್ಶನ ಕೇಂದ್ರದ ನಿವೃತ್ತ ಸುದ್ದಿ ಸಂಪಾದಕಿ ಶ್ರೀಮತಿ ಮೀನಾ ಮೈಸೂರು, ಮುಖ್ಯ ಅತಿಥಿಗಳು : ಪ್ರೊ. ಪ್ರಸನ್ನ ಕುಮಾರ್ ಕೆರಗೋಡು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಹಿರಿಯ ರಂಗಕರ್ಮಿ ಹೆಚ್. ಜನಾರ್ಧನ್, ಧ್ವನ್ಯಾಲೋಕ ಮುಖ್ಯಸ್ಥರಾದ ಪ್ರೊ. ಜಯಶ್ರೀ ಸಂಜಯ್, ಸ್ಥಳ: ಕಿರು ರಂಗಮಂದಿರ, ಕಲಾ ಮಂದಿರದ ಆವರಣ, ಸಂಜೆ 6ಕ್ಕೆ.

■ **ಕನ್ನಡ ಬೆಳಕು :** ಸುವರ್ಣ ಕರ್ನಾಟಕ ಸಂಭ್ರಮ–50, ಸಂಸ್ಮರಣಾ ಗ್ರಂಥ ಬಿಡುಗಡೆ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಗ್ರಂಥ ಬಿಡುಗಡೆ : ಸಾಹಿತಿ ಡಾ. ಅರವಿಂದ ಮಾಲಗತ್ತಿ, ಮುಖ್ಯ ಅತಿಥಿಗಳು : ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯಾ, ಗಾಂಧಿ ಭವನ ನಿವೃತ್ತ ನಿರ್ದೇಶಕ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಕಲಾಂದಿಕಾ ಭವನ, 8ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ– ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊಫೆಸರ್. ಸಿ. ನಾಗಣ್ಣ, ನಿರ್ಮಾಣ– ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಮಾಲತಿ ಶರ್ಮ, 8.30 ಯೋಗ ಕುರಿತ ವಿಶೇಷ ಸರಣಿ–ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಮಿಥುನ್ ರಾಧಾಕೃಷ್ಣ–ಮ್ಯಾಂಡೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ.ಶಾಂತಕುಮಾರ್ **ಮಧ್ಯಾಹ್ನ:** 12.35–ದೇವರನಾಮಭೀಮ್ ಸೇನ್ ಜೋಷಿ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಎನ್. ಹೇಮಾ, 2.40 ಕನ್ನಡ ಚಿತ್ರಗೀತೆಗಳು, 4.00 ಹಳ್ಳಿಹಾಡು, 4.30 ರಸಮಂಜರಿ, 6.50 ಕೃಷಿರಂಗ–ಕಿಸಾನ್ ವಾಣಿ – ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ, ಪರ್ಯಾಯ ಆರ್ಥಿಕತೆಗಾಗಿ ಪರಸ್ಪರ ಮಾರುಕಟ್ಟೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯದ ವಿಕಸನ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಸಂಸ್ಥೆಯ ನಿರ್ದೇಶಕರಾದ ಮಹೇಶ್ ಚಂದ್ರ ಗುರು ಹಾಗೂ ಸಂಯೋಜಕರಾದ ಕೆಂಪಯ್ಯ, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ– ಮಂಡ್ಯ ಜಿಲ್ಲೆ ಚಿನಕುರಳಿಯ ಎಸ್‌ಟಿಜಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ (ಭಾಗ – 2), 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ.ಎಸ್.ವಿಜಯ ರಾಘವನ್– ವೀಣಾ ವಾದನ, 10.00 ನಾಟಕ–ಪುರೂರವ, ಮೂಲ ರಂಗನಾಟಕ–ಕೆ.ದಾಸಪ್ಪ, ರೇಡಿಯೋ ರೂಪ ಹಾಗೂ ನಿರ್ದೇಶನ–ಪ್ರಭುಸ್ವಾಮಿ ಮಳಿಮಠ್, 10.30–ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 8 ಗುರುವಾರ 2025

ಸಂಪುಟ: 46 | ಸಂಚಿಕೆ: 22 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಪಹಲ್ಗಾಮ್ ಉಗ್ರರ ದಾಳಿಗೆ ಭಾರತದ ಪ್ರತೀಕಾರ
ಆಪರೇಷನ್ ಸಿಂಧೂರ್

ನಮ್ಮ ಸೇನೆ ಗುರಿ ಸಾಧಿಸಿದೆ



ನವದೆಹಲಿ: ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ್' ಯಾವುದೇ ದೋಷವಿಲ್ಲದೇ ಗುರಿ ತಲುಪಿದೆ ಎಂದು ಭಾರತೀಯ ಸಶಸ್ತ್ರ ಪಡೆಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಏ.22 ರಂದು ಪಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ಉಗ್ರರು ನಡೆಸಿದ ಹಿಂದೂಗಳ ನರಮೇಧದಲ್ಲಿ 26 ಜನರನ್ನು ಬಲಿ ತೆಗೆದುಕೊಂಡಿದ್ದರ ಪ್ರತೀಕಾರವಾಗಿ 'ಆಪರೇಷನ್ ಸಿಂಧೂರ್' ಹೆಸರಲ್ಲಿ ಭಾರತೀಯ ಸೇನೆ ■6ನೇ ಪುಟಕ್ಕೆ

●ಕೆಲವೇ ನಿಮಿಷದಲ್ಲಿ ಭಾರತೀಯ ವಾಯುಪಡೆಯಿಂದ 24 ಕ್ಷಿಪಣಿ ದಾಳಿ
●ಪಾಕ್, ಪಿಒಕೆಯಲ್ಲಿನ 9 ಉಗ್ರರ ನೆಲೆ ಉಡೀಸ್ ●ಉಗ್ರರ ಕುಟುಂಬವೂ ಸೇರಿದಂತೆ 80ಕ್ಕೂ ಅಧಿಕ ಉಗ್ರರು ಬಲಿ; ಅಂತ್ಯಕ್ರಿಯೆಯಲ್ಲಿ ಪಾಕ್ ಸೇನೆ ಭಾಗಿ



ಭಾರತದ ಕ್ಷಿಪಣಿ ದಾಳಿಯಿಂದ ದಿಕ್ಕೆಟ್ಟ ಉಗ್ರರು.



ಛಿದ್ರಗೊಂಡ ನೆಲೆಗಳ ಅವಶೇಷ ಮಧ್ಯೆ ಉಗ್ರರ ಸಂಬಂಧಿಗಳು.

ನವದೆಹಲಿ, ಮೇ7-ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ನಡೆದ **ಭಯೋತ್ಪಾದಕರ ದಾಳಿಗೆ ಭಾರತೀಯ ಸೇನೆ ಇಂದು ಮುಂಜಾನೆ ಉಗ್ರರ ನೆಲೆಗಳ ನಾಶ ಮಾಡಿ ಪ್ರತೀಕಾರ ತೀರಿಸಿಕೊಂಡಿದೆ.**

ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ)ದ 9 ಭಯೋತ್ಪಾದಕ ಶಿಬಿರಗಳ ಮೇಲೆ ನಿಖರವಾದ ಸರಣಿ ವಾಯುದಾಳಿ ನಡೆಸಿತು. ಭಾರತೀಯ ನಾಯಕರ ಪವಿತ್ರ ಸಿಂಧೂರ ಅಳಿಸಿದ ಉಗ್ರರ ಸಂಹರಿಸಲು 'ಆಪರೇಷನ್ ಸಿಂಧೂರ್' ದಾಳಿಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿ ಪಹಲ್ಗಾವ್‌ನಲ್ಲಿ ಉಗ್ರರ ದಾಳಿಗೆ ಬಲಿಯಾದವರ ಕುಟುಂಬಗಳು ನೆಮ್ಮದಿ ನಿಟ್ಟುಸಿರು ಬಿಡುವಂತೆ ಮಾಡಿದೆ.

ಮುಂಜಾನೆ 1.44 ಗಂಟೆಗೆ ಪಾಕ್ ಉಗ್ರರ ಅಡಗುತಾಣಗಳ ಮೇಲೆ ರಫೇಲ್ ಇನ್ನಿತರ ಫೈಟರ್‌ಜೆಟ್‌ಗಳಿಂದ ದಾಳಿ ನಡೆಸಿದ ಭಾರತೀಯ ಸೇನೆ, ಮುಂಜಾನೆ 2.07ರ ವೇಳೆಗೆ ಕಾರ್ಯಾಚರಣೆ ಮುಗಿಸಿತ್ತು. ದಾಳಿ ನಡೆಸಿದ ಬಳಿಕ ಭಾರತೀಯ ಸೇನೆಯ ಜೆಟ್‌ಗಳು ಸೇಫ್ ಆಗಿ ಮರಳಿವೆ. ಇನ್ನು ಈ ದಾಳಿಯಲ್ಲಿ 80ಕ್ಕೂ ಹೆಚ್ಚು ಉಗ್ರರು ಹತರಾಗಿದ್ದಾರೆ. ಜೊತೆಗೆ ಲಷ್ಕರ್ ಉಗ್ರರಿಗೆ ತರಬೇತಿ ನೀಡಿದ್ದ ಸುಬಾನಲ್ಲಾಹ್ ■6ನೇ ಪುಟಕ್ಕೆ

[ಹೆಚ್ಚಿನ ಸಚಿತ್ರ ವರದಿ ಪುಟ 5, 7]

'ಆಪರೇಷನ್ ಸಿಂಧೂರ್' ಈ ಹೆಸರೇ ಏಕೆ!?



ನವದೆಹಲಿ: ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿ 26 ಸಹೋದರಿಯರ ಕುಂಕುಮ ಅಳಿಸಿದ್ದಕ್ಕೆ ಭಾರತ, ಹಿಂದೂ ಸಂಸ್ಕೃತಿಯ ಪವಿತ್ರ 'ಸಿಂಧೂರ' ಸಂಕೇತವಾಗಿ ಪಾಕಿಸ್ತಾನದ ಉಗ್ರರ ನೆಲೆಗಳ ಮೇಲೆ 'ಆಪರೇಷನ್ ಸಿಂಧೂರ್' ಹೆಸರಿಂದ ಯಶಸ್ವಿ ದಾಳಿ ನಡೆಸಿದೆ.

ಪಹಲ್ಗಾಮ್‌ನಲ್ಲಿ ನಡೆದ ದಾಳಿಯಲ್ಲಿ ದಂಪತಿಗಳನ್ನೇ ಗುರಿಯಾಗಿಸಿ, ಅವರಲ್ಲಿ ಪುರುಷರನ್ನು ಕೊಂದು ಉಗ್ರರು ಅಟ್ಟಹಾಸ ಮೆರೆದಿದ್ದರು. ತಮ್ಮನ್ನು ಕೊಲ್ಲಿ ಎಂದ ಸಂತ್ರಸ್ತ ಮಹಿಳೆಯರಿಗೆ, ನಿಮ್ಮನ್ನ ಕೊಲ್ಲಲ್ಲ, ಹೋಗಿ ಮೋದಿಗೆ ಹೇಳಿ ಎಂದು ಹಲವು ಸಹೋದರಿಯರ ಕುಂಕುಮ ಅಳಿಸಿದ್ದರು. ಇಂತಹ ಮಹಿಳೆಯರ ಪ್ರತಿ ಕಣ್ಣೀರಿಗೂ ಲೆಕ್ಕ ನೀಡಲಾಗುವುದು ಎಂದು ಭಾರತ ಪ್ರತಿಜ್ಞೆ ಮಾಡಿತ್ತು. ಗುರುಗ್ರಾಮದ ಹಿಮಾಂಶಿ ನರ್ವಾಲ್ ಏಪ್ರಿಲ್ 16ರಂದು ವಿವಾಹ ಆಗಿದ್ದ ತಮ್ಮ ಪತಿ ಲೆಫ್ಟಿನೆಂಟ್ ವಿನಯ್ ಜೊತೆ ಹನಿಮೂನ್‌ಗೆ ಬಂದಿದ್ದರು. ಈ ವೇಳೆ ವಿನಯ್ ಅವರನ್ನು ಭೀಕರವಾಗಿ ಉಗ್ರರು ಕೊಂದು ಹಾಕಿದ್ದರು. ಜೈಪುರದ ಪ್ರಿಯಾಂಕಾ ಶರ್ಮಾ ಕೂಡ ಪತಿ ರೋಹಿತ್ ಜೊತೆ ಹನಿಮೂನ್‌ಗೆ ಬಂದು ಕುಂಕುಮ ಕಳೆದುಕೊಂಡಿದ್ದರು.

ಶಿಮ್ಲಾ ನಿವಾಸಿ ಅಂಜಲಿ ಠಾಕೂರ್ ಅವರು ತಮ್ಮ ಪತಿ ವಿವೇಕ್ ಠಾಕೂರ್ ಜೊತೆ ಪ್ರವಾಸಕ್ಕೆಂದು ತೆರಳಿದ್ದರು. ಅವರು ಸಹ ಏ.12ರಂದು ವಿವಾಹವಾಗಿದ್ದರು. ಉಗ್ರರ ದಾಳಿಗೆ ಪತಿಯನ್ನು ಕಳೆದುಕೊಂಡಿದ್ದರು. ಕರ್ನಾಟಕದ ಮಂಜುನಾಥರಾವ್ ಮತ್ತು ಭರತ್ ಭೂಷಣ್, ಉಗ್ರರ ದಾಳಿಯಲ್ಲಿ ಬಲಿಯಾಗಿದ್ದರು. ಮದುವೆಯಾಗಿ ವಾರವಾಗುವ ಮುನ್ನವೇ ಹಣೆಯ ಸಿಂಧೂರವನ್ನು ಪಾಪಿಗಳು ಅಳಿಸಿದ್ದರು. ಕಣ್ಣೆದುರೇ ಪತಿಯನ್ನು ಹತ್ಯೆಗೈದು ರಾಕ್ಷಸೀ ಕೃತ್ಯ ಎಸಗಿದ್ದರು. ಇದಕ್ಕೆ 'ಆಪರೇಷನ್ ಸಿಂಧೂರ್' ಹೆಸರಿನಡಿಯಲ್ಲಿ ಭಾರತ ಪ್ರತೀಕಾರ ತೀರಿಸಿದೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎನ್ನುವ ಸೂತ್ರದಡಿ ಆಪರೇಷನ್ ಸಿಂಧೂರಕ್ಕೆ ಭಾರತ ಚಾಲನೆ ನೀಡಿತ್ತು. ಇದರಂತೆ 'ಆಪರೇಷನ್ ಸಿಂಧೂರ್' ಹೆಸರಿನಲ್ಲಿ ಕಾರ್ಯಾಚರಣೆ ನಡೆಸಿ ಪಾಕಿಸ್ತಾನದ 9 ಉಗ್ರರ ನೆಲೆಗಳ ಮೇಲೆ ಯಶಸ್ವಿಯಾಗಿ ದಾಳಿ ನಡೆಸಿದೆ.

ನಕ್ಕರೆ ಅದೇ ಸ್ವರ್ಗ

ಹುಡುಗಿ : ಒಂದು ಕವನ ಹೇಳು ಪ್ಲೀಸ್
ಹುಡುಗ : ನಿನ್ನ ನೋಡಿದಾಗ ನಾ ನನ್ನ ಮರೆತೆ...
ಹುಡುಗಿ : ವಾಹ್... ಸೂಪರ್... ಆಮೇಲೆ?
ಹುಡುಗ : ನಿನ್ನ ತಂಗಿಯನ್ನು ನೋಡಿದ್ಮೇಲೆ ನಿನ್ನನ್ನೇ ಮರೆತೇ...!

ಮೈಸೂರು ಮಿತ್ರ
ಗುರುವಾರ, 8 ಮೇ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕೋಪದಲ್ಲಿ ಒಂದು ಕ್ಷಣ ತಾಳ್ಮೆ ವಹಿಸಿದರೆ ಸಾಕು ಅದು ದುಃಖದ ನೂರು ದಿನಗಳಿಂದ ನಿಮ್ಮನ್ನು ಪಾರು ಮಾಡುತ್ತದೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಕೆ ಇಲ್ಲದ ಕುದುರೆ ಅಂಗಳ ಹಾರಿತು

ನಿಮ್ಮ ಪತ್ರಗಳು

■ ಮೈಸೂರಿನ ಪ್ರೀಮಿಯರ್ ಸ್ಟುಡಿಯೋ ಸಮೀಪ ಸ್ವಚ್ಛತೆ ಕಾಪಾಡಿ

ಮಾನ್ಯರೇ,



ಮೈಸೂರು ನಗರ ವಿಶಾಲವಾದ, ಮರ–ಗಿಡಗಳಿಂದ ವೈಭವಿಸುತ್ತಿರುವ ಪ್ರದೇಶ. ಆದರೇನು, ಮೈಸೂರಿನ ಪ್ರೀಮಿಯರ್ ಸ್ಟುಡಿಯೋ ಸಮೀಪದ ಖಾಲಿ ಸ್ಥಳದಲ್ಲಿ ನಿವಾಸಿಗಳು ಕಸ–ಕಡ್ಡಿ, ತಿಂದುಳಿದ ಆಹಾರ, ಹಳೆ ಬಟ್ಟೆ ಹೀಗೇ ಕೆಲಸಕ್ಕೆ ಬಾರದ ಎಲ್ಲಾ ವಸ್ತುಗಳನ್ನು ರಸ್ತೆಯ ಪಕ್ಕದಲ್ಲೇ ಬಿಸಾಡಿ ಹೋಗುತ್ತಿರುವುದು ಸಾಮಾನ್ಯವಾಗಿ ಬಿಟ್ಟಿದೆ. ಇಂತಹ ಹೊಲಸು ಪದಾರ್ಥಗಳನ್ನು ವ್ಯವಸ್ಥಿತವಾಗಿ ಕಸದ ಬುಟ್ಟಿಯಲ್ಲಿ ಹಾಕುವ ವ್ಯವಸ್ಥೆಯೂ ಇಲ್ಲದೇ, ಕಂಡ ಕಂಡಲ್ಲಿ ಬಿಸಾಡುವುದರಿಂದ ಹಂದಿ, ನಾಯಿಗಳು ರಸ್ತೆ ಮಧ್ಯೆ ಎಳೆ ತಂದು ತಿರುಗಾಡಲೂ ಆಗದಂತಾಗುತ್ತದೆ. ಬೆಳಿಗ್ಗೆ, ಸಂಜೆ ವಾಯುವಿಹಾರಕ್ಕೆ ತೆರಳಿದಾಗಲಂತೂ ಗಬ್ಬು ವಾಸನೆಯನ್ನೇ ಆಸ್ವಾದಿಸುತ್ತ ಅಥವಾ ಮೂಗು ಮುಚ್ಚಿಕೊಂಡು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಇಷ್ಟೇ ಸಾಲದು ಎಂಬಂತೆ ಹೊಲಸು ನೀರು ಸದಾ ನಿಂತೇ ಇರುವುದರಿಂದ ಸೊಳ್ಳೆಗಳ ಉಗಮ ಸ್ಥಾನವೂ ಆಗಿದೆ. ಮೈಸೂರು ಅಂದರೆ, ಸ್ವಚ್ಛ, ಸುಂದರ, ಉತ್ತಮ ಹವಾಮಾನದಿಂದ ಕೂಡಿದ್ದು 'ಸ್ಮಾರ್ಟ್ ಸಿಟಿ' ಆಗುವ ಎಲ್ಲ ಅರ್ಹತೆಗಳಿದೆ ಎಂದು ಅಂದುಕೊಂಡವರಿಗೆ ಒಮ್ಮೆ ಈ ಪ್ರದೇಶದ ಸುತ್ತ ಕಣ್ಣಾಡಿಸಿದರೆ ವಾಸ್ತವದ ಅರಿವಾಗುತ್ತದೆ.

ಹೇಳಲಿಕ್ಕೇನೋ ನಗರ ಪಾಲಿಕೆ. ಆದರೆ ಇಂತಹ ಮುಖ್ಯ ಸ್ಥಳಗಳಲ್ಲೇ ಇಷ್ಟೊಂದು ಗಲೀಜು ವಾತಾವರಣ ಸರಿಪಡಿಸಲು ಸಾಧ್ಯವಾಗುತ್ತಿಲ್ಲವೇ? ಕೆಲವೊಮ್ಮೆ ನಗರ ಪಾಲಿಕೆಯ ವಾಹನ ಅಡ್ಡಾಡುವುದನ್ನೂ ಕಾಣುತ್ತೇವೆ. ಆದರೆ ಅದು ಕೆಲವಷ್ಟನ್ನೇ ಎತ್ತಿಕೊಂಡು ಹೋಗಿ ಉಳಿದವನ್ನು ಅಲ್ಲೇ ಹಾಗೇ ಬಿಟ್ಟು ಹೋಗುವುದೂ ಸಾಮಾನ್ಯ.

ನಗರವನ್ನು ಸ್ವಚ್ಛವಾಗಿರಿಸಬೇಕೆಂಬ ಸಾಮಾನ್ಯ ತಿಳುವಳಿಕೆಯೂ ಇಲ್ಲದಂತಾಯಿತೆ? ಇದೇನು ಅಂತಹ ಕಷ್ಟದ ಕೆಲಸವೂ ಅಲ್ಲ. ದೊಡ್ಡದೊಂದು ಕಸದ ಡಬ್ಬ ಇಟ್ಟು, ಕಸಗಳನ್ನೆಲ್ಲ ಅದರ ಒಳಗೇ ಹಾಕುವಂತಾದರೆ ಎತ್ತಿಕೊಂಡು ಹೋಗಲೂ ಅನುಕೂಲ. ಹಳೆಯದನ್ನು ಎತ್ತಿಕೊಂಡು, ಇನ್ನೊಂದು ಡಬ್ಬ ಇಟ್ಟು ಹೋದರೆ ಎಲ್ಲವೂ ಸಲೀಸಾಗಿ ಸಾಗಬಹುದಲ್ಲವೇ? ಇಷ್ಟು ಮಾಡುವ ಇಚ್ಛಾಶಕ್ತಿಯೂ ನಗರಪಾಲಿಕೆಗೆ ಇಲ್ಲದೇ ಹೋಯಿತೆ? ಈ ಒಂದು ಸಣ್ಣ ಕೆಲಸ ನಡೆದರೆ, ನಗರದ ನಕ್ಷೆಯೇ ಬದಲಾಗಿ ಸುಂದರವಾಗಿ ಕಂಗೊಳಿಸುವುದರಲ್ಲಿ ಅನುಮಾನವೇ ಇರದು !

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು

■ ನಿಷೇಧ ಕೇವಲ ಔಪಚಾರಿಕ

ಮಾನ್ಯರೆ,

ಬೆಂಗಳೂರಿನಲ್ಲಿ ನಡೆದ ಕನ್ನಡ ಕಾರ್ಯಕ್ರಮವೊಂದರಲ್ಲಿ ಅಭಿಮಾನಿಯೊಬ್ಬರು ಕನ್ನಡ, ಕನ್ನಡ ಎಂದು ಕನ್ನಡ ಹಾಡಿಗಾಗಿ ಒತ್ತಾಯಿಸಿದಾಗ ಬಾಲಿವುಡ್ ಗಾಯಕ ಸೋನು ನಿಗಮ್ 'ಇದರಿಂದಲೇ ಪಹಲ್ಗಾಮ್ ಘಟನೆ ಆಗಿರುವುದು' ಎಂದು ಸಿಡುಕಿನಿಂದ ಹೇಳಿ ಕನ್ನಡಿಗರ ಸಿಟ್ಟಿಗೆ ಗುರಿಯಾಗಿದ್ದರು. ಅನಂತರ ಕ್ಷಮೆ ಕೋರುವ ಬದಲು ಆತ ಕನ್ನಡ, ಕನ್ನಡ ಎಂದು ಜೋರಾಗಿ ಅರಚಿಕೊಂಡ. ಅದಕ್ಕೆ ನನಗೆ ಸಿಟ್ಟು ಬಂತು ಎಂದು ಸಮಜಾಯಿಷಿ ಕೊಡಲು ಹೋಗಿ ಮತ್ತಷ್ಟು ಸಿಟ್ಟಿಗೆ ಗುರಿಯಾಗಿದ್ದರು. ಇದರಿಂದ ಈತನಿಗೆ ಕನ್ನಡ ಚಿತ್ರರಂಗ ನಿಷೇಧ ಹೇರಬೇಕು ಎಂಬ ಕೂಗು ಜೋರಾಗಿತ್ತು. ಕೊನೆಗೂ ಕನ್ನಡ ಚಿತ್ರರಂಗದಿಂದ ನಿಷೇಧ ಘೋಷಣೆಯಾಗಿತ್ತು. ಇದರ ಬೆನ್ನಲ್ಲೇ ಸೋನು ನಿಗಮ್, 'ಸಾರಿ ಕನ್ನಡ' ನಿಮ್ಮ ಮೇಲಿನ ಪ್ರೀತಿ ಅಹಂಗಿಂತ ದೊಡ್ಡದು ಎಂದು ತೇಪೆ ಹಾಕುವ ಸಮಜಾಯಿಷಿ ನೀಡಿದ್ದಾರೆ.

ಸೋನು ನಿಗಮ್‌ಗೆ ಈಗ ನಿಷೇಧ ಹೇರಿದರೆ ಅದರಿಂದ ಆತನಿಗೆ ಹೆಚ್ಚಿನ ನಷ್ಟವೇನೂ ಅಗಲಾರದು. ಏಕೆಂದರೆ ಕಳೆದ 15– 20 ವರ್ಷದಿಂದ ಕನ್ನಡ ಚಿತ್ರರಂಗದಿಂದ ಎಷ್ಟು ಸಾಧ್ಯವೊ ಅಷ್ಟು ಹಣ, ಹೆಸರು ಎಲ್ಲವನ್ನೂ ಗಳಿಸಿ ಎತ್ತರಕ್ಕೆ ಬೆಳೆದೂ ಆಗಿದೆ. ನಿಷೇಧ ಕೇವಲ ಔಪಚಾರಿಕವಷ್ಟೇ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಸಚಿವ ಜಮೀರ್ ಅಹಮದ್ ಮಾತಿಗೆ ಬೆಲೆ ಇದೆಯೇ?

ಮಾನ್ಯರೆ,

ವಸತಿ ಸಚಿವ ಜಮೀರ್ ಅಹಮದ್ ಖಾನ್ ನಾನು ದೇಶಕ್ಕೋಸ್ಕರ ಸೂಸೈಡ್ ಬಾಂಬರ್ ಆಗಿ ಪಾಕಿಸ್ತಾನದ ಮೇಲೆ ಯುದ್ಧ ಮಾಡಲು ಹೋಗುತ್ತೇನೆ. ಇದಕ್ಕೆ ಪ್ರಧಾನ ಮಂತ್ರಿಯವರು ನನಗೆ ಅನುಮತಿ ನೀಡಬೇಕು ಎಂದು ಮಾಧ್ಯಮಗಳ ಮುಂದೆ ವೀರಾವೇಶದಿಂದ ಮಾತನಾಡಿದ್ದಾರೆ.

ಮಂತ್ರಿಗಳ ಈ ಮಾತನ್ನು ಕೇಳಿ ವಿಚಿತ್ರ ಎನಿಸುತ್ತದೆ. ಯುದ್ಧಕ್ಕೆ ಹೋಗಲು ಇವರೇನು ಸೈನಿಕರೇ, ಇದು ಯಾರೋ ಬೀದಿಯಲ್ಲಿ ಹೋಗುವವರು ಮಾತನಾಡಿದಂತೆ ಇದೆ. ಕೇವಲ ಪ್ರಚಾರಕ್ಕಾಗಿ ಈ ರೀತಿ ಮಾತನಾಡಿದರೆ ಇವರಿಗೆ ಗೌರವ ಇರುತ್ತದೆಯೇ? ಮಾಧ್ಯಮಗಳು ಸಹ ಇಂತಹ ಹೇಳಿಕೆಗಳನ್ನು ವರ್ಣರಂಜಿತವಾಗಿ ಹೇಳುವುದು. ಅವರಿಗೆ ಮತ್ತಷ್ಟು ಪ್ರಚಾರ ಸಿಗುತ್ತದೆ. ಪ್ರಚಾರಕ್ಕಾಗಿಯೇ ಕೆಲವರು ಮಾತನಾಡುತ್ತಾರೆ.

ಹಿಂದೊಮ್ಮೆ, ಯಡಿಯೂರಪ್ಪ ಅವರು ಸಿಎಂ ಆದರೆ ನಾನು ಅವರ ಮನೆಯ ವಾಚ್‌ಮ್ಯಾನ್ ಆಗಿ ಕೆಲಸ ಮಾಡುತ್ತೇನೆ ಎಂದು ಮಾಧ್ಯಮಗಳ ಮುಂದೆ ಹೇಳಿದ್ದರು. ಯಡಿಯೂರಪ್ಪ ಅವರು ಸಿಎಂ ಆದರೂ ಇವರು ಅವರ ಮನೆಯ ವಾಚ್‌ಮ್ಯಾನ್ ಆಗಲಿಲ್ಲ. ಬಿಜೆಪಿಗೆ ಬಹುಮತ ಬಂದು ಅವರು ಸಿಎಂ ಆಗಲಿಲ್ಲ ಎಂದು ಉಲ್ಟಾ ಹೊಡೆದರು. ಇವರ ಮಾತಿಗೆ ಏನಾದರೂ ಬೆಲೆ ಇದೆಯಾ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ಆಡು ಆಟ ಆಡು; ಆಡಿ ನೋಡು...

ಬೇಸಿಗೆ ಅಂದ ತಕ್ಷಣ ನಮಗೆ ಆಟದ ಗುಂಗು ಹತ್ತಿಬಿಡುತ್ತದೆ. ಬೇಸಿಗೆ ರಜೆ ಬರುವುದೇ ಕುಣಿದು ಕುಪ್ಪಳಿಸುವುದಕ್ಕೆ ಎಂಬುದು ಅಲಿಖಿತ ನಿಯಮ. ಶಾಲೆಯ ಜಂಜಡಗಳೆಲ್ಲಾ ಕಳೆದು ಪೂರ್ಣಾವಧಿಯ ಆಟಗಾರರಾಗಬೇಕೆಂದು ಮಕ್ಕಳು ಕಾದು ಕುಳಿತಿರುತ್ತಾರೆ.

ಆಟ ಎನ್ನುವ ಪದವೇ ಆಕರ್ಷಣೀಯ. ದೊಡ್ಡ–ಚಿಕ್ಕವರಿಗೆ ಎಲ್ಲರಿಗೂ! ಪ್ರಾಣಿ ಪಕ್ಷಿಗಳಿಗೂ ಆಟವೆಂದರೆ ಪ್ರಾಣ, ನಮಗೂ ಅವುಗಳ ಚಿನ್ನಾಟ ಮುದ್ದು! ಆಟ ಕೇವಲ ಮನರಂಜನೆಯೋ ಸಮಯ ಕಳೆಯಲೋ ಪಾಲ್ಗೊಳ್ಳುವ ನೀರಸ ಚಟುವಟಿಕೆಯಲ್ಲ ಎಂಬುದು ನಮಗೆಲ್ಲರಿಗೂ ಗೊತ್ತು. ಆಟ, ಆಡುವವರ ದೈಹಿಕ, ಮಾನಸಿಕ, ಬೌದ್ಧಿಕ, ತಾರ್ಕಿಕ, ತಾತ್ವಿಕ, ಸಾಮಾಜಿಕ, ತಾಂತ್ರಿಕ, ವೈಜ್ಞಾನಿಕ ಕುಶಲತೆಗಳನ್ನು ನಿಕಷಕ್ಕೆ ಒಡ್ಡಿ ಆಡುವವರ ವ್ಯಕ್ತಿತ್ವಕ್ಕೆ ಸವಾಲೆಸೆದು ಆಟಗಾರರನ್ನು ಆತ್ಮವಿಶ್ವಾಸದಿಂದ ಕಂಗೊಳಿಸುವಂತೆ ಮಾಡುತ್ತದೆ.

ಏನೋ ಆಟ ಆಡಿಕೊಳ್ತಾರೆ ಎಂದು ಆಟವನ್ನು ನಿಕೃಷ್ಟವಾಗಿ ನಾವು ನೋಡುವ ಹಾಗಿಲ್ಲ! ಮಹಾಭಾರತ ಯುದ್ಧಕ್ಕೆ ನಾಂದಿ ಪಗಡೆ ಆಟವೇ! ಅಲ್ಲವೇ?

ಯಾರೋ ಪೆನ್ನು ಪೇಪರ್‌ಗಳನ್ನು ಹಿಡಿದು ಆಟಗಳನ್ನು ರೂಪಿಸಿದ್ದಲ್ಲ. ಇಂದು ನೀವು ಪ್ರಪಂಚದ ಯಾವುದೇ ಮೂಲೆಗೆ ಹೋದರೂ ಅಲ್ಲೊಂದು ವಿಶಿಷ್ಟವಾದ ಆಟ ನಿಮ್ಮನ್ನು ಬೆರಗುಗೊಳಿಸಲು ಕಾದಿದ್ದರೆ, ನಾವು ರೂಢಿಸಿಕೊಂಡಿರುವ ಎಷ್ಟೋ ಆಟಗಳನ್ನು ನೀವು ಪ್ರಪಂಚದ ಮತ್ತೊಂದು ದಿಕ್ಕಿನಲ್ಲಿ ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಯಾರೋ ಆಡುವುದನ್ನು ಕಾಣುತ್ತೀರಿ.

ಹಾಗಾದರೆ ಈ ಆಟಗಳ ಸೃಷ್ಟಿ ಹೇಗೆ ಎಂದು ತಲೆಕೆಡಿಸಿಕೊಂಡರೆ ಉತ್ತರ ನಮ್ಮಲ್ಲೇ ಇದೆ. ಮಾನವನ ವಿಕಾಸದೊಂದಿಗೇ ಆಟಗಳೂ ವಿಕಾಸವಾದವು ಎಂಬುದು ಸರಳ ಸತ್ಯ? ಮನುಷ್ಯನ ವರ್ಣತಂತುವಿನಲ್ಲಿಯೇ ಕುತೂಹಲ, ಸಂಶೋಧನೆ, ಆವಿಷ್ಕಾರಗಳಿಗೆ ವಿಶೇಷವಾದ ಒಂದು ಎಳೆ ಇದೆ ಎಂದರೆ ತಪ್ಪಾಗಲಾರದು. ಏನೋ ಹೊಸತನ್ನು ಹುಡುಕುವುದಕ್ಕೆ ತಲೆ ಎಷ್ಟು ಕೆಡಿಸಿಕೊಳ್ಳುತ್ತಾನೋ ಹಾಗೆಯೇ ನೆಮ್ಮದಿಯಾಗಿ, ಸಂತೋಷವಾಗಿ ಏನೂ ಮಾಡದೆ ಕಾಲ ಕಳೆಯುವುದಕ್ಕೂ ಅಷ್ಟೇ ತಲೆಕೆಡಿಸಿಕೊಂಡು ಏನನ್ನೋ ಕಂಡುಹಿಡಿಯುತ್ತಾನೆ! ಹಾಗೆ ಆವಿಷ್ಕಾರವಾದವುಗಳೇ ಈ ಆಟ ಇಲ್ಲವೇ ಕ್ರೀಡೆಗಳು.

ಮನುಷ್ಯ ತಾನಿರುವ ಪರಿಸರದಲ್ಲೇ ಹೊಂದಿಕೆಯಾಗುವ ಹಾಗೆ, ಅಲ್ಲಿ ದೊರೆಯುವ ಪರಿಕರ ಸಾಧನಗಳನ್ನೇ ಬಳಸಿಕೊಂಡು ವಿವಿಧ ಆಟಗಳನ್ನು ಆಡಲು ರೂಢಿಸಿಕೊಂಡ. ನಾಗರಿಕತೆ ಬೆಳೆದಂತೆ ಆಟಗಳೂ ವೈವಿಧ್ಯಮಯವಾದವು. ಪ್ರಾಚೀನ ಕಾಲಕ್ಕೆ ಹೋದರೆ, ಅಲ್ಲಿ ಬೇಟೆ, ಈಜು, ಓಟ, ಕುದುರೆ ಸವಾರಿಯಂತಹ ಆಟಗಳಿದ್ದರೆ, ಸ್ವಲ್ಪ ಕಾಲದ ನಂತರ, ರಥಗಳ ಓಟ, ಬಿಲ್ಗಾರಿಕೆ, ಭರ್ಜಿ ಎಸೆಯುವಿಕೆ, ಹಗ್ಗ ಜಗ್ಗಾಟ, ದೋಣಿ ನಡೆಸುವುದು, ಕುಸ್ತಿ–ಮಲ್ಲಯುದ್ಧ, ಕತ್ತಿವರಸೆಯಂತಹವು ಮುನ್ನೆಲೆಗೆ ಬಂದವು. ಪ್ರಾಚೀನ ಗ್ರೀಸಿನಲ್ಲಿ ನಡೆಯುತ್ತಿದ್ದ ಒಲಿಂಪಿಕ್ಸ್‌ನಲ್ಲಿ ಈ ಪಂದ್ಯಗಳೇ ವಿಜೇತರಿಗೆ ಅಪೂರ್ವ ಗೌರವವನ್ನು ತಂದುಕೊಡುತ್ತಿದ್ದುದು. ರಾಮಾಯಣ, ಮಹಾಭಾರತ ಮತ್ತಿತರ ಪುರಾಣ ಕಥೆಗಳಲ್ಲಿ ರಾಜಕುಮಾರರ ನಡುವೆ ಏರ್ಪಡುವ ಪಂದ್ಯಗಳೆಲ್ಲಾ ಇವೇ ಅಲ್ಲವೇ?

ಆಧುನಿಕ ಕಾಲದಲ್ಲಿ ಆಟಗಳ ಚಹರೆಯೇ ಬದಲಾಯಿತು. ಅದುವರೆಗೂ ಅಗತ್ಯಗಳಿಗೆ ಬೇಕಾಗಿದ್ದ ಕೌಶಲಗಳನ್ನೇ, ಬಿಡುವಿನ ವೇಳೆಯಲ್ಲಿ ಆಟದಂತೆ ಆಡುತ್ತಿದ್ದ ಪರಿಪಾಠ ಬದಲಾಗಿ Game for games sake? ಎನ್ನುವಂತೆ ತರಾವರಿ ಆಟಗಳ ಆವಿಷ್ಕಾರವಾಯಿತು. ಅದಕ್ಕಾಗಿ ವಿಶೇಷವಾಗಿ ಪರಿಕರಗಳು ತಯಾರಾಗತೊಡಗಿದವು. ಈ ಪೋಸ್ಟ್ ಮಾರ್ಡನ್ ಯುಗದಲ್ಲಿ ವಿಡಿಯೋ ಗೇಮ್‌ಗಳಿಂದ ಪ್ರಾರಂಭವಾಗಿ, ಕಂಪ್ಯೂಟರ್ ಗೇಮ್‌ಗಳು, ವರ್ಚುವಲ್ ಗೇಮ್‌ಗಳು, ಕನ್ಸೋಲ್ ಗೇಮ್‌ಗಳು ಎಂದೆಲ್ಲಾ ಹುಬ್ಬು ಮೇಲೇರುವಷ್ಟು ವೈವಿಧ್ಯಮಯವಾದ ಗೇಮ್‌ಗಳು ಸೃಷ್ಟಿಯಾದವು. ಎಐ ಬಂದ ಮೇಲಂತೂ ಇನ್ನು ಏನೇನಿದೆಯೋ ಭವಿಷ್ಯದ ಗರ್ಭದಲ್ಲಿ ಎಂದು ಕಾಯುವಂತಾಗಿದೆ.

ಒಂದು ಅಂದಾಜಿನ ಪ್ರಕಾರ ವಿಶ್ವದಲ್ಲಿ 8 ಸಾವಿರಕ್ಕೂ ಹೆಚ್ಚು ದೈಹಿಕವಾಗಿ ನಾವು ಭಾಗವಹಿಸಿ ಆಡುವ ಆಟಗಳಿದ್ದರೆ, 5 ಮಿಲಿಯನ್‌ಗಿಂತಲೂ ಹೆಚ್ಚು ವಿಡಿಯೋ ಕಂಪ್ಯೂಟರ್ ಗೇಮ್‌ಗಳು ಇವೆ. ಇದು ಅಂದಾಜಷ್ಟೇ! ಪ್ಯಾರಿಸ್‌ನಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ 32 ಪ್ರಕಾರದ ಆಟಗಳನ್ನು ಆಡಿಸಲಾಗಿತ್ತು. ಲಾಸ್ ಏಂಜಲ್ಸ್‌ನಲ್ಲಿ ನಡೆಯುವ ಒಲಿಂಪಿಕ್ಸ್‌ನಲ್ಲಿ ಇನ್ನೂ 22 ಆಟಗಳ ಸೇರ್ಪಡೆಯಾಗಲಿದೆ.

ಕ್ರಿಕೆಟ್ ಇಂದು ಕ್ರೀಡೆಗಳ ರಾಜನೆನಿಸಿಬಿಟ್ಟಿದೆ. ಸಣ್ಣ ಹಳ್ಳಿಯಿಂದ ಹಿಡಿದು, ದೊಡ್ಡ ದೊಡ್ಡ ನಗರಗಳಲ್ಲೂ ಕ್ರಿಕೆಟ್‌ನ ಫ್ಯಾನ್‌ಗಳಿದ್ದಾರೆ. 1983ರಲ್ಲಿ ಭಾರತ ಕ್ರಿಕೆಟ್ ವಿಶ್ವಕಪ್ ಅನ್ನು ಜಯಿಸಿದ ಮೇಲೆ ಏರಿದ ಕ್ರಿಕೆಟ್ ಜ್ವರ ಇನ್ನೂ ಇಳಿದಿಲ್ಲ. ಇಳಿಯುವ ಲಕ್ಷಣಗಳೂ ಇಲ್ಲ! ಟಿ20 ಕ್ರಿಕೆಟ್ ಅಂತೂ ಎಲ್ಲರಿಗೂ ಹುಚ್ಚು ಹಿಡಿಸಿಬಿಟ್ಟಿದೆ.


ಇನ್ನು ಫುಟ್‌ಬಾಲ್‌ನ ರೊನಾಲ್ಡೋ, ಮೆಸ್ಸಿ ಫ್ಯಾನ್‌ಗಳು ಕ್ರಿಕೆಟ್ ಅನ್ನು ನೀರಸ ಆಟ ಎನ್ನುತ್ತಾರೆ! ಫುಟ್‌ಬಾಲ್‌ನ ರೋಚಕತೆ ಕ್ರಿಕೆಟ್‌ಗೆಲ್ಲಿದೆ ಎನ್ನುತ್ತಾರೆ!

ಟೆನ್ನಿಸ್, ಬ್ಯಾಡ್ಮಿಂಟನ್, ಹಾಕಿ, ಅಥ್ಲೆಟಿಕ್ಸ್ ಎಲ್ಲವಕ್ಕೂ ಅವುಗಳದ್ದೇ ಆದ ಫ್ಯಾನ್ ಬೇಸ್ ಇದ್ದು ಆ ಆಟಗಳನ್ನು ಮನಸಾ ಪ್ರೀತಿಸಿ ಆರಾಧಿಸುತ್ತಾರೆ.

ಈಗಿನ ಕಾಲದ ಕಂಪ್ಯೂಟರ್ ಮೊಬೈಲ್ ಗೇಮ್‌ಗಳಿಗೆ ದಾಸರಾಗಿರುವ ಬಹುತೇಕ ಮಕ್ಕಳನ್ನು ಈ ಎಲ್ಲ ಆಟಗಳನ್ನು ಆಡಿ ಎಂದು ಹೊರದಬ್ಬುವುದೇ ಪೋಷಕರಿಗೆ ಸವಾಲಾಗಿಬಿಟ್ಟಿದೆ. ಅಂದು ಮಕ್ಕಳನ್ನು ಒಳ ಕರೆತರುವುದು ಸವಾಲಾಗಿದ್ದರೆ ಇಂದು ಮಕ್ಕಳನ್ನು ಆಡಲು ಹೊರದಬ್ಬುವುದೇ ಒಂದು ಸಾಹಸವಾಗಿಬಿಟ್ಟಿದೆ. ಆದರೆ ಕಾಲವೂ ಬದಲಾಗಿದೆ. ಹಾಗಾಗಿ ಇಲ್ಲಿ ಸರಿ ತಪ್ಪುಗಳ ಪರಾಮರ್ಶೆ ಮಾಡುವುದು ಬಹಳ ಸೂಕ್ಷ್ಮತೆ ಬೇಡುವ ವಿಚಾರವಾಗಿದೆ. ಅದನ್ನು ಮತ್ತೊಮ್ಮೆ ಚರ್ಚಿಸಿದರಾಯಿತು. ಈಗ ಉದ್ಯಮವೆನಿಸಿ, ನಿಧಾನವಾಗಿ ಚಟವಾಗಿ ಪರಿವರ್ತಿತವಾಗುತ್ತಿರುವ ಈ ಗೇಮ್‌ಗಳು ನಮ್ಮ ಮಕ್ಕಳ ಬಾಲ್ಯವನ್ನು ಕಸಿಯದಿದ್ದರೆ ಅಷ್ಟೇ ಸಾಕು.

ಮೊದಲೇ ಹೇಳಿದ ಹಾಗೆ, ಆಟಗಳು ವಿಕಾಸವಾಗಿದ್ದು ಮನುಷ್ಯನ ಜೀವನಶೈಲಿಯ ಮೇಲೆ, ಬೇಟೆ, ಯುದ್ಧ ಎಂದೆಲ್ಲಾ ಅಸ್ತಿತ್ವಕ್ಕಾಗಿ ಹೋರಾಡುತ್ತಿದ್ದ ಆ ಕಾಲದಲ್ಲಿ, ಮರಕೋತಿ, ಕಬಡ್ಡಿ, ಹಗ್ಗ ಜಗ್ಗಾಟ, ಕುಸ್ತಿ, ಬಿಲ್ಗಾರಿಕೆ ಎಲ್ಲ ದೈನಂದಿನ ಬದುಕಿನ ಭಾಗವೇ ಆಗಿದ್ದವು. ನಿಧಾನಕ್ಕೆ ಕೇವಲ ಆಟಗಳಾಗಿ ಮಾತ್ರ ಉಳಿದವು. ಈಗ ಬಿಲ್ಲು–ಬಾಣಗಳು, ಈಟಿ–ಭರ್ಜಿಗಳನ್ನು ನಾವು ಬಳಸದಿದ್ದರೂ ಅವು ಒಲಿಂಪಿಕ್ಸ್‌ನಂತಹ ಬೃಹತ್ ಜಾಗತಿಕ ಕ್ರೀಡಾ ಉತ್ಸವದಲ್ಲಿ ಜಾಗ ಪಡೆದಿವೆ.

ಈ ಆಧುನಿಕ ಆಟಗಳ ನಡುವೆ ನಾವು ನೆಲ ಮೂಲದ ನೂರಾರು ಆಟಗಳನ್ನು ಮರೆತೇ ಬಿಟ್ಟಿದ್ದೇವೆ. ನಾವು ಆಡುತ್ತಿದ್ದ ಎಷ್ಟೋ ಆಟಗಳನ್ನು ಇಂದು ನಮ್ಮ ಮಕ್ಕಳು ಆಡುತ್ತಿಲ್ಲ. ಒಂದೋ ನಾವೇ ಅವರಿಗೆ ಪರಿಚಯಿಸಿಲ್ಲ ಅಥವಾ ಈಗಿನ ಮಕ್ಕಳಿಗೆ ಅವುಗಳು ಸ್ವಾರಸ್ಯಕರ ಎನಿಸಿಲ್ಲ. ನಮ್ಮ ಗ್ರಾಮೀಣ ಆಟಗಳು ಅವೆಷ್ಟಿದ್ದಾವೆ!! ನಮ್ಮ ಜನಪದ ಅಥವಾ ಗ್ರಾಮೀಣ ಆಟಗಳು ಅತ್ಯಂತ ಪ್ರಾಚೀನವಾದವು. ನಮ್ಮ ವೇದ ಉಪನಿಷತ್ತುಗಳು ಮಾತ್ರವಲ್ಲದೆ, ಗ್ರೀಕ್, ಬ್ಯಾಬಿಲೋನಿಯಾ, ಈಜಿಪ್ಟ್, ಮೆಸಪಟೋಮಿಯಾ, ಹರಪ್ಪಾ ಮೊಹೆಂಜೊದಾರೋದಂತಹ ಆಗಿ ಹೋದ ಶ್ರೇಷ್ಠ ನಾಗರಿಕತೆಗಳಲ್ಲಿ ಆಟಕ್ಕೆ ಕ್ರೀಡೆಗಳಿಗೆ ಪ್ರಾಮುಖ್ಯತೆ ಇತ್ತೆಂದು ಉತ್ಖನನಗಳು ಹೇಳುತ್ತವೆ. ಗ್ರೀಕ್ ಸಂಸ್ಕೃತಿಗೆ ಅಪಾಯ ಒದಗಿದಾಗ, ಡೆಲ್ಫಿಯ ಭವಿಷ್ಯವಾಣಿ ಆಟಗಳ ಪುನರುಜ್ಜೀವನವನ್ನು ಪರಿಹಾರ ಎಂದು ಘೋಷಿಸಿತು. ಹಾಗಾಗಿಯೇ ಒಲಿಂಪಿಕ್ಸ್‌ನ ತವರು ಗ್ರೀಸ್ ಆಯಿತು! ರೋಮ್‌ನ ಚಕ್ರವರ್ತಿ ಅಗಸ್ಟಸ್‌ಗೆ ಗೋಲಿ ಆಟ ಪ್ರಿಯವಾಗಿತ್ತಂತೆ! ಈಜಿಪ್ಟ್‌ನಲ್ಲಿ ಪಗಡೆ ಪ್ರಚಲಿತದಲ್ಲಿ ಇತ್ತೆಂದು, ಪಿರಮಿಡ್‌ಗಳಲ್ಲಿ ದೊರಕಿದ ಪಗಡೆ ಕಾಯಿಗಳು ಸಾರಿ ಹೇಳುತ್ತವೆ. ಇನ್ನು ನಮ್ಮ ಮಹಾಭಾರತ, ರಾಮಾಯಣ ಪಂಚತಂತ್ರಗಳಲ್ಲಿ ಎಷ್ಟೊಂದು ಆಟಗಳ ಉಲ್ಲೇಖ ಬರುತ್ತದೆ?



> “ಇಂದು ತೆರೆಮರೆಗೆ ಸರಿದು ಅಳಿವಿನಂಚಿನಲ್ಲಿರುವ ಈ ಜನಪದ ಆಟಗಳನ್ನು ಪುನರುಜ್ಜೀವನಗೊಳಿಸಿ ಮಕ್ಕಳಿಗೆ ಮಾತ್ರವಲ್ಲದೆ ದೊಡ್ಡವರಿಗೂ ಪರಿಚಯ ಮಾಡಿಸುವಂತಹ ಪ್ರಯತ್ನಗಳನ್ನು ಸರಕಾರ ಸೇರಿದಂತೆ ಹಲವು ಸಮಾನಮನಸ್ಕರು, ಶಿಬಿರಗಳ ಆಯೋಜಕರು ಮಾಡುತ್ತಿರುವುದು ಶ್ಲಾಘನೀಯ. ದೇಹ, ಬುದ್ಧಿ, ಮನಸುಗಳಿಗೆ ಏಕಕಾಲಕ್ಕೆ ಕೆಲಸ ಕೊಡುವ ಈ ಆಟಗಳನ್ನು ಮಕ್ಕಳಿಗೆ ಪರಿಚಯಿಸಬೇಕು.

ಹೊಸಿಲು ದಾಟಲು ಅನುಮತಿ ಇಲ್ಲದ ಕಾಲದಲ್ಲಿ ಹೆಣ್ಣು ಮಕ್ಕಳಿಗಾಗಿಯೇ ರೂಪಿತವಾದ ಅಂಗಳದಲ್ಲಿ ಜಗುಲಿಯ ಮೇಲೆ, ಹಿತ್ತಲಲ್ಲಿ ಆಡಬಹುದಾಗಿದ್ದ ಆಟಗಳು, ಹೊರಗಿನ ಕೆಲಸಕ್ಕೆ ಹೋಗುತ್ತಿದ್ದ ಗಂಡುಮಕ್ಕಳು ಬಯಲಲ್ಲಿ ಆಡಿಕೊಳ್ಳುತ್ತಿದ್ದ ಆಟಗಳು? ಅಬ್ಬಾ? ಪಟ್ಟಿ ಮಾಡೋಣವೇ!

ಗಜ್ಜುಗ, ಬುಗುರಿ, ಚೌಕಾಬಾರಾ, ಮರಕೋತಿ, ಪಗಡೆ, ಲಗೋರಿ, ಅಳುಗುಳಿ ಮನೆ, ಹಾವು ಏಣಿ, ಕಾಲ್ಚೆಂಡು, ಗೋಲಿಯಾಟ, ಗಿಲ್ಲಿದಾಂಡು, ಕಣ್ಣಾ ಮುಚ್ಚಾಲೆ, ಜೂಟಾಟ, ಕಣ್ಕಟ್ಟಾಟ, ಕೆರೆದಡ, ಟೋಪಿ ಯಾಟ, ಆನೆ ಕುರಿ, ಹುಲಿ ಕುರಿ ಆಟ, ಗಿರಿಗಿಟ್ಟೆ ಅಡುಗೆಯಾಟ, ಮನೆಯಾಟ, ಮದುವೆಯಾಟ, ಜೋಕಾಲಿ, ಹಗ್ಗ ದಾಟ, ಕೋಲಾಟ, ರತ್ತೋ ರತ್ತೋ, ಗುಲ್ಲೋರಿಯಾ, ಗಂಜೀಫ, ಕಳ್ಳಪೊಲೀಸ್, ಕುಂಟಾ ಬಿಲ್ಲೆ ಅಳಿಗುಳಿಮಣೆ, ಉಪ್ಪೇರುಪ್ಪು ಆಟ, ಉದ್ದಿನ ಮೂಟೆಯಾಟ, ನರಿ ಕೊಂತನಾಟ, ಹುಳಸೊಪ್ಪೆಯಾಟ, ಬಳೆಚೂರಿನ ಆಟ, ಕವಡೆ, ಕಡ್ಡಿ ಆಟ, ಅಕ್ಕ ಮಕ್ಕ ಚೆಂಡು, ಸೂಜಿಯಾಟ, ಕಂಬದಾಟ, ಕುಂಟಾಟ ಅಬ್ಬಾ!

ಇವಲ್ಲದೆ, ನಮ್ಮ ಕರ್ನಾಟಕದಲ್ಲಿಯೇ ಹುಡುಕಿದರೆ, ಆಯಾ ಪ್ರಾಂತ್ಯಕ್ಕೆ ತಕ್ಕಂತೆ ಆಟಗಳು ವಿಕಾಸವಾಗಿದ್ದಾವೆ. ಉದಾಹರಣೆಗೆ, ಉತ್ತರ ಕರ್ನಾಟಕದಲ್ಲಿ, ಬಗಾಟ ಬಗರಿ, ಕಪ್ಪಿಯಾಟ, ಕಾನಕಾನು ತ್ತೊತ್ತ್ಯೋ ಮಲೆನಾಡಿನ ಭಾಗಗಳಲ್ಲಿ ಆಡುವ ಅಪ್ಪಂದ ಅಲಿಮೊಗ್ಗು, ರಬ್ಬರ್ ಬೀಜಗಳಲ್ಲಿ ಆಡುವಾಟ, ತುಳು ನಾಡಿನ ಕಾಗೆ–ಗಿಳಿಯಾಟ ಹೀಗೆ ಆಯಾ ಪ್ರಾಂತ್ಯಗಳ ಹವಾಗುಣ, ಜನಮಾನಸಗಳಿಗೆ ತಕ್ಕಂತೆ ಆಟಗಳಿರುತ್ತವೆ. ಮೇಲೆ ಹೇಳಿದವು ಸಾಗರದ ಹನಿಗಳಂತೆ. ಇವುಗಳಲ್ಲದೆ, ಗ್ರಾಮೀಣ ಜನಪದರಲ್ಲಿ ಹಬ್ಬ ಹುಣ್ಣಿಮೆ, ಜಾತ್ರೆ, ಉತ್ಸವದ ಸಮಯಗಳಲ್ಲಿ ವಿಶೇಷವಾದ ಆಟಗಳನ್ನು ಆಡುತ್ತಾರೆ. ಆ ಆಟಗಳಿಗೆ ಧಾರ್ಮಿಕ ಮಹತ್ವವೂ ಇರುತ್ತದೆ.

ಇನ್ನು ಈ ಗ್ರಾಮೀಣ ಆಟಗಳು ಮಕ್ಕಳಲ್ಲಿ ಏಕಾಗ್ರತೆ, ಲೆಕ್ಕಾಚಾರ, ಕಷ್ಟದ ಪರಿಸ್ಥಿತಿಯ ನಿಭಾಯಿಸುವಿಕೆ, ದೈಹಿಕ ಸಾಮರ್ಥ್ಯ, ತಾಳ್ಮೆ ಎಲ್ಲವನ್ನೂ ಕಲಿಸುತ್ತವೆ. ಒಮ್ಮೆ ಹಾಗೆ ಮೇಲಿನ ಆಟಗಳನ್ನು ಆಡುವ ವಿಧಾನಗಳನ್ನು ಮನಸಿಗೆ ತಂದುಕೊಂಡರೆ ನಿಮಗೇ ಮನನವಾಗುತ್ತದೆ. ಜೊತೆಗೆ ಈ ಆಟಗಳು ನಮ್ಮ ಜನಪದರ ಕ್ರಿಯಾತ್ಮಕತೆಗೆ ಉತ್ತಮ ಉದಾಹರಣೆಗಳು. ಮೇಲೆ ಹೇಳಿದ ಬಹುತೇಕ ಆಟಗಳನ್ನು ಆಡುವಾಗ ಪ್ರಾಸಬದ್ಧ ಹಾಡುಗಳನ್ನೂ ಹಾಡಬೇಕಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ಬಗಾಟ ಬಗರಿ ಎನ್ನುವ ಆಟಕ್ಕೆ ಈ ಭಾಗದಲ್ಲಿ ಕುಕ್ಕುರು ಬಸವಿ, ರತ್ತೋ ರತ್ತೋ ಆಟ ಎನ್ನುತ್ತಾರೆ. ಹಾಗೆಯೇ ಕಣ್ಣಾಮುಚ್ಚೇ ಕಾಡೇ ಗೂಡೇ ಆಟದಲ್ಲಿ ಇರುವ ತಾತ್ವಿಕ ಅರ್ಥದ ಬಗ್ಗೆ ಕೇಳಿಯೇ ಇರುತ್ತೀರಿ. ಆನೆ ಬಂತೊಂದಾನೆ, ಟೋಪಿ ಬೇಕಾ ಟೋಪಿ, ಕೈಯೆಲ್ಲಿ ಹೋದವು ಸಂತೆಗೋದವು.... ಈ ಹಾಡುಗಳು ಮಕ್ಕಳಿಗೆ ರಾಗ ಲಯ ತಾಳ ಪ್ರಾಸಗಳ ಸ್ವಾರಸ್ಯವನ್ನು ಸುಂದರವಾಗಿ ಸರಳವಾಗಿ ತಿಳಿಸಿಕೊಡುತ್ತವೆ.

ಇಂದು ತೆರೆಮರೆಗೆ ಸರಿದು ಅಳಿವಿನಂಚಿನಲ್ಲಿರುವ ಈ ಜನಪದ ಆಟಗಳನ್ನು ಪುನರುಜ್ಜೀವನಗೊಳಿಸಿ ಮಕ್ಕಳಿಗೆ ಮಾತ್ರವಲ್ಲದೆ ದೊಡ್ಡವರಿಗೂ ಪರಿಚಯ ಮಾಡಿಸುವಂತಹ ಪ್ರಯತ್ನಗಳನ್ನು ಸರಕಾರ ಸೇರಿದಂತೆ ಹಲವು ಸಮಾನಮನಸ್ಕರು, ಶಿಬಿರಗಳ ಆಯೋಜಕರು ಮಾಡುತ್ತಿರುವುದು ಶ್ಲಾಘನೀಯ. ದೇಹ ಬುದ್ಧಿ ಮನಸುಗಳಿಗೆ ಏಕಕಾಲಕ್ಕೆ ಕೆಲಸ ಕೊಡುವ ಈ ಆಟಗಳನ್ನು ಮಕ್ಕಳಿಗೆ ಪರಿಚಯಿಸಬೇಕು. ಅಂತಹಾ ಗ್ರಾಮೀಣ ಆಟಗಳ ಉತ್ಸವಗಳು ಈಗೀಗ ಹೆಚ್ಚು ಹೆಚ್ಚು ನಡೆಯುತ್ತಿವೆ.

ಬಿಹಾರದ ಗಯಾದಲ್ಲಿ ಈಗ ಖೇಲೋ ಇಂಡಿಯಾದ ಸ್ಪರ್ಧೆಗಳು ನಡೆಯುತ್ತಿವೆ. ಫಿಟ್ ಇಂಡಿಯಾ ಅಭಿಯಾನದ ಜೊತೆ ತಳುಕು ಹಾಕಿಕೊಂಡಿರುವ ಈ ಕ್ರೀಡಾ ಉತ್ಸವದಲ್ಲಿ ದೇಶದ ನಾನಾ ಭಾಗಗಳಿಂದ ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ. ಸದ್ಯಕ್ಕೆ ಕರ್ನಾಟಕವು ಪದಕ ಪಟ್ಟಿಯಲ್ಲಿ ಉನ್ನತ ಸ್ಥಾನದಲ್ಲಿದೆ. ಸ್ಪರ್ಧಿಗಳಿಗೆ ಶುಭಾಶಯ ಕೋರುತ್ತಾ ಕ್ರೀಡೆ– ಆಟ ಮಕ್ಕಳ ಸರ್ವತೋಮುಖ ಬೆಳವಣಿಗೆ ಮತ್ತು ವಿಕಾಸಕ್ಕೆ ಅತ್ಯಗತ್ಯ ಚಟುವಟಿಕೆ ಎಂಬುದನ್ನು ನಾವೂ ಗಟ್ಟಿಯಾಗಿ ನಂಬಿದರೆ ನಮ್ಮ ಮಕ್ಕಳು ಫಿಟ್ ಇಂಡಿಯನ್ಸ್ ಆಗುತ್ತಾರೆ!

ಆಪರೇಷನ್ ಸಿಂಧೂರ್ ಯಶಸ್ವಿ : ಸಶಸ್ತ್ರ ಪಡೆಗಳಿಗೆ ರಾಜನಾಥ್ ಸಿಂಗ್ ಅಭಿನಂದನೆ

ನವದೆಹಲಿ, ಮೇ 7– ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯಾನಕ ದಾಳಿಗೆ ಪ್ರತೀಕಾರವಾಗಿ, ಭಾರತವು 'ಆಪರೇಷನ್ ಸಿಂಧೂರ್' ಹೆಸರಿನಲ್ಲಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ)ದಲ್ಲಿ ವೈಮಾನಿಕ ದಾಳಿ ನಡೆಸಿದೆ. ಈ ಕಾರ್ಯಾಚರಣೆಯ ಯಶಸ್ಸಿಗೆ ರಕ್ಷಣಾ ಪಡೆಗಳನ್ನು ಅಭಿನಂದಿಸಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್, ನಮ್ಮ ಸೈನಿಕರು ನಿಖರತೆ, ಎಚ್ಚರಿಕೆ ಮತ್ತು ಸೂಕ್ಷ್ಮತೆಯಿಂದ ಕೂಡಿದ ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಿದ್ದಾರೆ ಎಂದು ಹೇಳಿದ್ದಾರೆ.

ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಗಡಿ ರಸ್ತೆಗಳ ಸಂಘಟನೆಯ 50 ಮೂಲ ಸೌಕರ್ಯ ಯೋಜನೆಗಳನ್ನು ಉದ್ಘಾಟಿಸಿ ಮಾತನಾಡಿದ ರಾಜನಾಥ್ ಸಿಂಗ್, ಆಪರೇಷನ್ ಸಿಂಧೂರ್ ಸೇನಾ ಕಾರ್ಯಾಚರಣೆ



ಯಶಸ್ವಿಗೊಳಿಸಿದ ಸಶಸ್ತ್ರ ಪಡೆಗಳ ಕಾರ್ಯವನ್ನು ಶ್ಲಾಘಿಸಿದರು.

ಪಹಲ್ಗಾಮ್ ದಾಳಿಯ ನಂತರ ಭಾರತವು ಪ್ರತಿಕ್ರಿಯಿಸುವುದು ಅನಿವಾರ್ಯವಾಗಿತ್ತು. ತನಿಖೆಯು ಪಾಕಿಸ್ತಾನದ ಪಾತ್ರವನ್ನು ಸ್ಪಷ್ಟವಾಗಿ ತೋರಿಸಿದೆ. ಈ ಹಿಂದೆ ಭಾರತದ ಮೇಲೆ ನಡೆದ ಹಲವು ದಾಳಿಗಳಲ್ಲೂ ಪಾಕಿಸ್ತಾನದ ಕೈವಾಡವಿತ್ತು ಎಂದು ರಾಜನಾಥ್ ಸಿಂಗ್ ಹೇಳಿದರು.

ಭಾರತದ ಸಶಸ್ತ್ರ ಪಡೆಗಳು ಇತಿಹಾಸವನ್ನು ಸೃಷ್ಟಿಸಿವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಭಾರತೀಯ ಸೈನಿಕರಿಗೆ ಬೆಂಬಲವಾಗಿ ನಿಂತಿದೆ. ನಮ್ಮ ಅಮಾಯಕ ನಾಗರಿಕರನ್ನು ಕೊಂದವರನ್ನು ಉಗ್ರ ಶಿಕ್ಷೆಗೆ ಗುರಿಪಡಿಸುವ ವಾಗ್ದಾನ ಈಡೇರುತ್ತಿದೆ ಎಂದು ರಾಜನಾಥ್ ಸಿಂಗ್ ಸೂಚ್ಯವಾಗಿ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ನಮ್ಮ ಸೈನಿಕರು 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಕೇವಲ ಭಯೋತ್ಪಾದಕರ ತರಬೇತಿ ಶಿಬಿರಗಳನ್ನು ಮಾತ್ರ ಧ್ವಂಸಗೊಳಿಸಲಾಗಿದೆ. ಈ ದಾಳಿಯಲ್ಲಿ ಪಾಕಿಸ್ತಾನ ಮಿಲಿಟರಿ ಸೌಲಭ್ಯಕ್ಕಾಗಲಿ, ಅಲ್ಲಿನ ನಾಗರಿಕರಿಗಾಗಲಿ ಯಾವುದೇ ತೊಂದರೆಯಾಗಿಲ್ಲ ಎಂದು ರಕ್ಷಣಾ ಸಚಿವರು ಇದೇ ವೇಳೆ ಸ್ಪಷ್ಟಪಡಿಸಿದರು. ಇದು ಬಹಳ ಯೋಜಿತ ಕಾರ್ಯಾಚರಣೆಯಾಗಿತ್ತು.

ಮನೆಗೆ ಕನ್ನ ಹಾಕಿ ಚಿನ್ನಾಭರಣ ಕಳವು

ಮೈಸೂರು, ಮೇ 7(ಪಿಎಂ)– ವಿದ್ಯಾರಣ್ಯಪುರಂನ 4ನೇ ಮೇನ್‌ನ 26ನೇ ಕ್ರಾಸ್‌ನ ಮನೆಯೊಂದರ ಕಿಟಕಿ ಗಾಜು ಹೊಡೆದು ಚಿನ್ನಾಭರಣ ಕಳ್ಳತನ ಮಾಡಿರುವ ಘಟನೆ ಬುಧವಾರ ಬೆಳಕಿಗೆ ಬಂದಿದೆ.

ಕಿಟಕಿ ಗಾಜು ಹೊಡೆದಿರುವ ಕಳ್ಳರು, ಆ ಮೂಲಕ ಮನೆ ಮುಂಬಾಗಿಲನ್ನು ಹಿಂಬದಿಯಿಂದ ಸುಲಭವಾಗಿ ತೆರೆದು ಒಳನುಗ್ಗಿದ್ದಾರೆ. ಲೇಟೆಸ್ಟ್ ವಿಧಾನದ ಡೋರ್ ಲಾಕ್ ಆದ್ದರಿಂದ ಈ ರೀತಿಯಲ್ಲಿ ಕಳ್ಳರು ಮನೆ ಬಾಗಿಲು ತೆರೆದು ಒಳನುಗ್ಗಲು ಸಾಧ್ಯವಾಗಿದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಮನೆಯನ್ನು ಜಾಲಾಡಿರುವ ಖದೀಮರು, ಚಿನ್ನಾಭರಣ ಕದ್ದು ಪರಾರಿಯಾಗಿದ್ದಾರೆ. ವೀಣಾ ಎಂಬುವರ ಮನೆಯಲ್ಲಿ ಈ ಕಳ್ಳತನ ನಡೆದಿದ್ದು, ಶನಿವಾರ ಮನೆಗೆ ಬೀಗಿ ಹಾಕಿಕೊಂಡು ಮದುವೆಯೊಂದಕ್ಕೆ ತೆರಳಿದ್ದ ವೀಣಾ ಅವರ ಕುಟುಂಬ, ಬುಧವಾರ ಮನೆಗೆ ಹಿಂತಿರುಗಿ ಬಂದಾಗ ಪ್ರಕರಣ ಬೆಳಕಿಗೆ ಬಂದಿದೆ.

ಮನೆಯ ಗೇಟ್ ಬೀಗ ಹಾಕಿರುವುದನ್ನು ಗಮನಿಸಿದ್ದ ಕಳ್ಳರು, ಜೊತೆಗೆ ಗೇಟ್ ಬಳಿಯೇ ನ್ಯೂಸ್ ಪೇಪರ್‌ಗಳು ಬಿದ್ದಿರುವುದನ್ನು ಕಂಡು ಮನೆಯಲ್ಲಿ ಯಾರು ಇಲ್ಲವೆಂಬುದನ್ನು ಖಚಿತಪಡಿಸಿಕೊಂಡು ಕಳ್ಳತನ ನಡೆಸಿದ್ದಾರೆ ಎಂದು ವಿದ್ಯಾರಣ್ಯಪುರಂ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಜೊತೆಗೆ ಮನೆಗಳ್ಳರು ಮನೆ ಮುಂದೆ ರಂಗೋಲಿ ಬಿಡಿಸಿದ್ದಾರೆಯೇ ಎಂಬುದನ್ನು ಗಮನಿಸಿ ಮನೆಯಲ್ಲಿ ಯಾರು ಇಲ್ಲದಿರುವುದನ್ನು ಖಾತ್ರಿಪಡಿಸಿಕೊಂಡು ಕೃತ್ಯ ನಡೆಸುತ್ತಾರೆ. ಈ ಪ್ರಕರಣದಲ್ಲಿ ಹೀಗೆಯೇ ಆಗಿದೆ. ಹಾಗಾಗಿ ಸಾರ್ವಜನಿಕರು ಇಂತಹ ವಿಚಾರಗಳಲ್ಲಿ ಎಚ್ಚರಿಕೆ ವಹಿಸಬೇಕೆಂದು ಮನವಿ ಮಾಡಿರುವ ವಿದ್ಯಾರಣ್ಯಪುರಂ ಪೊಲೀಸರು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆಗೆ ಕ್ರಮ ವಹಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಜೆಇಎಂ ಉಗ್ರ ಸಂಘಟನೆ ಮುಖ್ಯಸ್ಥ ಮಸೂದ್ ಅಜರ್ ಕುಟುಂಬದ 10 ಜನ ಸೇರಿ 14 ಮಂದಿ ಹತ್ಯೆ

ನವದೆಹಲಿ/ಇಸ್ಲಾಮಾಬಾದ್, ಮೇ 7– ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಉಗ್ರರ ನೆಲೆಗಳ ಮೇಲೆ ಭಾರತ ನಡೆಸಿದ ಪ್ರತೀಕಾರದ ದಾಳಿಯಲ್ಲಿ ನಿಷೇಧಿತ ಉಗ್ರ ಸಂಘಟನೆ ಜೈಶ್ ಎ ಮೊಹಮ್ಮದ್ (ಜೆಇಎಂ) ಮುಖ್ಯಸ್ಥ ಮಸೂದ್ ಅಜರ್ ಕುಟುಂಬದ 10 ಮಂದಿ ಸೇರಿ 14 ಮಂದಿ ಹತ್ಯೆಯಾಗಿದ್ದಾರೆ.

ಬಹಾವಲ್ಪುರದ ಸುಭಾನ್ ಅಲ್ಲಾ ಮಸೀದಿ ಮೇಲಿನ ದಾಳಿಯಲ್ಲಿ ಬಲಿಯಾದವರ ಪೈಕಿ ಜೆಇಎಂ ಮುಖ್ಯಸ್ಥನ ಅಕ್ಕ ಮತ್ತು ಆಕೆಯ ಪತಿ, ಸೋದರಳಿಯ ಮತ್ತು ಅವನ ಪತ್ನಿ, ಮತ್ತೊಬ್ಬ ಸೊಸೆ ಮತ್ತು ಅವರ ಕುಟುಂಬದ 5 ಮಕ್ಕಳು ಸೇರಿದ್ದಾರೆ. ಇದರ ಜೊತೆಗೆ ಮಸೂದ್‌ನ ಆಪ್ತ ಸಹಚರ, ಆತನ ತಾಯಿ ಸೇರಿ ಕುಟುಂಬದ ನಾಲ್ವರು ಮೃತಪಟ್ಟಿದ್ದಾರೆ ಎಂದು ಮಸೂದ್ ಅಜರ್ ಹೇಳಿಕೆಯಲ್ಲಿ ತಿಳಿಸಿದ್ದಾನೆ. ಉಗ್ರರು ಮಾತ್ರವಲ್ಲ ಅವರ ಕುಟುಂಬವನ್ನು ನಾಶ ಮಾಡಬೇಕು. ಆಗ ಉಗ್ರರ ದಾಳಿಯಿಂದ ಮೃತಪಟ್ಟವರ ಕುಟುಂಬಕ್ಕೆ ನ್ಯಾಯ ಸಿಗುತ್ತದೆ. ಅವರಿಗೂ ನೋವು ಏನು ಎನ್ನುವುದು ಗೊತ್ತಾಗಬೇಕೆಂಬ ಆಗ್ರಹ ಕೇಳಿ ಬಂದಿತ್ತು. ಈ ಜನರ ಆಗ್ರಹದಂತೆ ಮಸೂದ್ ಕುಟುಂಬವನ್ನೇ ಭಾರತ ನಾಶ ಮಾಡಿದೆ.



ಮಸೂದ್ ಅಜರ್

ಅಜರ್ ಹಿನ್ನೆಲೆ: ನಿಷೇಧಿತ ಜೈಶ್–ಎ–ಮೊಹಮ್ಮದ್ ಉಗ್ರ ಸಂಘಟನೆಯ ಮುಖ್ಯಸ್ಥ ಮಸೂದ್ ಅಜರ್ 2001ರಲ್ಲಿ ಭಾರತದ ಸಂಸತ್ತಿನ ಮೇಲೆ ನಡೆದ ದಾಳಿ ಮತ್ತು ಪುಲ್ವಾಮಾ ದಾಳಿಯ ರೂವಾರಿ ಆಗಿದ್ದಾನೆ. ಪುಲ್ವಾಮಾ ದಾಳಿಗೆ ಪ್ರತೀಕಾರವಾಗಿ ಭಾರತ ಬಾಲಾಕೋಟ್‌ನಲ್ಲಿರುವ ಜೈಷ್ ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿತ್ತು. ಅದಾದ ಬಳಿಕ 2019ರ ಮೇ 1ರಂದು ವಿಶ್ವಸಂಸ್ಥೆ ಅಜರ್‌ನನ್ನು ಜಾಗತಿಕ ಉಗ್ರ ಎಂದು ಘೋಷಿಸಿತ್ತು

1994ರಲ್ಲಿ ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಅಜರ್‌ನನ್ನು ಬಂಧಿಸಲಾಗಿತ್ತು. ಆದರೆ 1999 ಡಿಸೆಂಬರ್‌ನಲ್ಲಿ ಭಾರತದ ವಿಮಾನ IC814 ಅನ್ನು ಹೈಜಾಕ್ ಮಾಡಿದಾಗ ಅಜರ್‌ನನ್ನು ಬಿಡುಗಡೆ ಮಾಡಬೇಕೆಂದು ಅಪಹರಣಕಾರರು ಬೇಡಿಕೆಯೊಡ್ಡಿದ್ದರು. ವಿಮಾನದಲ್ಲಿದ್ದ ಪ್ರಯಾಣಿಕರನ್ನು ಒತ್ತೆಯಾಳುಗಳನ್ನಾಗಿಟ್ಟುಕೊಂಡು ಅಪಹರಣಕಾರರ ಒತ್ತಾಯಕ್ಕೆ ಮಣಿದು ಸರ್ಕಾರ ಅಜರ್‌ನನ್ನು ಬಿಡುಗಡೆ ಮಾಡಿತ್ತು.


ಈ ಪಾಕ್ ಉಗ್ರ ಸಂಘಟನೆಯು ಡಿಸೆಂಬರ್ 2001ರಲ್ಲಿ ಜೈಶ್ ಎ ಮೊಹಮ್ಮದ್ ಸಹಯೋಗದೊಂದಿಗೆ ಭಾರತೀಯ ಸಂಸತ್ತಿನ ಮೇಲೆ ದಾಳಿ, ಜುಲೈ 2006ರಲ್ಲಿ ಮುಂಬೈ ಲೋಕಲ್ ಟ್ರೈನ್‌ನಲ್ಲಿ ಬಾಂಬ್ ಸ್ಫೋಟ, 180ಕ್ಕೂ ಹೆಚ್ಚು ಸಾವು, ನವೆಂಬರ್ 2008ರಲ್ಲಿ ಮುಂಬೈ ಭಯೋತ್ಪಾದಕ ದಾಳಿ, 166 ಜನರ ಸಾವು, ಮಾರ್ಚ್ 2000ನಲ್ಲಿ ಚಿಟ್ಟಿಸಿಂಗ್‌ಪೋರಾದಲ್ಲಿ 35 ಸಿಖ್ಖರ ಹತ್ಯೆ.



ಭಾರತೀಯ ಆಕ್ರೋಶದ ಪ್ರತೀಕ, ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟ ಅಮಾಯಕ ನಾಗರಿಕರ ಕುಟುಂಬಗಳಿಗೆ ನ್ಯಾಯ ಒದಗಿಸುವ ಪ್ರಕ್ರಿಯೆ

ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ

ನವದೆಹಲಿ, ಮೇ 7– ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ, ಭಾರತೀಯ ಸೇನೆಯ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಯಶಸ್ವಿಯಾಗಿದೆ. ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ (ಪಿಓಕೆ)ದಲ್ಲಿರುವ ಒಟ್ಟು 9 ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿಕೊಂಡು ಭಾರತೀಯ ಸೇನೆ ಕ್ಷಿಪಣಿ ದಾಳಿ ನಡೆಸಿದೆ. ಈ ದಾಳಿಯಲ್ಲಿ ಕನಿಷ್ಠ 70 ಉಗ್ರರು ಅಸುನೀಗಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.



ಇದೀಗ ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ನೇತೃತ್ವದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ, 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗಿದೆ. ಈ ಪತ್ರಿಕಾಗೋಷ್ಠಿಯಲ್ಲಿ ಕರ್ನಲ್ ಸೋಫಿಯಾ ಖುರೇಷಿ ಮತ್ತು ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಉಪಸ್ಥಿತರಿದ್ದರು.

ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ವಿಕ್ರಮ್ ಮಿಶ್ರಿ, ಆಪರೇಷನ್ ಸಿಂಧೂರ್ ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಕೈಗೊಂಡ ಕಾರ್ಯಾಚರಣೆಯಾಗಿದೆ. ಇದು ಭಾರತೀಯ ಆಕ್ರೋಶದ ಪ್ರತೀಕವಾಗಿದ್ದು, ದಾಳಿಯಲ್ಲಿ ಮೃತಪಟ್ಟ ಅಮಾಯಕ ನಾಗರಿಕರ ಕುಟುಂಬಗಳಿಗೆ ನ್ಯಾಯ ಒದಗಿಸುವ ಪ್ರಕ್ರಿಯೆಯಾಗಿದೆ ಎಂದು ಹೇಳಿದರು. 'ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿಕೊಂಡು ನಡೆಸಿದ ದಾಳಿಯಲ್ಲಿ ಯಾವುದೇ ಪಾಕಿಸ್ತಾನಿ ನಾಗರಿಕ ಸಾವನ್ನಪ್ಪಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಕೇವಲ ಭಯೋತ್ಪಾದಕರನ್ನು ಗುರಿಯಾಗಿಸಿಕೊಂಡು ನಡೆಸಿದ ದಾಳಿ. ಇದು ಪಾಕಿಸ್ತಾನಿ ನಾಗರಿಕರನ್ನು ಗುರಿಯಾಗಿಸಿಕೊಂಡಿಲ್ಲ. ಪಹಲ್ಗಾಮ್‌ನಲ್ಲಿ ನಡೆದ ದಾಳಿಯಲ್ಲಿ ಅಮಾಯಕ ಭಾರತೀಯರ ಜೀವ ಬಲಿ ಪಡೆದ ಉಗ್ರರ ವಿರುದ್ಧ ಮುಂದಿನ ದಿನಗಳಲ್ಲಿ ಮತ್ತಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ವಿಕ್ರಮ್ ಮಿಶ್ರಿ ಹೇಳಿದರು.

ಮೋಸ್ಟ್ ವಾಂಟೆಡ್ ಉಗ್ರ ಹಫೀಜ್ ಸಯೀದ್ ಪುತ್ರ ತಲ್ಹಾ ಹತ್ಯೆ?

ಇಸ್ಲಾಮಾಬಾದ್, ಮೇ 7– ಮಂಗಳವಾರ ರಾತ್ರಿ ಆಪರೇಷನ್ ಸಿಂಧೂರ್ ಅಡಿಯಲ್ಲಿ ಭಾರತೀಯ ಸೇನೆಯು ವಾಯುದಾಳಿ ನಡೆಸಿ ಮುಜಫರಾಬಾದ್‌ನಲ್ಲಿರುವ ಭಯೋತ್ಪಾದಕ ಶಿಬಿರವನ್ನು ನಾಶಪಡಿಸಿತು. ಈ ಸ್ಥಳದಲ್ಲಿ ಲಷ್ಕರ್ ಮುಖ್ಯಸ್ಥ ಸಯೀದ್ ಮಗ ತಲ್ಹಾ ಸಯೀದ್ ಭಯೋತ್ಪಾದಕರಿಗೆ ತರಬೇತಿ ನೀಡುತ್ತಿದ್ದ ಎಂದು ಹೇಳಲಾಗುತ್ತಿದೆ. ತಲ್ಹಾ ಸಯೀದ್ ತನ್ನ ಉನ್ನತ ಕಮಾಂಡರ್‌ಗಳೊಂದಿಗೆ ಇಲ್ಲಿ ಇರುತ್ತಿದ್ದ. ಮೂಲಗಳ ಪ್ರಕಾರ, ಭಾರತೀಯ ಸೇನೆಯ ಈ ದಾಳಿಯಲ್ಲಿ ತಲ್ಹಾ ಸಯೀದ್ ಸೇರಿ ಎಲ್ಲಾ ಉನ್ನತ ಕಮಾಂಡರ್‌ಗಳು ಸಾವನ್ನಪ್ಪಿದ್ದಾರೆ. ಇಡೀ ತರಬೇತಿ ಕೇಂದ್ರವೇ ನಾಶವಾಗಿದೆ.



ತಲ್ಹಾ ಸಯೀದ್

ತಲ್ಹಾ ಸಯೀದ್ ಲಷ್ಕರ್–ಎ–ತೊಯ್ಬಾದ ಎರಡನೇ ಅತ್ಯುನ್ನತ ಕಮಾಂಡರ್ ಆಗಿದ್ದು, ಸಂಘಟನೆಯ ಹಣಕಾಸು ಚಟುವಟಿಕೆಗಳನ್ನು ನಿರ್ವಹಿಸುತ್ತಾನೆ. 2023ರಲ್ಲಿ ಹಫೀಜ್ ಸಯೀದ್ ಬಂಧನದ ನಂತರ, ತಲ್ಹಾ ಮುಜಫರಾಬಾದ್ ಶಿಬಿರದ ಉಸ್ತುವಾರಿ ವಹಿಸಿಕೊಂಡನು. ಈ ಶಿಬಿರದಲ್ಲಿ 18–25 ವರ್ಷ ವಯಸ್ಸಿನ ಯುವಕರನ್ನು ನೇಮಿಸಿಕೊಳ್ಳಲಾಯಿತು. ಅವರಿಗೆ ಶಸ್ತ್ರಾಸ್ತ್ರಗಳನ್ನು ನಿರ್ವಹಿಸುವುದು, ಬಾಂಬ್‌ಗಳನ್ನು ತಯಾರಿಸುವುದು ಮತ್ತು ಗೆರಿಲ್ಲಾ ಯುದ್ಧದಲ್ಲಿ ತರಬೇತಿ ನೀಡಲಾಯಿತು.

ಪಹಲ್ಗಾಮ್ ದಾಳಿಗಾಗಿ ಭಯೋತ್ಪಾದಕರಿಗೆ ಈ ಶಿಬಿರದಲ್ಲಿ ತರಬೇತಿ ನೀಡಲಾಗಿತ್ತು. ತಲ್ಹಾ ಸೌದಿ ಅರೇಬಿಯಾ ಮತ್ತು ಗಲ್ಫ್ ರಾಷ್ಟ್ರಗಳಿಂದ ಹಣವನ್ನು ಸಂಗ್ರಹಿಸಿದನು. ಅದನ್ನು ಶಸ್ತ್ರಾಸ್ತ್ರಗಳನ್ನು ಖರೀದಿಸಲು ಮತ್ತು ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಲು ಬಳಸಲಾಗುತ್ತಿತ್ತು. ಅವರು ಜಿಹಾದ್ ಹೆಸರಿನಲ್ಲಿ ಆನ್‌ಲೈನ್ ದೇಣಿಗೆ ಅಭಿಯಾನಗಳನ್ನು ಸಹ ನಡೆಸುತ್ತಿದ್ದನು.



ತಮಿಳುನಾಡು ಬಿಜೆಪಿ ಮುಖಂಡ ಅಮರ್‌ಪ್ರಸಾದ್ ರೆಡ್ಡಿ ಇನ್‌ಸ್ಟಾಗ್ರಾಮ್ ಪೋಸ್ಟ್

ಕಾರ್ಯಾಚರಣೆಯ ಮೇಲೆ ಮೋದಿ ನಿಗಾ; ಇಂಚಿಂಚೂ ಮಾಹಿತಿ ಪಡೆದ ಪ್ರಧಾನಿ

ನವದೆಹಲಿ, ಮೇ 7– ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆ ಪಾಕಿಸ್ತಾನದ ಉಗ್ರ ಸಂಘಟನೆಗಳ 9 ಶಿಬಿರಗಳ ಮೇಲೆ ರಾತ್ರೋ ರಾತ್ರಿ ಕ್ಷಿಪಣಿ ದಾಳಿ ನಡೆಸಿದೆ.



ರಾತ್ರೋರಾತ್ರಿ ನಡೆದ ಈ ಕಾರ್ಯಾಚರಣೆ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ರಾತ್ರಿಯಿಡೀ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯ ಮೇಲೆ ನಿಗಾ ಇಟ್ಟಿದ್ದರು ಎಂದು ಎಎನ್‌ಐ ಸುದ್ದಿ ಸಂಸ್ಥೆ ವರದಿ ತಿಳಿಸಿದೆ.

ಮೋದಿಯವರು ದಾಳಿಯ ಕುರಿತು ಇಂಚಿಂಚೂ ಮಾಹಿತಿಯನ್ನು ಪಡೆದಿದ್ದಾರೆ. ರಕ್ಷಣಾ ಪಡೆಗಳ ಮುಖ್ಯಸ್ಥರು, ಹಿರಿಯ ಗುಪ್ತಚರ ಅಧಿಕಾರಿಗಳು ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಪ್ರಧಾನಿಗೆ ನಿರಂತರವಾಗಿ ಮಾಹಿತಿ ನೀಡಿದ್ದಾರೆ.

ಮಂಗಳವಾರ ರಾತ್ರಿ ಪ್ರಾರಂಭವಾಗಿ ಬುಧವಾರದ ಬೆಳಗಿನ ಜಾವದವರೆಗೂ ಪ್ರಧಾನಿ ಮತ್ತು ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಯ ಮುಖ್ಯಸ್ಥರ ನಡುವೆ ಸಂವಹನ ನಡೆದಿದೆ ಎಂದು ಹೇಳಲಾಗಿದೆ.

ಇಬ್ಬರು ಮಹಿಳಾ ಸೇನಾಧಿಕಾರಿಗಳಿಂದ ವಿವರಣೆ!

ನವದೆಹಲಿ, ಮೇ 7– ಬುಧವಾರ ನಸುಕಿನ ವೇಳೆ ಭಾರತದ ಮಿಲಿಟರಿ ಪಡೆಗಳು, ಪಾಕಿಸ್ತಾನದ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಒಂಬತ್ತು ಕಡೆ ವೈಮಾನಿಕ ದಾಳಿ ನಡೆಸಿದ್ದವು.

ಭಾರತದ ರಕ್ಷಣಾ ಪಡೆಗಳ ಅಧಿಕಾರಿಗಳು ಮಾಧ್ಯಮಗೋಷ್ಠಿಯನ್ನು ನಡೆಸಿ, ದಾಳಿಯ ವಿವರಣೆಯನ್ನು ದೇಶಕ್ಕೆ ನೀಡಿದ್ದಾರೆ.



ಸೋಫಿಯಾ ಖುರೇಷಿ



ವ್ಯೋಮಿಕಾ ಸಿಂಗ್

ಇಬ್ಬರು ಮಹಿಳಾ ಅಧಿಕಾರಿಗಳು ದಾಳಿಯ ವಿವರಣೆಯನ್ನು ನೀಡಿದ್ದು ಗಮನಾರ್ಹವಾಗಿತ್ತು. ದೇಶದ ಭದ್ರತೆಯ ವಿಚಾರದಲ್ಲಿ ಅತ್ಯಂತ ನಿರ್ಣಾಯಕ ವಿಷಯವಾಗಿದ್ದರಿಂದ ಭೂ, ವಾಯು ಮತ್ತು ನೌಕಾಪಡೆಯ ಮುಖ್ಯಸ್ಥರಾದ ಜನರಲ್, ಏರ್ ಚೀಫ್ ಮಾರ್ಷಲ್ ಮತ್ತು ಎಡ್ಮಿರಲ್ ಪತ್ರಿಕಾಗೋಷ್ಠಿಯಲ್ಲಿ ವಿವರಣೆಯನ್ನು ನೀಡಬಹುದು ಎಂದು ನಿರೀಕ್ಷಿಸಲಾಗಿತ್ತು.


ಆದರೆ, ದಾಳಿ ಯಾವ ಕಾರಣಕ್ಕೆ ನಡೆಯಿತು, ಹೇಗೆ ನಡೆಯಿತು, ಯಾವಾಗ ನಡೆಯಿತು ಎನ್ನುವ ವಿವರಣೆಯಲ್ಲಿ ವಾಯುಸೇನೆಯಿಂದ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಮತ್ತು ಭೂಸೇನೆಯಿಂದ ಕರ್ನಲ್ ಸೋಫಿಯಾ ಖುರೇಷಿ ನಡೆಸುವ ಮೂಲಕ ಅತ್ಯುತ್ತಮ ಸಂದೇಶವನ್ನು ರವಾನಿಸಿದಂತಾಗಿದೆ. ಭಾರತದ ವಿದೇಶಾಂಗ ಇಲಾಖೆಯ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ನೇತೃತ್ವದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮೊದಲು ಮಿಶ್ರಿ ವಿವರಣೆಯನ್ನು ನೀಡಿದರು. ದಾಳಿಯ ಬಗ್ಗೆ ವಿವರಣೆಯನ್ನು ನೀಡಲು ಸೋಫಿಯಾ ಖುರೇಷಿ ಮತ್ತು ವ್ಯೋಮಿಕಾ ಸಿಂಗ್ ಅವರಿಗೆ ಸೂಚಿಸಿದರು.

ಇಬ್ಬರು ಮಹಿಳೆಯರು, ಬೇರೆ ಬೇರೆ ಯೂನಿಫಾರ್ಮ್‌ನಲ್ಲಿ, ಮಾಧ್ಯಮಗೋಷ್ಠಿ ನಡೆಸಿದ್ದಕ್ಕೆ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ. ಇಬ್ಬರು ಮಹಿಳಾ ಅಧಿಕಾರಿಗಳು ಆಪರೇಷನ್ ಸಿಂಧೂರ್ ಕಾರ್ಯತಂತ್ರ ಹೇಗಿತ್ತು ಎನ್ನುವುದರ ವಿವರಣೆಯನ್ನು ಕೊಡಲು ಹೋಗಲಿಲ್ಲ. ಬದಲಿಗೆ ಕಾರ್ಯಾಚರಣೆ ಯಾವ ರೀತಿ ಇತ್ತು ಎನ್ನುವುದನ್ನು ವಿವರಿಸಿದ್ದಾರೆ. ಆ ಮೂಲಕ ಉಗ್ರರ ವಿರುದ್ಧದ ದಾಳಿಯ ಮುಂದುವರಿಯಲಿದೆ ಎನ್ನುವ ಸಂದೇಶವನ್ನು ರವಾನಿಸಿದಂತಿದೆ.

ಭಾರತದ ಕ್ರಮ ಬೆಂಬಲಿಸಿದ ಇಸ್ರೇಲ್

ನವದೆಹಲಿ, ಮೇ 7– ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆಯು ಪಾಕಿಸ್ತಾನದ ಉಗ್ರ ಸಂಘಟನೆಗಳನ್ನು ಗುರಿಯಾಗಿಸಿಕೊಂಡು ಇಂದು (ಬುಧವಾರ) ಮುಂಜಾನೆ ನಡೆಸಿದ ಕ್ಷಿಪಣಿ ದಾಳಿಯನ್ನು ಇಸ್ರೇಲ್ ಬೆಂಬಲಿಸಿದೆ.

ಈ ಕುರಿತು ಎಕ್ಸ್/ ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿರುವ ಭಾರತದಲ್ಲಿನ ಇಸ್ರೇಲ್ ರಾಯಭಾರಿ ರುವೇನ್ ಅಜರ್, ಮುಗ್ಧರ ಮೇಲೆ ಹೀನ ಕೃತ್ಯ ಎಸಗಿದವರಿಗೆ ಅಡಗಿಕೊಳ್ಳಲು ಎಲ್ಲಿಯೂ ಜಾಗವಿಲ್ಲ ಎಂಬುದನ್ನು ಭಯೋತ್ಪಾದಕರು ಗಮನದಲ್ಲಿಟ್ಟುಕೊಳ್ಳಬೇಕು' ಎಂದು ಹೇಳಿದ್ದಾರೆ. ಭಯೋತ್ಪಾದಕರ ನಿಗ್ರಹಕ್ಕೆ ಭಾರತ ಕೈಗೊಂಡಿರುವ ಆತ್ಮರಕ್ಷಣೆಯ ಕ್ರಮವನ್ನು ಇಸ್ರೇಲ್ ಬೆಂಬಲಿಸುತ್ತದೆ ಎಂದು ಹೇಳಿದ್ದಾರೆ.



ಪಾಕಿಸ್ತಾನದಲ್ಲಿ ಉಗ್ರರು ಅಡಗಿದ್ದ ಮಸೀದಿ ಭಾರತೀಯ ಸೇನೆ ದಾಳಿಯಿಂದ ಧ್ವಂಸವಾಗಿರುವುದು.

ಭಾರತದ 'ಆಪರೇಷನ್ ಸಿಂಧೂರ್'ಗೆ ಪ್ರತೀಕಾರಕ್ಕೆ ಸೇನೆಗೆ ಪೂರ್ಣ ಅಧಿಕಾರ ನೀಡಿದ ಪಾಕ್

ಇಸ್ಲಾಮಾಬಾದ್, ಮೇ 7– ಭಾರತವು 'ಆಪರೇಷನ್ ಸಿಂಧೂರ್' ಹೆಸರಿನಲ್ಲಿ ಕ್ಷಿಪಣಿ ದಾಳಿ ನಡೆಸಿದ ಬೆನ್ನಲ್ಲೇ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ನೇತೃತ್ವದಲ್ಲಿ ರಾಷ್ಟ್ರೀಯ ಭದ್ರತಾ ಪರಿಷತ್ತಿನ (ಎನ್ ಎಸ್‌ಸಿ) ಸಭೆ ನಡೆಯಿತು.



ಶೆಹಬಾಜ್ ಶರೀಫ್

ಸಂಪುಟ ಸಚಿವರು, ಮುಖ್ಯಮಂತ್ರಿಗಳು, ಸೇನೆ, ವಾಯು ಮತ್ತು ನೌಕಾಪಡೆಗಳ ಮುಖ್ಯಸ್ಥರು ಹಾಗೂ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ವಿಶ್ವಸಂಸ್ಥೆ ಸನ್ನದಿನ 51ನೇ ವಿಧಿ ಪ್ರಕಾರ, ಪಾಕಿಸ್ತಾನಕ್ಕೆ ಆತ್ಮರಕ್ಷಣೆ ಮತ್ತು ಪ್ರತೀಕಾರದ ಹಕ್ಕಿದೆ. ಭಾರತದ ದಾಳಿಯಿಂದ ಮುಗ್ಧ ಪಾಕಿಸ್ತಾನಿಗಳು ಜೀವ ಕಳೆದುಕೊಂಡಿದ್ದಾರೆ. ಇದು ಪಾಕಿಸ್ತಾನದ ಸಾರ್ವಭೌಮತ್ವದ ಸ್ಪಷ್ಟ ಉಲ್ಲಂಘನೆ. ಹೀಗಾಗಿ ಪ್ರತೀಕಾರದ ಹಕ್ಕನ್ನು ಕಾಯ್ದಿರಿಸಿಕೊಂಡಿದ್ದು, ಸೂಕ್ತ ಸಮಯದಲ್ಲಿ ನಿರ್ಧರಿಸುತ್ತೇವೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ. ಈ ಸಂಬಂಧ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಪಾಕಿಸ್ತಾನದ ಸೇನೆಗೆ ನೀಡಲಾಗಿದೆ ಎಂದು ಅದು ಹೇಳಿದೆ.

ಅಂತರರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸಿ, ನ್ಯಾಯಸಮ್ಮತವಲ್ಲದ ದಾಳಿ ನಡೆಸಿರುವ ಭಾರತದ ಮೇಲೆ ಈ ಕೃತ್ಯದ ಹೊಣೆಯನ್ನು ಹೊರಿಸಿ, ಅಂತರರಾಷ್ಟ್ರೀಯ ಸಮುದಾಯ ಕ್ರಮ ತೆಗೆದುಕೊಳ್ಳಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು ಎಂದು ಪ್ರಕಟಣೆ ತಿಳಿಸಿದೆ. ಭಯೋತ್ಪಾದಕ ಶಿಬಿರಗಳು ಎಂಬ ನೆಪದಲ್ಲಿ ಭಾರತವು ನಾಗರಿಕ ಪ್ರದೇಶಗಳನ್ನು ಗುರಿಯಾಗಿಸಿದೆ. ಈ ಮೂಲಕ ಮಕ್ಕಳು, ಮಹಿಳೆಯರು ಮತ್ತು ನಾಗರಿಕರ ಮೇಲೆ ದಾಳಿ ನಡೆಸಿದೆ. ಮಸೀದಿ ಸೇರಿದಂತೆ ಹಲವು ಮೂಲಸೌಕರ್ಯಗಳಿಗೆ ಹಾನಿಯಾಗಿದೆ ಎಂದು ಅದು ಹೇಳಿದೆ.

ಪಾಕಿಸ್ತಾನದ ಭಯೋತ್ಪಾದಕ ಮೂಲ ಸೌಕರ್ಯವನ್ನು ಸಂಪೂರ್ಣ ನಾಶಮಾಡಿ

ನವದೆಹಲಿ, ಮೇ.7–ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯನ್ನು ಎಐಎಂಐಎಂ ಮುಖ್ಯಸ್ಥ ಮತ್ತು ಸಂಸದ ಅಸಾದುದ್ದೀನ್ ಓವೈಸಿ ಸ್ವಾಗತಿಸಿದ್ದಾರೆ. ಪಾಕಿಸ್ತಾನದ ಭಯೋತ್ಪಾದಕ ಮೂಲಸೌಕರ್ಯವನ್ನು ಸಂಪೂರ್ಣವಾಗಿ ನಾಶಮಾಡಿ ಎಂದು ಓವೈಸಿ ಭಾರತೀಯ ಸಶಸ್ತ್ರ ಪಡೆಗಳಿಗೆ ಕರೆ ನೀಡಿದ್ದಾರೆ. ಪಾಕಿಸ್ತಾನದ ದುಷ್ಟ ಶಕ್ತಿಗಳಿಗೆ ಕಠಿಣ ಪಾಠ ಕಲಿಸಬೇಕು ಎಂದು ಒತ್ತಿ ಹೇಳಿದ್ದಾರೆ. ನಮ್ಮ ರಕ್ಷಣಾ ಪಡೆಗಳು ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ನೆಲೆಗಳ ಮೇಲೆ ನಡೆಸಿದ ದಾಳಿಯನ್ನು ನಾನು ಸ್ವಾಗತಿಸುತ್ತೇನೆ. ಪಾಕಿಸ್ತಾನದ ದುಷ್ಟ ಶಕ್ತಿಗಳಿಗೆ ಕಠಿಣ ಪಾಠ ಕಲಿಸಬೇಕು. ಆಗ ಇಂತಹ ಪಹಲ್ಗಾಮ್ ದುರಂತಗಳು ಮರುಕಳಿಸುವುದಿಲ್ಲ. ಪಾಕಿಸ್ತಾನದ ಭಯೋತ್ಪಾದಕ ಮೂಲಸೌಕರ್ಯವನ್ನು ಸಂಪೂರ್ಣವಾಗಿ ನಾಶ ಮಾಡಬೇಕು. 'ಜೈ ಹಿಂದ್' ಎಂದು ಬರೆದಿದ್ದಾರೆ.



LoC, IBಯಲ್ಲಿ ಪಾಕಿಸ್ತಾನ ಸೇನೆ ಅಪ್ರಚೋದಿತ ಗುಂಡಿನ ದಾಳಿ: 15 ನಾಗರಿಕರು ಸಾವು, 50 ಮಂದಿಗೆ ಗಾಯ

ನವದೆಹಲಿ, ಮೇ 7– ಜಮ್ಮು ಮತ್ತು ಕಾಶ್ಮೀರದಾದ್ಯಂತದ ಅಂತಾರಾಷ್ಟ್ರೀಯ ಗಡಿ ನಿಯಂತ್ರಣ ರೇಖೆಯಲ್ಲಿ ಮತ್ತು ಫಿರಂಗಿದಳದೊಂದಿಗೆ ನಡೆದ ಪ್ರಮುಖ ಗುಂಡಿನ ಚಕಮಕಿಯಲ್ಲಿ ಮಹಿಳೆ ಮತ್ತು ಇಬ್ಬರು ಮಕ್ಕಳು ಸೇರಿದಂತೆ 15 ಜನರು ಮೃತಪಟ್ಟು 50 ಜನರು ಗಾಯಗೊಂಡಿದ್ದಾರೆ.

ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಒಂಬತ್ತು ಭಯೋತ್ಪಾದಕ ತಾಣಗಳ ಗುರಿಗಳ ಮೇಲೆ ಭಾರತ ಕ್ಷಿಪಣಿ ದಾಳಿ ನಡೆಸಿದ ನಂತರ ಪಾಕಿಸ್ತಾನ ಪಡೆಗಳು ನಡೆಸುತ್ತಿರುವ ಕದನ ವಿರಾಮ ಉಲ್ಲಂಘನೆ ದಾಳಿಗೆ ಭಾರತೀಯ ಸೇನೆಯು ಶೆಲ್ ದಾಳಿಗೆ ಸಮಾನ ಪ್ರಮಾಣದಲ್ಲಿ ಪ್ರತಿಕ್ರಿಯೆ ನೀಡುತ್ತಿದೆ.

ಎಲ್ಲಾ ಏಳು ನಾಗರಿಕರ ಸಾವುಗಳು ಅತ್ಯಂತ ಹಾನಿಗೊಳಗಾದ ಪೂಂಚ್ ಜಿಲ್ಲೆಯಲ್ಲಿ ವರದಿಯಾಗಿದ್ದು, ಇನ್ನೂ 25 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಾರಾಮುಲ್ಲಾ ಜಿಲ್ಲೆಯ ಉರಿ ಸೆಕ್ಟರ್‌ನಲ್ಲಿ ಹತ್ತು ಜನರು ಗಾಯಗೊಂಡರು. ರಾಜೌರಿ ಜಿಲ್ಲೆಯಲ್ಲಿ ಮೂವರು ಗಾಯಗೊಂಡರು. ಮೇ 06–07 ರ ರಾತ್ರಿ, ಪಾಕಿಸ್ತಾನ ಸೇನೆಯು ಜಮ್ಮು–ಕಾಶ್ಮೀರದ ಎದುರು ನಿಯಂತ್ರಣ ರೇಖೆ ಮತ್ತು ಐಬಿಯಾದ್ಯಂತ ಪೋಸ್ಟ್‌ಗಳಿಂದ ಫಿರಂಗಿ ಶೆಲ್ಲಿಂಗ್ ಸೇರಿದಂತೆ ಅನಿಯಂತ್ರಿತ ಗುಂಡಿನ ದಾಳಿ ನಡೆಸಿತು ಎಂದು ಸೇನೆ ತಿಳಿಸಿದೆ.

ಮೂವರು ಅಮಾಯಕ ನಾಗರಿಕರು ವಿವೇಚನಾರಹಿತ ಗುಂಡಿನ ದಾಳಿ ಮತ್ತು ಶೆಲ್ ದಾಳಿಯಲ್ಲಿ ಪ್ರಾಣ ಕಳೆದುಕೊಂಡರು. ಭಯೋತ್ಪಾದಕ ಮೂಲಸೌಕರ್ಯಗಳ ಮೇಲಿನ ಈ ನಿಖರ ದಾಳಿಗಳಲ್ಲಿ ಕ್ಷಿಪಣಿಗಳನ್ನು ಬಳಸಲಾಗಿದೆ.

ಪಾಕಿಸ್ತಾನದ ಸೇನೆಯು ಆರು ಸ್ಥಳಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಹೇಳಿದೆ. ಇವುಗಳಲ್ಲಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಬಹವಾಲ್ಪುರ್, ಜೈಶ್–ಎ–ಮೊಹಮ್ಮದ್ ಭಯೋತ್ಪಾದಕ ಕೇಂದ್ರ ಮತ್ತು ಲಷ್ಕರ್–ಎ–ತೈಬಾದ ಪ್ರಧಾನ ಕಚೇರಿ ಮುರಿಡ್ಕೆ ಸೇರಿವೆ.

ಇಂದು ಸರ್ವಪಕ್ಷ ಸಭೆ ಕರೆದ ಕೇಂದ್ರ ಸರ್ಕಾರ

ನವದೆಹಲಿ, ಮೇ 7– ಇಂದು ಬೆಳಗಿನ ಜಾವ ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂಧೂರ್ ಬಗ್ಗೆ ಮಾಹಿತಿ ನೀಡಲು ಕೇಂದ್ರ ಸರ್ಕಾರ ಗುರುವಾರ ಸರ್ವಪಕ್ಷ ಸಭೆ ಕರೆದಿದೆ. ನಾಳೆ ನಡೆಯುವ ಸರ್ವಪಕ್ಷ ಸಭೆಯ ಕುರಿತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಕೇಂದ್ರ ಸರ್ಕಾರ ಮೇ 8, 2025ರಂದು ಬೆಳಗ್ಗೆ 11 ಗಂಟೆಗೆ ದೆಹಲಿಯ ಸಂಸತ್ತಿನ ಗ್ರಂಥಾಲಯ ಕಟ್ಟಡದ ಸಮಿತಿ ಕೊಠಡಿ: G–074ರಲ್ಲಿ ಸರ್ವಪಕ್ಷ ನಾಯಕರ ಸಭೆಯನ್ನು ಕರೆದಿದೆ ಎಂದು ಕಿರಣ್ ರಿಜಿಜು ಅವರು ತಿಳಿಸಿದ್ದಾರೆ.

ಇದು ಬೇಗ ಮುಗಿಯಲಿ ಎಂದು ನಾನು ಆಶಿಸುತ್ತೇನೆ

'ಆಪರೇಷನ್ ಸಿಂಧೂರ್' ಬಗ್ಗೆ ಅಮೆರಿಕ ಅಧ್ಯಕ್ಷ ಟ್ರಂಪ್ ಪ್ರತಿಕ್ರಿಯೆ

ವಾಷಿಂಗ್ಟನ್, ಮೇ 7– ಪಹಲ್ಗಾಮ್ ಉಗ್ರ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ್' ವಿಚಾರ ತಿಳಿಯುತ್ತಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೊದಲ ಪ್ರತಿಕ್ರಿಯೆ ನೀಡಿದ್ದಾರೆ.



ಬುಧವಾರ ಮುಂಜಾನೆ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಭಯೋತ್ಪಾದಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಭಾರತೀಯ ಸೇನೆ ದಾಳಿ ನಡೆಸಿದ ಸ್ವಲ್ಪ ಸಮಯದ ನಂತರ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿಕ್ರಿಯೆ ನೀಡಿದ್ದು, ಎಲ್ಲಾ ಇಷ್ಟಕ್ಕೇ ಮುಕ್ತಾಯವಾಗುತ್ತದೆ ಎಂದು ಭಾವಿಸುತ್ತೇನೆ. ಯುದ್ಧವು ಬಹಳ ಬೇಗ ಕೊನೆಗೊಳ್ಳುತ್ತದೆ ಎಂದು ಆಶಿಸುತ್ತೇನೆ ಎಂದು ಹೇಳಿದರು. ಉಗ್ರರ ದಾಳಿ ನಾಚಿಕೆಗೇಡಿನ ಸಂಗತಿ. ಹಿಂದಿನ ಘಟನೆಗಳನ್ನು ಆಧರಿಸಿ ಏನಾದರೂ ಸಂಭವಿಸಲಿದೆ ಎಂದು ಜನರಿಗೆ ತಿಳಿದಿತ್ತು ಎಂದು ನಾನು ಭಾವಿಸುತ್ತೇನೆ ಎಂದು ಟ್ರಂಪ್ ಹೇಳಿದರು.

'ಆಪರೇಷನ್ ಸಿಂಧೂರ್'ಗೆ ಕಾಂಗ್ರೆಸ್ ಸಂಪೂರ್ಣ ಬೆಂಬಲ

ನವದೆಹಲಿ, ಮೇ 7–'ಆಪರೇಷನ್ ಸಿಂಧೂರ್'ಗೆ ಕಾಂಗ್ರೆಸ್ ಪಕ್ಷದ ಸಂಪೂರ್ಣ ಬೆಂಬಲ ಇದೆ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಪಾಕಿಸ್ತಾನದಲ್ಲಿರುವ ಉಗ್ರರ ಅಡಗುತಾಣಗಳ ಮೇಲೆ ಭಾರತೀಯ ಸೇನೆ ದಾಳಿ ನಡೆಸಿದ ಬಳಿಕ ಬುಧವಾರ ಕಾಂಗ್ರೆಸ್ ಪಕ್ಷ ತುರ್ತು ಸಭೆ ಕರೆದಿತ್ತು. ಈ ಸಭೆಯ ಬಳಿಕ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.



ಭಾರತೀಯ ಸೇನೆಗೆ ಕಾಂಗ್ರೆಸ್ ಪಕ್ಷದ ಸಂಪೂರ್ಣ ಬೆಂಬಲ ಇದೆ. ನಮ್ಮ ಸೈನಿಕರಿಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಅವರಿಗೆ ಶುಭವಾಗಲಿ. ಕಾಂಗ್ರೆಸ್ ಪಕ್ಷ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅವರೊಂದಿಗೆ ಇದೆ ಎಂದು ಸಭೆ ಬಳಿಕ ರಾಹುಲ್ ಗಾಂಧಿ ಭರವಸೆ ನೀಡಿದ್ದಾರೆ.

ಸೇನೆಯನ್ನು ಹೊಗಳಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಮ್ಮ ಸಶಸ್ತ್ರ ಪಡೆಗಳು ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡಿವೆ. ಅವರ ಧೈರ್ಯ ಮತ್ತು ನಿರ್ಣಾಯಕ ಕ್ರಮಕ್ಕೆ ನಾವು ಹೆಮ್ಮೆಪಡುತ್ತೇವೆ ಎಂದು ನುಡಿದರು.

ಈ ಸಭೆಯಲ್ಲಿ ಎಐಸಿಸಿ ಖಜಾಂಚಿ ಅಜಯ್ ಮಾಕನ್, ಮಾಜಿ ಲೋಕಸಭಾ ಸ್ಪೀಕರ್ ಮೀರಾ ಕುಮಾರ್, ಸಂಸದರಾದ ಪ್ರಿಯಾಂಕಾ ಗಾಂಧಿ ವಾದ್ರಾ, ಜೈರಾಮ್ ರಮೇಶ್, ರಣದೀಪ್ ಸುರ್ಜೇವಾಲಾ, ಮಾಜಿ ಕೇಂದ್ರ ಸಚಿವ ಆನಂದ್ ಶರ್ಮಾ, ಲೋಕಸಭೆಯ ಕಾಂಗ್ರೆಸ್ ಉಪನಾಯಕ ಗೌರವ್ ಗೊಗೊಯ್



ಅತೀ ವಿಶೇಷವಾದುದು 'ಆಪರೇಷನ್ ಸಿಂಧೂರ್'!

ನವದೆಹಲಿ, ಮೇ 7– ಹಲವು ಕಾರಣಗಳಿಂದಾಗಿ ಆಪರೇಷನ್ ಸಿಂಧೂರ್ ಪಾಕ್ ವಿರುದ್ಧದ ಭಾರತದ ಉಳಿದೆಲ್ಲಾ ಕಾರ್ಯಾಚರಣೆಗಳಿಗಿಂತಲೂ ಭಿನ್ನವಾದ ಗುರಿ, ನಿರ್ದಿಷ್ಟ ಕಾರ್ಯಾಚರಣೆ ಎಂಬ ಹೆಗ್ಗಳಿಕೆ ಪಡೆದುಕೊಂಡಿದೆ. 2016 ಉರಿ ಸರ್ಜಿಕಲ್ ಸ್ಟ್ರೈಕ್, 2019ರ ಬಾಲಾಕೋಟ್ ವೈಮಾನಿಕ ದಾಳಿಗಿಂತಲೂ ಈ ಬಾರಿ ನಡೆದಿರುವ ಆಪರೇಷನ್ ಸಿಂಧೂರ್ ದಾಳಿ ತಾಂತ್ರಿಕವಾಗಿಯೂ ಅತ್ಯಂತ ಮುಂದುವರಿದ ಸುಸಜ್ಜಿತ ದಾಳಿ ಎನ್ನಲಾಗುತ್ತಿದೆ.

ತಾಂತ್ರಿಕವಾಗಿ ಬಲಿಷ್ಠ, ವಿಸ್ತಾರವಾಗಿದ್ದ ಆಪರೇಷನ್ ಸಿಂಧೂರ್ ಮೂಲಕ ಪಾಕಿಸ್ತಾನ ಆಕ್ರಮಿತ ಪ್ರದೇಶದೊಳಗೆ ಆಳವಾಗಿ ದಾಳಿ ಮಾಡಲಾಗಿದೆ. ಈ ಮೂಲಕ ಹಿಂದಿನ ಎಲ್ಲಾ ಕ್ರಮಗಳಿಗಿಂತ ಭಿನ್ನವಾದ ಕ್ರಮವನ್ನು ಈ ದಾಳಿಯಲ್ಲಿ ಅನುಸರಿಸಲಾಗಿದೆ. ಬಾಲಕೋಟ್ ಕಾರ್ಯಾಚರಣೆಯ ನಂತರ ಭಾರತ ನಡೆಸಿದ ಅತ್ಯಂತ ವಿಸ್ತಾರವಾದ ಗಡಿಯಾಚೆಗಿನ ದಾಳಿ ಆಪರೇಷನ್ ಸಿಂಧೂರ್ ಆಗಿದ್ದು, ಭಾರತದ ಕಾರ್ಯತಂತ್ರದ ನಿಲುವಿನಲ್ಲಿ ವಿಕಸನವನ್ನೂ ಪ್ರತಿನಿಧಿಸುತ್ತಿದೆ. ಆಪರೇಷನ್ ಸಿಂಧೂರ್ ಕೇವಲ ಪ್ರತೀಕಾರದ ಬಲಪ್ರದರ್ಶನವಾಗಿ ಮಾತ್ರವಲ್ಲದೆ, ಪಾಕಿಸ್ತಾನಿ ನೆಲದಿಂದ ಹುಟ್ಟಿಕೊಂಡ ಭಯೋತ್ಪಾದನೆಯ ಮತ್ತು ಕಾರ್ಯಾಚರಣೆಯ ಅಡಿಪಾಯವನ್ನು ನಿರ್ನಾಮ ಮಾಡುವ ಕಾರ್ಯಾಚರಣೆಯೂ ಆಗಿದೆ.




ಟಾರ್ಗೆಟ್‌ನ ವಿಶೇಷತೆಗಳು: ಈ ಕಾರ್ಯಾಚರಣೆಯ ಮೂಲಕ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಾದ್ಯಂತ ಒಂಬತ್ತು ಸ್ಥಳಗಳನ್ನು ಹೊಡೆದುರುಳಿಸಲಾಗಿದೆ. ಇವುಗಳಲ್ಲಿ ಮುಜಫರಾಬಾದ್, ಕೋಟ್ಲಿ, ಬಹವಾಲ್ಪುರ್, ರಾವಲಕೋಟ್, ಚಕ್ಸ್ವಾರಿ, ಭಿಂಬರ್, ನೀಲಂ ಕಣಿವೆ, ಝೀಲಂ ಮತ್ತು ಚಕ್ವಾಲ್ ಸೇರಿವೆ. ಒಟ್ಟು ಕ್ಷಿಪಣಿ ದಾಳಿಗಳ ಸಂಖ್ಯೆ 24 ಆಗಿದ್ದು, ಇದು ಭಾರತ ಇದುವರೆಗೆ ನಿರ್ವಹಿಸಿದ ಅತ್ಯಂತ ವ್ಯಾಪಕವಾದ ಏಕದಿನ ನಿಖರ ಕಾರ್ಯಾಚರಣೆಯಾಗಿದೆ ಎಂಬ ಹೆಗ್ಗಳಿಕೆಯನ್ನು ಹೊಂದಿದೆ. ಸಂಘಟಿತ ದಾಳಿಯಲ್ಲಿ ನೂರಕ್ಕೂ ಹೆಚ್ಚು ಉಗ್ರರು ಸಾವನ್ನಪ್ಪಿದ್ದಾರೆ ಮತ್ತು 60 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ.

ದಾಳಿಗೆ ಗುರಿಯಾದ ಪ್ರತಿಯೊಂದು ಸ್ಥಳವು ದೀರ್ಘಕಾಲದ ಕಣ್ಗಾವಲಿನಲ್ಲಿತ್ತು. ಸರ್ಕಾರಿ ಮೂಲಗಳ ಪ್ರಕಾರ ಭಾರತೀಯ ಗುಪ್ತಚರ ಇಲಾಖೆ ಉಪಗ್ರಹ ಚಿತ್ರಣ, ಮಾನವ ಮೂಲಗಳು ಮತ್ತು ಸಂವಹನಗಳನ್ನು ಒಟ್ಟುಗೂಡಿಸಿ ಜೈಶ್–ಎ–ಮೊಹಮ್ಮದ್ (ಜೆಇಎಂ) ಮತ್ತು ಲಷ್ಕರ್–ಎ–ತೈಬಾ (ಎಲ್‌ಇಟಿ) ನಂತಹ ಗುಂಪುಗಳನ್ನು ಟಾರ್ಗೆಟ್ ಮಾಡಿ ದಾಳಿ ನಡೆಸಲಾಗಿದೆ. ಆಪರೇಷನ್ ಸಿಂಧೂರ್ ಕಾರ್ಯಾಚರಣೆಯು ವಾಯು, ನೌಕಾ ಮತ್ತು ಭೂ–ಆಧಾರಿತ ಸ್ವತ್ತುಗಳ ನಿಯೋಜನೆಯನ್ನು ಒಳಗೊಂಡಿತ್ತು. ಈ ಕಾರ್ಯಾಚರಣೆಯು ವಾಯು–ಉಡಾವಣಾ SCALP ಕ್ರೂಸ್ ಕ್ಷಿಪಣಿಗಳು, HAMMER ನಿಖರ–ನಿರ್ದೇಶಿತ ಬಾಂಬ್‌ಗಳಂತಹ ಯುದ್ಧಸಾಮಗ್ರಿಗಳನ್ನು ಬಳಸಿಕೊಂಡಿದೆ. 250 ಕಿ.ಮೀ.ಗಿಂತ ಹೆಚ್ಚಿನ ವ್ಯಾಪ್ತಿಯನ್ನು ಹೊಂದಿರುವ SCALP (ಸ್ಟಾರ್ಮ್ ಶ್ಯಾಡೋ) ಕ್ಷಿಪಣಿಗಳನ್ನು ಬಲವರ್ಧಿತ ಬಂಕರ್‌ಗಳು ಮತ್ತು ಕಮಾಂಡ್ ಪೋಸ್ಟ್‌ಗಳು ಸೇರಿದಂತೆ ಗಟ್ಟಿ ಗುರಿಗಳನ್ನು ಹೊಡೆಯಲು ಬಳಸಲಾಗಿದೆ.

ತರಬೇತಿ ಮಾಡ್ಯೂಲ್‌ಗಳು ಮತ್ತು ಕಾರ್ಯಾಚರಣೆಯ ನಾಯಕತ್ವವನ್ನು ಹೊಂದಿದೆ ಎಂದು ನಂಬಲಾದ ಬಹುಮಹಡಿ ಕಟ್ಟಡಗಳ ಮೇಲೆ ಹ್ಯಾಮರ್ (ಹೈಲಿ ಅಗೈಲ್ ಮಾಡ್ಯುಲರ್ ಮ್ಯೂನಿಷನ್ ಎಕ್ಸ್‌ಟೆಂಡೆಡ್ ರೇಂಜ್) ಬಾಂಬ್‌ಗಳನ್ನು ಬಳಸಲಾಯಿತು. ಕಾಮಿಕೇಜ್ ಡ್ರೋನ್‌ಗಳು ಎಂದೂ ಕರೆಯಲ್ಪಡುವ ಯುದ್ಧಸಾಮಗ್ರಿಗಳು ನೈಜ–ಸಮಯದ ಕಣ್ಗಾವಲು ಒದಗಿಸುವುದು ಮತ್ತು ಹೆಚ್ಚಿನ ಮೌಲ್ಯದ ಮೊಬೈಲ್ ಗುರಿಗಳು ಹೊರಹೊಮ್ಮುತ್ತಿದ್ದಂತೆ ಅವುಗಳನ್ನು ಹೊಡೆಯುವ ಉಭಯ ಪಾತ್ರವನ್ನು ನಿರ್ವಹಿಸಿವೆ.

ಮೈಸೂರು ಮಿತ್ರ

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ



ಮಂಡ್ಯ: ಡೈರಿ ಫೀಡರ್‌ಗಳ ಮಾರ್ಗಗಳಲ್ಲಿ ತುರ್ತು ಕಾರ್ಯ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 9 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಅಸಿಟೇಟ್ ಟೌನ್, ಡಿ.ಜಿ.ದೊಡ್ಡಿ, ಫ್ಯಾಕ್ಟರಿ ವೃತ್ತ, ಮತ್ತು ಬೆಂಗಳೂರು ಮುಖ್ಯ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಗ್ರಾಮಾಂತರ ಪ್ರದೇಶಗಳಾದ ಮರಕಾಡುದೊಡ್ಡಿ, ಶ್ರೀನಿವಾಸಪುರ ಗೇಟ್, ಮಲ್ಲಯ್ಯನದೊಡ್ಡಿ ಕಟ್ಟೆದೊಡ್ಡಿ, ಬಿ.ಗೌಡಗೆರೆ, ಹೊಸಬೂದನೂರು, ಹಳೇಬೂದನೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳು ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

2.20 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿಗೆ ಶಾಸಕ ಉದಯ್ ಚಾಲನೆ


ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಉದಯ್ ಗುದ್ದಲಿ ಪೂಜೆ ನೆರವೇರಿಸಿದರು.

ಭಾರತೀನಗರ, ಮೇ 7– ಭಾರತೀನಗರದಲ್ಲಿ 2.20 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಉದಯ್ ಗುದ್ದಲಿ ಪೂಜೆ ನೆರವೇರಿಸಿದರು.

ಲೋಕೋಪಯೋಗಿ ಇಲಾಖೆ ವತಿಯಿಂದ ಭಾರತೀನಗರದಿಂದ ಆಲಭುಜನಹಳ್ಳಿ, ಕ್ಯಾತಘಟ್ಟ, ತೊರೆಚಾಕನಹಳ್ಳಿ ಮುಖಾಂತರ ಕೆ.ಬೆಳ್ಳೂರು ಸೇರುವ 1.20 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಸರ್ಕಾರದ ವಿವಿಧ ಇಲಾಖೆಗಳಿಂದ ಹಣ ಬಿಡುಗಡೆಗೊಳಿಸಿ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದೇನೆ. ಕಳೆದ 20 ವರ್ಷಗಳಿಂದ ಆಗಬೇಕಾಗಿದ್ದ ಹಲವಾರು ಕಾಮಗಾರಿಗಳಿಗೆ ನನ್ನ ಅವಧಿಯಲ್ಲಿ ಚಾಲನೆ ನೀಡುತ್ತಿದ್ದೇನೆ. ಅನೇಕ ಗ್ರಾಮಗಳಲ್ಲಿ ರಸ್ತೆ, ಚರಂಡಿ ಕಾಮಗಾರಿಗಳನ್ನು ಮಾಡಿಸಿಕೊಡುವಂತೆ ಮನವಿ ಮಾಡಿದ ಮೇರೆಗೆ ಕಳೆದ ಮೂರು ತಿಂಗಳಿಂದ ಕಾಮಗಾರಿಗಳಿಗೆ ಚಾಲನೆ ನೀಡುತ್ತಿದ್ದೇನೆ ಎಂದರು.

ಭಾರತೀನಗರದಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಇರುವುದರಿಂದ ವಾಹನ ದಟ್ಟಣೆ ಆಲಭುಜನಹಳ್ಳಿ ರಸ್ತೆಯಲ್ಲಿ ಹೆಚ್ಚಾಗಿ ಸಂಚರಿಸುತ್ತವೆ. ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದ ಹಿನ್ನೆಲೆಯಲ್ಲಿ ಆಲಭುಜನ ಹಳ್ಳಿವರೆಗೆ 2.20 ಕೋಟಿ ರೂ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಪಡಿಸಲು ಮುಂದಾಗಿದ್ದೇನೆ ಎಂದರು.

ಶ್ರೀ ಲಕ್ಷ್ಮಿ ಜನಾರ್ದನಸ್ವಾಮಿಯ ವೈಭವದ ಬ್ರಹ್ಮರಥೋತ್ಸವ

ಮಂಡ್ಯ: ನಗರದ ಅದಿದೇವತೆ ಶ್ರೀ ಲಕ್ಷ್ಮಿ ಜನಾರ್ದನ ಸ್ವಾಮಿಯ ಬ್ರಹ್ಮ ರಥೋತ್ಸವ ಇಂದು ಭಕ್ತರ ಜಯಘೋಷದ ನಡುವೆ ಸಂಭ್ರಮ–ಸಡಗರದಿಂದ ನಡೆಯಿತು.

ಕಳೆದ ಏ.30ರಿಂದ ಬ್ರಹ್ಮೋತ್ಸವದ ಕಾರ್ಯಕ್ರಮಗಳು ಆರಂಭವಾಗಿದ್ದು, ದೇವರಿಗೆ ಅಭಿಷೇಕ, ಮೃತ್ತಿಕಾ ಸಂಗ್ರಹಣ, ಪೂರ್ವಕ ಅಂಕುರಾರ್ಪಣ, ನಿತ್ಯ ಪೂಜೆ, ಹಂಸ ವಾಹನೋತ್ಸವ, ಶ್ರೀ ರಾಮಾನುಜಾಚಾರ್ಯ ತಿರುನಕ್ಷತ್ರ, ಶೇಷವಾಹನೋತ್ಸವ, ಮುಡಿ ಉತ್ಸವ, ಪ್ರಹ್ಲಾದ ಪರಿಪಾಲನೋತ್ಸವ, ಗರುಡೋತ್ಸವ ಗಜೇಂದ್ರ ಮೋಕ್ಷ ಉತ್ಸವ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳನ್ನು ನಡೆಸಲಾಯಿತು.

ಇಂದು ಬೆಳಗ್ಗೆ ದೇವಾಲಯದ ಆವರಣದೊಳಗೆ ರಥವನ್ನು ಶೃಂಗರಿಸಿ ವಿಶೇಷ ಪೂಜೆ ನಡೆಸಲಾಯಿತು. ನಂತರ ಮಧ್ಯಾಹ್ನ ಸುಮಾರು 1.30ರ ಸಮಯದಲ್ಲಿ ದೇವಸ್ಥಾನದ ಆವರಣದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ನಂತರ ಭಕ್ತರ ಗೋವಿಂದ ನಾಮಸ್ಮರಣೆಯೊಂದಿಗೆ ರಥವನ್ನು ಎಳೆಯಲಾಯಿತು. ಸಹಸ್ರಾರು ಮಂದಿ ಭಕ್ತರು ಈ ಸಂದರ್ಭದಲ್ಲಿ ಹಾಜರಿದ್ದರು. ಬಳಿಕ ದೇವಾಲಯದ ವತಿಯಿಂದ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಮಂಡ್ಯ ಜಿಲ್ಲೆಗೆ ಉಪ ಲೋಕಾಯುಕ್ತರ ಭೇಟಿ

ಬಾಕಿ ಪ್ರಕರಣಗಳ ವಿಚಾರಣೆ, ಸಾರ್ವಜನಿಕರಿಂದ ದೂರು ಸ್ವೀಕಾರ


ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವ ಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿದರು.

ಮಂಡ್ಯ: ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಮೇ 28ರಿಂದ 31ರವರೆಗೆ ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ತನಿಖೆಗೆ ಬಾಕಿ ಇರುವ ಪ್ರಕರಣಗಳ ವಿಚಾರಣೆ ನಡೆಸಲಿದ್ದಾರೆ ಹಾಗೂ ಸಾರ್ವಜನಿಕರಿಂದ ದೂರು ಸಹ ಸ್ವೀಕರಿಸಿ ವಿಚಾರಣೆ ನಡೆಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಉಪ ಲೋಕಾಯುಕ್ತರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲು ಅಪರ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿ, ಆಹಾರ ಇಲಾಖೆಯ ಜಂಟಿ ನಿರ್ದೇಶಕರು, ಹಾಗೂ ತಹಸೀಲ್ದಾರ್ ಒಳಗೊಂಡಂತೆ ಸಮಿತಿಯನ್ನು ರಚಿಸಿದರು.

ಉಪಲೋಕಾಯುಕ್ತರು ಆಗಮಿಸಿದ ಸಂದರ್ಭದಲ್ಲಿ ಅವರು ವಾಸ್ತವ್ಯ ಹೂಡುವ ಪ್ರವಾಸಿ ಮಂದಿರದಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು, ಲೋಕಾಯುಕ್ತರ ಜೊತೆ ಆಗಮಿಸಲಿರುವ ಅಧಿಕಾರಿಗಳ ಪಟ್ಟಿಯನ್ನು ತೆಗೆದುಕೊಂಡು ಸೂಕ್ತ ಕೊಠಡಿಯ ವ್ಯವಸ್ಥೆ ಮಾಡಬೇಕಿದೆ ಎಂದರು.

ಉಪ ಲೋಕಾಯುಕ್ತರಾದ ಬಿ.ವೀರಪ್ಪ ಅವರಿಗೆ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು. ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಲೋಕಾಯುಕ್ತ ಪ್ರಕರಣಗಳ ವಿಚಾರಣೆ ನಡೆಸಲಾಗುವುದು, ಭಾಗವಹಿಸುವ ಸಾರ್ವಜನಿಕರಿಗೆ ಬ್ಯಾರಿಕೇಡ್ ವ್ಯವಸ್ಥೆಯ ಮೂಲಕ ವಿವಿಧ ಗುಂಪುಗಳಾಗಿ ರಚಿಸಿ ಆಸನ ವ್ಯವಸ್ಥೆ ಕಲ್ಪಿಸಲಾಗುವುದು, ಆನ್‌ಲೈನ್ ತಂತ್ರಾಂಶದಲ್ಲಿ ಸಾರ್ವಜನಿಕರ ವಿವರಗಳು ನೊಂದಣಿ ಮಾಡಲಾಗುವುದು ಎಂದು ಹೇಳಿದರು.

ಎಲ್ಲಾ ಗ್ರಾಮ ಪಂಚಾಯಿತಿಯ ಪಿ.ಡಿ.ಓ.ಗಳು ಉಪಲೋಕಾಯುಕ್ತರು ಆಗಮಿಸುವ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಲು ಬ್ಯಾನರ್‌ಗಳನ್ನು ಅಳವಡಿಸಬೇಕು, ಲೋಕಾಯುಕ್ತ ಪ್ರಕರಣಗಳ ವಿಚಾರಣೆ ನಡೆಯುವ ಸ್ಥಳದಲ್ಲಿ ಕಂಪ್ಯೂಟರ್, ಕಂಪ್ಯೂಟರ್ ಆಪರೇಟರ್‌ಗಳು, ಇಂಟರ್ನೆಟ್, ಹಾಗೂ ಸ್ಟೆನೋಗ್ರಾಫರ್ ಇರಬೇಕು, ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ಉಪ ವಿಭಾಗಾಧಿಕಾರಿ ಶಿವಮೂರ್ತಿ, ಮಂಡ್ಯ ತಹಸೀಲ್ದಾರ್ ಶಿವಕುಮಾರ್ ಬಿರಾದರ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕ ಕೃಷ್ಣಕುಮಾರ್, ನಗರಸಭೆ ಪೌರಾಯುಕ್ತ ಪಂಪಶ್ರೀ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮೇಳಾಪುರ ಸೊಸೈಟಿಗೆ ಅಧ್ಯಕ್ಷರಾಗಿ ವಿರೂಪಾಕ್ಷ, ಉಪಾಧ್ಯಕ್ಷರಾಗಿ ಚನ್ನಮ್ಮ ಅವಿರೋಧ ಆಯ್ಕೆ


ಮೇಳಾಪುರ ಸೊಸೈಟಿ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ಶ್ರೀರಂಗಪಟ್ಟಣ: ಮೇಳಾಪುರ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ವಿರೂಪಾಕ್ಷ ಹಾಗೂ ಉಪಾಧ್ಯಕ್ಷರಾಗಿ ಚಂದಗಾಲು ಚನ್ನಮ್ಮ ಅವಿರೋಧವಾಗಿ ಆಯ್ಕೆಯಾದರು.

ಒಟ್ಟು ಮೇಳಾಪುರ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 12 ಮಂದಿ ನಿರ್ದೇಶಕರಿದ್ದು, ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಕೂಟದಿಂದ ಅಧ್ಯಕ್ಷಗಾದಿಗೆ ಎನ್.ವಿರೂಪಾಕ್ಷ, ಉಪಾಧ್ಯಕ್ಷಗಾದಿಗೆ ಚನ್ನಮ್ಮ ಹೊರತು ಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆ ಚುನಾವಣಾಧಿಕಾರಿ ಸಿಡಿಓ ಪಾರ್ವತಮ್ಮ ಅವಿರೋಧ ಆಯ್ಕೆ ಘೋಷಣೆ ಮಾಡಿದರು. ಕಾರ್ಯದರ್ಶಿ ಉಮೇಶ್ ಚುನಾವಣಾ ಸಹಾಯಕರಾಗಿದ್ದರು ತಾಪಂ ಮಾಜಿ ಅಧ್ಯಕ್ಷ ಟಿ.ಶ್ರೀಧರ್, ಗ್ರಾಪಂ ಮಾಜಿ ಅಧ್ಯಕ್ಷ ಬೆಟ್ಟೆಗೌಡ ನಿರ್ದೇಶಕರಾದ ಅಶೋಕ್, ಶ್ರೀನಿವಾಸ್, ಪರಮೇಶ್, ಮಹದೇವು, ರಮೇಶ್, ಕೃಷ್ಣಬಾಬು, ಮಂಜುಳ, ತೇಜು ಸೋಮಣ್ಣಸ್ವಾಮಿ, ಆರ್ ಪ್ರದೀಪ್ ಧನಂಜಯ್ಯ, ಅಶೋಕ್ ಎಂಎಂ ಸೇರಿದಂತೆ ಗ್ರಾಮಸ್ಥರು ನೂತನ ಅಧ್ಯಕ್ಷ ಉಪಾಧ್ಯಕ್ಷರಿಗೆ ಅಭಿನಂಧಿಸಿದರು.

ಪಾಲಹಳ್ಳಿ ಸೆಂಟ್ ಆನ್ಸ್ ಆಂಗ್ಲ ಪ್ರೌಢ ಶಾಲೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ95ರಷ್ಟು ಫಲಿತಾಂಶ


ಲೋಹಿತ್ ಗೌಡ


ನಾಗಮಣಿ

ಪಾಲಹಳ್ಳಿ: ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ಸೇಂಟ್ ಆನ್ಸ್ ಆಂಗ್ಲ ಪ್ರೌಢ ಶಾಲೆಯು 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡ 95ರಷ್ಟು ಫಲಿತಂಶ ಪಡೆದುಕೊಂಡಿದೆ. ಶಾಲೆಯ ವಿದ್ಯಾರ್ಥಿ ಲೋಹಿತ್ ಗೌಡ ಪಿ.ಜೆ 598 ಅಂಕ ಪಡೆದು ಶಾಲೆಗೆ ಪ್ರಥಮ ಹಾಗೂ ನಾಗಮಣಿ 571 ಅಂಕವನ್ನು ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ ಎಂದು ಶಾಲೆಯ ಪ್ರಕಟಣೆ ತಿಳಿಸಿದೆ.

ಹಾವು ಕಡಿದು ರೈತ ಸಾವು



ಭಾರತೀನಗರ: ಇಲ್ಲಿಗೆ ಸಮೀಪದ ಕುರಿಕೆಂಪನ ದೊಡ್ಡಿ ಗ್ರಾಮದಲ್ಲಿ ರೈತನಿಗೆ ಹಾವು ಕಚ್ಚಿ ಸಾವನ್ನಪ್ಪಿರುವ ಘಟನೆ ಜರುಗಿದೆ. ಗ್ರಾಮದ ನಿಂಗೇಗೌಡರ ಮಗ ಕೆ.ಎನ್.ಮಾದೇಗೌಡ(45) ಮೃತ ದುರ್ದೈವಿ. ಮಾದೇಗೌಡ ತಮ್ಮ ಜಮೀನಿನಲ್ಲಿ ಔಷಧಿ ಸಿಂಪಡಿಸುವ ವೇಳೆ ಹಾವು ಕಚ್ಚಿ ಸಾವನ್ನಪ್ಪಿದ್ದಾರೆ. ಕೆಎಂ.ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ಯಾತನಹಳ್ಳಿ ಸೊಸೈಟಿ ನಿರ್ದೇಶಕರಿಂದ ಅಭಿನಂದನೆ


ಪಾಂಡವಪುರ ತಾಲೂಕಿನ ಕ್ಯಾತನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನದ ಚುನಾವಣೆಯಲ್ಲಿ ಆಯ್ಕೆಯಾದ ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಅಭಿನಂಧಿಸಿದರು.

ವೈಭವದ ಶ್ರೀ ಸಿದ್ದೇಶ್ವರ ಸ್ವಾಮಿಯ ಬಂಡಿ ಉತ್ಸವ


ಪಾಂಡವಪುರ ತಾಲೂಕಿನ ಬನ್ನಂಗಾಡಿ ಗ್ರಾಮದಲ್ಲಿ ಶ್ರೀಸಿದ್ದೇಶ್ವರಸ್ವಾಮಿಯ ಬಂಡಿ ಉತ್ಸವ ಮತ್ತು ಪಟ್ಟೋತ್ಸವ ವಿಜೃಂಭಣೆಯಿಂದ ನಡೆಯಿತು. ಸಾವಿರಾರು ಭಕ್ತರು ಪಾಲ್ಗೊಂಡು ಉತ್ಸವ ಕಣ್ತುಂಬಿಕೊಂಡರು.

ಜಾತಿ ಗಣತಿದಾರರಿಗೆ ಹೂಮಳೆ ಸುರಿಸಿ ಅದ್ದೂರಿ ಸ್ವಾಗತ


ಪರಿಶಿಷ್ಟ ಜಾತಿಗಳ ಸಮೀಕ್ಷೆ ಮತ್ತು ಗಣತಿ ಕಾರ್ಯಕ್ಕೆ ಆಗಮಿಸಿದ ಗಣತಿದಾರರನ್ನು ಕೆ.ಆರ್.ಪೇಟೆ ತಾಲೂಕಿನ ಹೊಸಹೊಳಲು ಪಟ್ಟಣದ ಡಾ.ಬಾಬು ಜಗಜೀವನರಾಂ ನಗರದಲ್ಲಿ ಹೂಮಳೆ ಸುರಿಸಿ ಸನ್ಮಾನಿಸಿ ಗೌರವಿಸುವ ಮೂಲಕ ಗಣತಿ ಮತ್ತು ದತ್ತಾಂಶ ಸಂಗ್ರಹ ಕಾರ್ಯಕ್ರಮಕ್ಕೆ ಬಡಾವಣೆಯ ನಿವಾಸಿಗಳು ಉತ್ಸಾಹದಿಂದ ಚಾಲನೆ ನೀಡಿದರು.

ರಾಷ್ಟ್ರಪತಿ ಭೇಟಿಯಾಗಿ ವಿವರಿಸಿದ ಮೋದಿ

ನವದೆಹಲಿ, ಮೇ 7– ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಯಾಗಿ, ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನಾ ಪಡೆಗಳು ಪಾಕ್ ಮತ್ತು ಪಿಓಕೆ ಉಗ್ರರ ಅಡಗು ತಾಣಗಳ ಮೇಲೆ ನಡೆಸಿರುವ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಬಗ್ಗೆ ಮಾಹಿತಿ ನೀಡಿದ್ದಾರೆ. ಭಾರತೀಯ ಸಶಸ್ತ್ರ ಪಡೆಗಳು ಬುಧವಾರ ಮುಂಜಾನೆ 'ಆಪರೇಷನ್ ಸಿಂಧೂರ್' ಪ್ರಾರಂಭಿಸಿದವು.



ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ 26 ಪ್ರವಾಸಿಗರು ಸಾವನ್ನಪ್ಪಿದ್ದರು. ದಾಳಿಗೆ ತಕ್ಕ ಪ್ರತೀಕಾರ ತೀರಿಸಿಕೊಳ್ಳಲಾಗುವುದು ಎಂದು ಭಾರತ ಸರ್ಕಾರ ಪ್ರತಿಜ್ಞೆ ಮಾಡಿತ್ತು.

ಮೂರನೇ ಪುಟದಿಂದ

ಆಪರೇಷನ್ ಸಿಂಧೂರ್

ಮಸೀದಿ ಸೇರಿದಂತೆ ಪ್ರಮುಖ ತಾಣಗಳು ಧ್ವಂಸವಾಗಿವೆ. ಉಗ್ರರ 9 ಸ್ಥಳಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಿದ್ದೇವೆ. ಯಾವುದೇ ಪಾಕಿಸ್ತಾನಿ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿಲ್ಲ ಎಂದು ಭಾರತೀಯ ಸೇನೆ ತಿಳಿಸಿದೆ. ಗುರಿ ಮಾಡಲಾದ 9 ಸ್ಥಳಗಳಲ್ಲಿ ಬಹಾವಲ್ಪುರದಲ್ಲಿರುವ ಜೈಶ್–ಎ–ಮೊಹಮ್ಮದ್ ಪ್ರಧಾನ ಕಚೇರಿ ಮತ್ತು ಮುರಿಡ್ಕೆಯಲ್ಲಿರುವ ಲಷ್ಕರ್–ಎ–ತೈಬಾ ಸೇರಿವೆ ಎಂದು ಮೂಲಗಳು ತಿಳಿಸಿವೆ. 8 ಗುರಿಗಳಲ್ಲಿ 4 ಪಾಕಿಸ್ತಾನದಲ್ಲಿ ಮತ್ತು ಐದು ಪಾಕ್ ಆಕ್ರಮಿತ ಕಾಶ್ಮೀರದಲ್ಲಿದ್ದವು. ಪಾಕಿಸ್ತಾನದಲ್ಲಿರುವ ಗುರಿಗಳಲ್ಲಿ ಬಹಾವಲ್ಪುರ್, ಮುರಿಡ್ಕೆ ಮತ್ತು ಸಿಯಾಲ್‌ಕೋಟ್ ಸೇರಿವೆ. ಭಯೋತ್ಪಾದಕ ಶಿಬಿರಗಳನ್ನು ಗುರಿಯಾಗಿಸಲು ವಿಶೇಷ ನಿಖರ ಯುದ್ಧಸಾಮಗ್ರಿಗಳನ್ನು ಬಳಸಲಾಗಿದೆ. ಇಂದಿನ ದಾಳಿ ಪಾಕಿಸ್ತಾನ ಬೆಂಬಲಿತ ಉಗ್ರಗಾಮಿ ಗುಂಪುಗಳ ಮೇಲೆ ನಡೆಸಲಾಗಿದೆ ಎಂದು ಭಾರತದ ಸೇನೆ ಹೇಳಿಕೊಂಡಿದೆ. ಈ ಕಾರ್ಯಾಚರಣೆಯನ್ನು ಭಾರತೀಯ ಸೇನೆ, ನೌಕಾಪಡೆ ಮತ್ತು ವಾಯುಪಡೆ ಜಂಟಿಯಾಗಿ ನಡೆಸಿದ್ದು, ಪಡೆಗಳು ಮತ್ತು ಸುಧಾರಿತ ಸ್ವತ್ತುಗಳ ಸಂಘಟಿತ ಸಜ್ಜುಗೊಳಿಸುವಿಕೆಯನ್ನು ಒಳಗೊಂಡಿತ್ತು. ಭಾರತೀಯ ಸಶಸ್ತ್ರ ಪಡೆಗಳು, ವಿಶೇಷ ನಿಖರ ಯುದ್ಧಸಾಮಗ್ರಿಗಳನ್ನು ಬಳಸಿಕೊಂಡು ಪಾಕಿಸ್ತಾನದ 4 ನೆಲೆಗಳಾದ ಬಹವಾಲ್ಪುರ್, ಮುರಿಯ್ಕೆ, ಸಿಯಾಲ್ಕೋಟ್ ಮತ್ತು ಸರ್ಜಲ್ ಮತ್ತು ಪಿಒಕೆಯಲ್ಲಿ ಐದು ನೆಲೆಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದವು. ಪಾಕಿಸ್ತಾನದ ಇಂಟರ್–ಸರ್ವೀಸಸ್ ಇಂಟೆಲಿಜೆನ್ಸ್ (ಐಎಸ್‌ಐ) ಆಶ್ರಯದಲ್ಲಿ ನಿರ್ಭಯದಿಂದ ಕಾರ್ಯನಿರ್ವಹಿಸುತ್ತಿರುವ ಭಯೋತ್ಪಾದಕರ ಮೂಲಸೌಕರ್ಯಗಳನ್ನು ನಾಶಮಾಡುವ ಗುರಿಯನ್ನು ಈ ದಾಳಿಗಳು ಹೊಂದಿದ್ದವು. ಭಾರತ ವಿರೋಧಿ ಭಯೋತ್ಪಾದಕ ಮೂಲಸೌಕರ್ಯದ ಜಾಲವನ್ನು ನಾಶಪಡಿಸಲು ಈ ಸ್ಥಳಗಳನ್ನು ಬಹಳ ಎಚ್ಚರಿಕೆಯಿಂದ ಆಯ್ಕೆ ಮಾಡಲಾಯಿತು. ಈ ತಾಣಗಳು ಲಷ್ಕರ್–ಎ–ತೈಬಾ, ಜೈಶ್–ಎ–ಮೊಹಮ್ಮದ್ ಮತ್ತು ಹಿಜ್ಬುಲ್ ಮುಜಾಹಿದ್ದೀನ್ ಸೇರಿದಂತೆ ನಿಷೇಧಿತ ಗುಂಪುಗಳಿಗೆ ಆಶ್ರಯ ತಾಣಗಳಾಗಿದ್ದವು. ಇವು ಪಾಕಿಸ್ತಾನದ ಮಿಲಿಟರಿ ಮತ್ತು ಗುಪ್ತಚರ ಸಂಸ್ಥೆಗಳಿಂದ ನೇರ ಬೆಂಬಲ ಮತ್ತು ಆಶ್ರಯವನ್ನು ಪಡೆಯುವ ಸಂಘಟನೆಗಳಾಗಿವೆ. ಈ ಉಗ್ರರ ಗುಂಪುಗಳು ತರಬೇತಿ ಶಿಬಿರಗಳು ಮತ್ತು ಉಡಾವಣಾ ಪ್ಯಾಡ್‌ಗಳಿಂದ ಕಾರ್ಯನಿರ್ವಹಿಸುತ್ತವೆ. ಅವುಗಳಲ್ಲಿ ಹಲವು ಸರ್ಕಾರ ನಡೆಸುವ ಕಟ್ಟಡಗಳು ಮತ್ತು ಸಂಸ್ಥೆಗಳಲ್ಲಿ ಅಡಗಿಕೊಂಡಿವೆ. ಉಡಾವಣಾ ಪ್ಯಾಡ್‌ಗಳನ್ನು ಒಳನುಸುಳುವಿಕೆ ಪ್ರಯತ್ನಗಳು ಮತ್ತು ಶಸ್ತ್ರಾಸ್ತ್ರ ತರಬೇತಿಯನ್ನು ನಡೆಸಲು ಬಳಸಿದರೆ, ಪಾಕಿಸ್ತಾನದೊಳಗಿನ ದೊಡ್ಡ ಸೌಲಭ್ಯಗಳನ್ನು ಧಾರ್ಮಿಕ ಬೋಧನೆ, ಪ್ರಚಾರ, ಲಾಜಿಸ್ಟಿಕ್ಸ್ ಮತ್ತು ನೇಮಕಾತಿಗಾಗಿ ಬಳಸಲಾಗುತ್ತಿತ್ತು.

ನಮ್ಮ ಸೇನೆ ಗುರಿ ಸಾಧಿಸಿದೆ

ಮಂಗಳವಾರ ತಡರಾತ್ರಿ 1.44ರ ಸುಮಾರಿಗೆ ರಫೇಲ್ ವಿಮಾನಗಳ ಮೂಲಕ ಪಾಕ್‌ನ 9 ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿದೆ. ದಾಳಿಯ ಬಳಿಕ ಭದ್ರತೆಯ ಕುರಿತು ಸಂಪುಟ ಸಮಿತಿ ಸಭೆ ಆಯೋಜಿಸಲಾಗಿತ್ತು. ಸಭೆಗೂ ಮುನ್ನ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಧೋವಲ್ ಪ್ರಧಾನಿ ಮೋದಿಯವರನ್ನು ಭೇಟಿಯಾದರು. ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಪಾಕಿಸ್ತಾನದ ವಿರುದ್ಧ ನಡೆಸಿದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯ ಬಗ್ಗೆ ಮಾಹಿತಿ ನೀಡಿದರು. ಭಾರತೀಯ ಸೇನೆ ಅಂದುಕೊಂಡ ಹಾಗೆ ಯಾವುದೇ ದೋಷಗಳಿಲ್ಲದೇ ಕಾರ್ಯಾಚರಣೆಯ ಗುರಿ ತಲುಪಿದೆ. ಇಡೀ ದೇಶ ಭಾರತೀಯ ಸೇನೆಯೊಂದಿಗಿದೆ ಎಂದರು. ಭಾರತೀಯ ಸಶಸ್ತ್ರ ಪಡೆಗಳು ಒಟ್ಟು ಒಂಬತ್ತು ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದೆ. ರಕ್ಷಣಾ ಸಚಿವಾಲಯದ ಪ್ರಕಾರ, ಸೇನೆಯು ಕೇಂದ್ರೀಕರಿಸಿ, ಅಳತೆ ತೂಗಿ ನಿಖರವಾಗಿ ದಾಳಿ ನಡೆಸಿದ್ದು, ಪಾಕಿಸ್ತಾನದ ಯಾವುದೇ ಮಿಲಿಟರಿ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡಿಲ್ಲ ಎಂದು ತಿಳಿಸಿದೆ.

'ಆಪರೇಷನ್ ಸಿಂಧೂರ್' ಪಾಕ್‌ಗೆ ಎಚ್ಚರಿಕೆ ಗಂಟೆ; ಭದ್ರತೆ ವಿಚಾರದಲ್ಲಿ ರಾಜೀ ಇಲ್ಲ

ಹಣೆಯಲ್ಲಿ ಕುಂಕುಮ ಇಟ್ಟುಕೊಂಡು ಗುಡುಗಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಬೆಂಗಳೂರು, ಮೇ 7– ರಾಷ್ಟ್ರೀಯ ಭದ್ರತೆ ವಿಷಯದಲ್ಲಿ ಯಾವುದೇ ರಾಜಿ ಸಾಧ್ಯವಿಲ್ಲ. 'ಆಪರೇಷನ್ ಸಿಂಧೂರ್' ದಾಳಿಯನ್ನು ಎಲ್ಲರೂ ಬೆಂಬಲಿಸಿದ್ದೇವೆ. ಇದು ಪಾಕಿಸ್ತಾನಕ್ಕೆ ಎಚ್ಚರಿಕೆಯ ಗಂಟೆಯಾಗಿದೆ. ನಮ್ಮ ಸರ್ಕಾರ ನೂರಕ್ಕೆ ನೂರರಷ್ಟು ಸೇನೆ ಕೈಗೊಂಡಿರುವ ಕ್ರಮವನ್ನು ಬೆಂಬಲಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗಿದ್ದಾರೆ.

ಮುಖ್ಯಮಂತ್ರಿಗಳ ಕಾವೇರಿ ನಿವಾಸದಲ್ಲಿ ಹಣೆಯಲ್ಲಿ ಕುಂಕುಮ ಇಟ್ಟುಕೊಂಡು ಸುದ್ದಿಗೋಷ್ಠಿ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರಗಳಲ್ಲಿನ ಉಗ್ರಗಾಮಿಗಳ ನೆಲೆಯನ್ನು ನಾಶ ಮಾಡಿ ಪರಾಕ್ರಮ ಮೆರೆದ ಭಾರತದ ಹೆಮ್ಮೆಯ ಧೀರ ಸೈನಿಕರಿಗೆ ಇಡೀ ರಾಜ್ಯದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸೇನೆ ನಡೆಸಿರುವ ಈ ದಾಳಿ ಭಾರತದ ಮೇಲೆ ಸತತವಾಗಿ ದಾಳಿ ನಡೆಸಿ, ಹತ್ಯಾಕಾಂಡ ನಡೆಸುತ್ತಿದ್ದ ಉಗ್ರಗಾಮಿಗಳಿಗೆ ಕಲಿಸಿದ ಪಾಠ ಮಾತ್ರವಲ್ಲ, ಈ ಉಗ್ರರಿಗೆ ಆಶ್ರಯ ಮತ್ತು ನೆರವು ನೀಡಿ ಭಾರತದ ವಿರುದ್ಧ ಅವರನ್ನು ಛೂ ಬಿಡುತ್ತಿದ್ದ ಪಾಕಿಸ್ತಾನಕ್ಕೂ ನೀಡಿರುವ ಎಚ್ಚರಿಕೆ ಆಗಿದೆ ಎಂದು ಹೇಳಿದರು.

ದೇಶದ ಸೇನಾಪಡೆ, ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿರುವ ಉಗ್ರಗಾಮಿಗಳ ನೆಲೆಗಳನ್ನು ನಾಶಗೊಳಿಸಿ ಪರಾಕ್ರಮ ಮೆರೆದಿದ್ದಾರೆ. 'ಆಪರೇಷನ್ ಸಿಂಧೂರ್' ಹೆಸರಿನಲ್ಲಿ ಸುಮಾರು 9 ಉಗ್ರಗಾಮಿಗಳ ನೆಲೆಗಳನ್ನು ನಾಶಗೊಳಿಸಿದೆ. ಕೇವಲ ಉಗ್ರಗಾಮಿಗಳ ನೆಲೆಗಳ ಮೇಲೆ ಮಾತ್ರ ದಾಳಿ ನಡೆಸಲಾಗಿದೆ. ನಮ್ಮ ಸೈನಿಕರು ಉಗ್ರರ ನೆಲೆಗಳನ್ನು ಪತ್ತೆ ಹಚ್ಚಿ ದಾಳಿ ಮಾಡಿದ್ದು, ಅಮಾಯಕ ಜನರ ಸಾವು ನೋವು ತಪ್ಪಿಸಿದ್ದಾರೆ. ನಮ್ಮ ಸೈನಿಕರ ಕಾರ್ಯದಕ್ಷತೆಗೆ ದೊಡ್ಡ ಸಲಾಂ. ಈ ದಾಳಿಯನ್ನು ನಾವು ಸ್ವಾಗತಿಸುತ್ತೇವೆ ಎಂದು ತಿಳಿಸಿದರು.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ 26 ಜನ ಹತ್ಯೆ ನಡೆಸಿದ ಉಗ್ರರನ್ನು ಬೆಂಬಲಿಸುವವರು, ಸಾಕುವವರು ಸಹ ಪಾಕಿಸ್ತಾನದವರೇ ಎಂಬುವುದು ಸ್ಪಷ್ಟವಾಗಿದೆ. ನಾವು ಕೇಂದ್ರ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ್ದೇವೆ. ರಾಜ್ಯದಲ್ಲಿ ಸುರಕ್ಷತೆಯ ಕುರಿತು ಎಲ್ಲಾ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಉಗ್ರರ ಮೇಲಿನ ದಾಳಿ ಹಿನ್ನೆಲೆಯಲ್ಲಿ ಸಂವಿಧಾನ ಉಳಿಸಿ ಅಡಿಯಲ್ಲಿ ರಾಯಚೂರಿನಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನಾ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದೆ ವಿವರಿಸಿದರು.


ಪಹಲ್ಗಾಮ್‌ನಲ್ಲಿ ನಡೆದ ಹತ್ಯಾಕಾಂಡ ನಡೆಸಿದ ಉಗ್ರಗಾಮಿಗಳು ಪಾಕಿಸ್ತಾನಕ್ಕೆ ಸೇರಿದವರೆಂದು ಜಗಜ್ಜಾಹೀರಾಗಿದ್ದರೂ ಪಾಕಿಸ್ತಾನ ಇದನ್ನು ಒಪ್ಪಿಕೊಂಡು ಕ್ರಮ ಕೈಗೊಳ್ಳುವ ಭರವಸೆ ನೀಡದೆ ಹಠಮಾರಿ ಧೋರಣೆ ತಳೆದಿರುವ ಕಾರಣದಿಂದಾಗಿ ಭಾರತಕ್ಕೂ ಈ ದಾಳಿ ನಡೆಸದೆ ಬೇರೆ ಆಯ್ಕೆಗಳಿರಲಿಲ್ಲ. ಉಗ್ರಗಾಮಿಗಳ ನೆಲೆಗಳನ್ನು ಧೂಳೀಪಟ ಮಾಡಿ ಉಗ್ರರನ್ನು


ರಾಜ್ಯದಲ್ಲಿ ಭದ್ರತಾ ವ್ಯವಸ್ಥೆ ಬಿಗಿಗೊಳಿಸುವಂತೆ ಪೊಲೀಸರಿಗೆ ಸೂಚನೆ


ಶಿಕ್ಷಿಸಿದ ನಮ್ಮ ಸೈನಿಕರ ಧೀರೋದ್ದಾತ ಪರಾಕ್ರಮದಿಂದ ಪಹಲ್ಗಾವ್ ಹತ್ಯಾಕಾಂಡದಲ್ಲಿ ತಮ್ಮವರನ್ನು ಕಳೆದುಕೊಂಡ ಕುಟುಂಬಗಳಿಗೆ ತುಸು ನೆಮ್ಮದಿ, ಸಮಾಧಾನ ಸಿಕ್ಕಿರಬಹುದೆಂದು ಭಾವಿಸಿದ್ದೇನೆ. ಇದು ಪಾಕಿಸ್ಥಾನಕ್ಕೆ ಮಾತ್ರವಲ್ಲ ಭಾರತದ ಜೊತೆ ಈ ರೀತಿಯ ಕಿಡಿಗೇಡಿತನವನ್ನು ನಡೆಸುವ ನೆರೆಯ ಎಲ್ಲ ದೇಶಗಳಿಗೆ ಕೂಡಾ ಇಂದಿನ ಸೇನಾದಾಳಿ ಎಚ್ಚರಿಕೆಯ ಗಂಟೆಯಾಗಿದೆ ಎಂದು ಎಚ್ಚರಿಸಿದರು.

ಉಗ್ರಗಾಮಿಗಳ ನೆಲೆಯನ್ನೇ ಕೇಂದ್ರವಾಗಿಟ್ಟುಕೊಂಡು ಅಮಾಯಕ ಜನರ ಸಾವು–ನೋವು ನಡೆಯದಂತೆ ದಾಳಿ ನಡೆಸಿರುವ ನಮ್ಮ ಸೈನಿಕರ ಕಾರ್ಯ ಕ್ಷಮತೆ ಮತ್ತು ಪರಿಣತಿಗೆ ನನ್ನದೊಂದು ದೊಡ್ಡ ಸಲಾಮ್. ಭಾರತ ಸರ್ಕಾರ ಕೈಗೊಂಡಿರುವ ಈ ನಿರ್ಧಾರವನ್ನು ನಮ್ಮ ಪಕ್ಷ ಸಂಪೂರ್ಣ ಬೆಂಬಲಿಸಿದೆ. ನಾನು ಕೂಡಾ ನಮ್ಮ ಸರ್ಕಾರ ಮತ್ತು ರಾಜ್ಯದ ಪರವಾಗಿ ಸಂಪೂರ್ಣ ಬೆಂಬಲ ಘೋಷಿಸುತ್ತಿದ್ದೇನೆ. ಇದು ನಾವೆಲ್ಲರೂ ಒಗ್ಗಟ್ಟಿನಿಂದ ಮತ್ತು ಅಷ್ಟೇ ಎಚ್ಚರದಿಂದ ಇರುವ ಕಾಲ. ರಾಜ್ಯದ ಭದ್ರತಾ ವ್ಯವಸ್ಥೆ ಮೇಲೆ ನಿಗಾ ಇಡುವಂತೆ ಪೊಲೀಸ್ ವರಿಷ್ಠರಿಗೆ ತಿಳಿಸಿದ್ದೇನೆ. ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಜೊತೆಯಲ್ಲಿಯೂ ಸಂಪರ್ಕದಲ್ಲಿರುತ್ತದೆ. ಅಲ್ಲಿಂದ ಬರುವ ಸೂಚನೆಗಳನ್ನು ಪಾಲಿಸಲಾಗುತ್ತದೆ. ಯಾರೂ ಭಯಭೀತರಾಗುವ ಅವಶ್ಯಕತೆ ಇಲ್ಲ. ಕಟ್ಟುನಿಟ್ಟಿನ ಕ್ರಮಗಳೊಂದಿಗೆ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲಾಗುವುದು ಎಂದು ಹೇಳಿದರು.


ವಿನಾಯಕ ಪ್ರೌಢಶಾಲೆ ವಿದ್ಯಾರ್ಥಿಗಳ ಸಾಧನೆ


ಶಿವಾನಂದ


ರಕ್ಷಿತಾ


ಕಾವ್ಯ


ಪ್ರೇಕ್ಷಾ


ಪ್ರತೀಕ್ಷಾ

ಶ್ರೀರಂಗಪಟ್ಟಣ, ಮೇ 7–ತಾಲೂಕಿನ ಮಹದೇವಪುರದ ಶ್ರೀ ಅನ್ನಪೂರ್ಣೇಶ್ವರಿ ಎಜುಕೇಷನ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ವಿನಾಯಕ ಪ್ರೌಢಶಾಲೆ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಶಿವಾನಂದ ಕೆ.ಎಂ.–617, ರಕ್ಷಿತಾ ಡಿ.–603, ಕಾವ್ಯ ಎಂ.ಕೆ.–586, ಪ್ರೇಕ್ಷಾ ಎಂ.–569, ಪ್ರತೀಕ್ಷಾ ಸಿ.ವಿ.–557, ಧ್ರುವನ್ ವಿ.–535, ಗಂಗಾಧರ್ ಗೌಡ ಎಸ್.ಎಲ್.–532 ಹಾಗೂ ಮನೋಜ್‌ಗೌಡ ಎಂ.–532 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಪರೀಕ್ಷೆ ಬರೆದ ವಿದ್ಯಾರ್ಥಿಗಳಲ್ಲಿ 8 ಮಂದಿ ಉನ್ನತ ಶ್ರೇಣಿಯಲ್ಲಿ, 30 ಮಂದಿ ಪ್ರಥಮ ದರ್ಜೆಯಲ್ಲಿ, 5 ಮಂದಿ ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ ಎಂದು ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.

ರಾಜ್ಯದ ಜಲಾಶಯಗಳಿಗೆ ಅಧಿಕ ಭದ್ರತೆಗೆ ಆದೇಶ

ಬೆಂಗಳೂರು: ಭಾರತ–ಪಾಕಿಸ್ತಾನ ನಡುವಿನ ಯುದ್ಧದ ಕಾರ್ಮೋಡದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ರಾಜ್ಯದ ಎಲ್ಲಾ 17 ಅಣೆಕಟ್ಟೆಗಳಿಗೆ ಭದ್ರತೆ ಒದಗಿಸಲು ರಾಜ್ಯ ಸರ್ಕಾರದ ಜಲಸಂಪನ್ಮೂಲ ಇಲಾಖೆ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ರಾಜ್ಯ ಪೊಲೀಸ್ ಇಲಾಖೆಯೊಂದಿಗೆ ಸಮನ್ವಯ ಮಾಡಿಕೊಂಡು ಹೆಚ್ಚಿನ ಭದ್ರತೆ ಒದಗಿಸಲು ಸರ್ಕಾರ ನಿರ್ದೇಶಿಸಿದೆ. ತಮ್ಮ ನಿಗಮ ಮತ್ತು ವಲಯ ವ್ಯಾಪ್ತಿಯಲ್ಲಿ ಬರುವ ಅಣೆಕಟ್ಟೆಗಳಿಗೆ ಭದ್ರತೆ ಒದಗಿಸುವುದು. ಒಂದು ವೇಳೆ ಭದ್ರತೆಯಲ್ಲಿ ಯಾವುದೇ ಲೋಪವಾದರೆ ಸಂಬಂಧಪಟ್ಟ ಯೋಜನಾಧಿಕಾರಿ ಅಥವಾ ಅಣೆಕಟ್ಟು ಅಧಿಕಾರಿಗಳೇ ಹೊಣೆಗಾರರು ಎಂದು ಆದೇಶದಲ್ಲಿ ಉಲ್ಲೇಖಿಸಿದೆ.

ಶಾಂತಿ ಮಂತ್ರ ಜಪಿಸಿದ್ದ ಕರ್ನಾಟಕ ಕಾಂಗ್ರೆಸ್... ಬಳಿಕ ಅದನ್ನು ಅಳಿಸಿ... ಸಲ್ಯೂಟ್!



ಮೈಸೂರು,ಮೇ 7(ವಿಎನ್‌ಎಸ್, ಪಿಎಂ)– ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಬುಧವಾರ ಮುಂಜಾನೆ ಪಾಕ್ ಆಕ್ರಮಿತ ಕಾಶ್ಮೀರ (ಪಿಓಕೆ) ಮತ್ತು ಪಾಕಿಸ್ತಾನದಲ್ಲಿನ ಭಯೋತ್ಪಾದಕ ಶಿಬಿರಗಳನ್ನು 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯಡಿ ನಾಶಪಡಿಸಿದ್ದಕ್ಕಾಗಿ ಇಡೀ ರಾಷ್ಟ್ರದ ಜನತೆ ಭಾರತೀಯ ಸೇನೆಯನ್ನು ಶ್ಲಾಘಿಸುತ್ತಿದ್ದರೆ, ಇದೇ ವೇಳೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ತನ್ನ 'ಎಕ್ಸ್' ಖಾತೆಯಲ್ಲಿ ಶಾಂತಿ ಮಂತ್ರ ಜಪಿಸಿತ್ತು.

ಬೆಳಗ್ಗೆ 7.20ರ ಸುಮಾರಿಗೆ ಭಾರತೀಯ ಸಶಸ್ತ್ರ ಪಡೆಗಳ 'ಆಪರೇಷನ್ ಸಿಂಧೂರ್' ಬಗ್ಗೆ ವಾಹಿನಿಗಳು ಸುದ್ದಿ ಬಿತ್ತರಿಸುತ್ತಿದ್ದರೆ, ಕರ್ನಾಟಕ ಕಾಂಗ್ರೆಸ್ ತನ್ನ 'ಎಕ್ಸ್' ಖಾತೆಯಲ್ಲಿ 'ಮನುಕುಲದ ಅತ್ಯಂತ ಶಕ್ತಿಯುತ ಶಸ್ತ್ರ ಎಂದರೆ ಶಾಂತಿ' ಎಂಬ ಮಹಾತ್ಮ ಗಾಂಧೀಜಿಯವರ ಸಂದೇಶವನ್ನು ಅವರ ಚಿತ್ರದೊಂದಿಗೆ ಪೋಸ್ಟ್ ಮಾಡಿತ್ತು.

ಈ ಪೋಸ್ಟ್ ಬೆನ್ನಲ್ಲೇ, ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನೆರೆಯ ಪಾಕಿಸ್ತಾನದ ಭಯೋತ್ಪಾದಕರು, ಅಮಾಯಕ ಭಾರತೀಯ ಪ್ರವಾಸಿಗರ ಹತ್ಯಾಕಾಂಡ ನಡೆಸಿದ್ದರ ನಡುವೆಯೂ ಶಾಂತಿ ಮಂತ್ರ ಜಪಿಸಿದ್ದಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಸಾರ್ವಜನಿಕರು ತೀವ್ರತರವಾಗಿ ಟೀಕಿಸಿದರು. ಇದರಿಂದ ಕಾಂಗ್ರೆಸ್ ಮುಜುಗರಕ್ಕೆ ಒಳಗಾಯಿತು.

ತಕ್ಷಣ ಸದರಿ ಪೋಸ್ಟ್ ಅನ್ನು ಅಳಿಸಿ ಹಾಕಿತು. ಜೊತೆಗೆ ಭಾರತೀಯ ವಾಯುಪಡೆಯನ್ನು ಶ್ಲಾಘಿಸುವ ಮತ್ತೊಂದು ಪೋಸ್ಟ್ ಅನ್ನು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಹಾಕಿತು. 'ವಿಶ್ವದ ಬಲಿಷ್ಠ ವಾಯುಪಡೆಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟ ಭಾರತೀಯ ವಾಯುಪಡೆಯು (ಐಎಎಫ್), ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದ ಹೇಡಿ ಭಯೋತ್ಪಾದಕರಿಗೆ ತಕ್ಕ ಉತ್ತರ ನೀಡಿದೆ. ನಾವು ಸರ್ಕಾರದ ಜೊತೆಗೆ ನಿಲ್ಲುತ್ತೇವೆ, ನಮ್ಮ ಭದ್ರತಾ ಪಡೆಗಳ ಜೊತೆಗೆ ನಿಲ್ಲುತ್ತೇವೆ# ಅಪರೇಷನ್ ಸಿಂಧೂರ್' ಎಂದು ಪೋಸ್ಟ್ ಹಾಕಿತು. ಇತ್ತೀಚೆಗೆ ಇದೇ ವಿಷಯದಲ್ಲಿ ಪಾಕಿಸ್ತಾನದೊಂದಿಗೆ ಯುದ್ಧದ ಅನಿವಾರ್ಯತೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ನೀಡಿ ತೀವ್ರ ಮುಜುಗರಕ್ಕೀಡಾಗಿದ್ದರು. ನಟಿ ರಮ್ಯಾ ಕೂಡ ಪಾಕಿಸ್ತಾನ ಪರ ಹೇಳಿಕೆ ನೀಡುವ ಮೂಲಕ ವಿವಾದಕ್ಕೀಡಾಗಿದ್ದನ್ನು ಇಲ್ಲಿ ಸ್ಮರಿಸಬಹುದು.



ರಾಜ್ಯ ಕಾಂಗ್ರೆಸ್ಸಿನವರು ಮನುಕುಲದ ಅತ್ಯಂತ ಶಕ್ತಿಯುತ ಶಸ್ತ್ರ ಎಂದರೆ ಶಾಂತಿ ಎಂದು ಇವತ್ತು ಟ್ವೀಟ್ ಮಾಡಿದ್ದಾರೆ. ಇವರಿಗೆ ನಾಚಿಕೆ ಆಗಬೇಕು. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮತ್ತು ರಾಹುಲ್ ಗಾಂಧಿಯವರು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು. ಇಂಥ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಇಂಥ ಹೇಳಿಕೆ ನೀಡಿದ್ದು, ಅದಕ್ಕೆ ಶೋಭೆ ತರತಕ್ಕಂಥದ್ದಲ್ಲ. ರಾಜ್ಯದ ಕಾಂಗ್ರೆಸ್ ನಾಯಕರು ತಮ್ಮ ಟ್ವೀಟ್ ಸಂಬಂಧ ದೇಶದ ಜನರ ಕ್ಷಮೆಯಾಚಿಸಬೇಕು. –ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ



ಪಾಕಿಸ್ತಾನದ ವಿರುದ್ಧ ಯುದ್ಧವಾದರೆ ಮುಸ್ಲಿಮರ ಮತ ಹೊರಟು ಹೋಗುತ್ತದೆ ಎಂಬ ಚಿಂತೆ ಕಾಂಗ್ರೆಸ್ಸಿಗಿದೆ. ಪಾಕಿಸ್ತಾನಿ ಪ್ರಜೆಗಳನ್ನು ಎಲ್ಲ ರಾಜ್ಯಗಳು ಹೊರಗೆ ಕಳುಹಿಸುತ್ತಿದ್ದರೆ, ಕರ್ನಾಟಕದಲ್ಲಿ ಮಾತ್ರ ಇನ್ನೂ ಹೊರಗೆ ಕಳುಹಿಸಿಲ್ಲ. ಶಾಂತಿ ಮಂತ್ರ ಜಪಿಸುವ ಕಾಂಗ್ರೆಸ್ ಪಕ್ಷ ಯಾರ ಪರ ಇದೆ. ಯುದ್ಧದ ಸಮಯದಲ್ಲಿ ಶಾಂತಿಯ ಮಂತ್ರ ಹೇಳುವ ಕರ್ನಾಟಕ ಕಾಂಗ್ರೆಸ್ ಸಂಪೂರ್ಣ ದಾರಿ ತಪ್ಪಿ ಹೋಗಿದೆ. ಇದು ದೇಶಕ್ಕೆ ಮಾಡಿದ ಅಪಮಾನ.

–ಆರ್.ಅಶೋಕ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಮೈಸೂರು ಮಿತ್ರ ಗುರುವಾರ 8 ಮೇ 2025

ಇನ್ನೆಂದಿಗೂ ದೇಶದ ಹೆಣ್ಣು ಮಗಳ ಸಿಂಧೂರ ಅಳಿಸಬಾರದು...; ಮಿಷನ್ ಹೆಸರು ಭಾವನಾತ್ಮಕವಾಗಿದೆ...; ಅಂತೂ ನ್ಯಾಯ ಸಿಕ್ಕಿದೆ...; ಪ್ರಧಾನಿ ಮೋದಿಗೆ ದೊಡ್ಡ ಸಲಾಂ



ನವದೆಹಲಿ, ಮೇ 7–ಇನ್ಯಾವತ್ತೂ ಭಾರತದ ಹೆಣ್ಣುಮಗಳ ಸಿಂಧೂರ ಅಳಿಸಬಾರದು.. ಇದು ತಕ್ಕ ಪ್ರತೀಕಾರ. ದೇಶದ ಸೈನ್ಯಕ್ಕೆ, ಪ್ರಧಾನಿ ಮೋದಿಗೆ ದೊಡ್ಡ ಸಲಾಂ ಎಂದು ಕಣ್ಣೀರು ಹಾಕುತ್ತಲೇ ಸಿಂಧೂರ ಕಾರ್ಯಾಚರಣೆ ಬಗ್ಗೆ ಹೆಮ್ಮೆಯಿಂದ ಹೇಳುತ್ತಿದ್ದಾರೆ ಪಹಲ್ಗಾಮ್‌ನಲ್ಲಿ ತಮ್ಮ ಮನೆಯವರನ್ನು ಕಳೆದುಕೊಂಡ ಸಂತ್ರಸ್ತರು..

ಏಪ್ರಿಲ್ 22, ಬೇಸಿಗೆ ರಜೆಯಲ್ಲಿ, ಮದುವೆಯಾದ ಹೊಸದರಲ್ಲಿ, ವಿಶ್ರಾಂತಿಗಾಗಿ, ಕಾಶ್ಮೀರದ ಸೌಂದರ್ಯ ಕಣ್ಣು ತುಂಬಿಕೊಳ್ಳಲು ಬಂದಿದ್ದ ನೂರಾರು ಪ್ರವಾಸಿಗರ ಎದೆ ಝಲ್ ಅನಿಸುವಂತೆ ಮಾಡಿದ್ದು ಭಯೋತ್ಪಾದಕ ದಾಳಿ. ಕೊನೆಗೂ 26 ಮಂದಿಯ ಪ್ರಾಣವನ್ನೇ ಬಲಿತೆಗೆದುಕೊಂಡಿದ್ದರು ಉಗ್ರರು.

ಸಣ್ಣ ಕಂದಮ್ಮಗಳ ಮುಂದೆಯೇ, ಪತ್ನಿಯರ ಮುಂದೆಯೇ, ನೀನು ಹಿಂದೂನಾ ಎಂದು ಕೇಳಿ ಕೇಳಿ ಶೂಟ್ ಮಾಡುತ್ತಾ ಅಟ್ಟಹಾಸ ಮೆರೆದಿದ್ದರು ಪಾಕ್ ಬೆಂಬಲಿತ ಭಯೋತ್ಪಾದಕರು. ಸಿಂಧೂರ ಅಳಿಸಿ ಕೇವಲ 15 ದಿನ ಕಳೆಯುವಷ್ಟರಲ್ಲಿ ಭಾರತ ಆಪರೇಷನ್ ಸಿಂಧೂರ ನಡೆಸಿಯೇ ಬಿಟ್ಟಿದೆ. ಪಾಕಿಸ್ತಾನಿಗಳು ಗಾಢ ನಿದ್ದೆಯಲ್ಲಿದ್ದಾಗಲೇ ಬೆಚ್ಚಿಬೀಳಿಸುವಂತೆ ಪಾಕ್ ನೆಲದಲ್ಲಿದ್ದ ಭಯೋತ್ಪಾದಕರ ಶಿಬಿರಗಳು ಧ್ವಂಸಗೊಂಡಿವೆ.

ಮಿಷನ್‌ನ ಹೆಸರು ಭಾವನಾತ್ಮಕವಾಗಿದೆ

ಸಂತೋಷ್ ಜಗ್ದಾಳೆ ಎಂಬುವವರ ಮಗಳು ಆಸಾವರಿ ಜಗ್ದಾಳೆ ಮಾತನಾಡಿ,



ಕಾರ್ಯಾಚರಣೆಯ ಹೆಸರು ಕೇಳಿದಾಕ್ಷಣ ಕಣ್ಣೀರು ಬಂದಿದೆ. ಮಿಷನ್‌ನ ಹೆಸರು (ಸಿಂಧೂರ್) ತುಂಬಾ ಭಾವನಾತ್ಮಕವಾಗಿದೆ, ಅಮಿತ್ ಶಾ ಅವರು ವೀರ ಮರಣ ಹೊಂದಿದವರಿಗೆ ಗೌರವ ಸಲ್ಲಿಸಲು ಶ್ರೀನಗರಕ್ಕೆ ಬಂದಾಗ, ತಮ್ಮ ಗಂಡಂದಿರನ್ನು ಕಳೆದುಕೊಂಡ ಸಹೋದರಿಯರು ಬೇಡಿಕೊಂಡರು. ಅದಕ್ಕಾಗಿಯೇ ಇಂತಹ ಹೆಸರನ್ನು ಕಾರ್ಯಾಚರಣೆಗೆ ಇಡಲಾಗಿದೆ ಎಂದು ನಾನು ಭಾವಿಸುತ್ತೇನೆ ಎಂದರು.

ಅಂತೂ ಪಹಲ್ಗಾಮ್ ಸಂತ್ರಸ್ತರ ನಿಟ್ಟುಸಿರು

ಮೋದಿಯವರದು ಸರಿಯಾದ ನಿರ್ಧಾರ



ಶಿವಮೊಗ್ಗದ ಮಂಜುನಾಥ್ ಕೂಡಾ ಪಹಲ್ಗಾಮ್ ದಾಳಿಗೆ ತುತ್ತಾದವರಲ್ಲಿ ಒಬ್ಬರು. ಮಂಜುನಾಥ್ ತಾಯಿ ಸುಮತಿ ಪ್ರತಿಕ್ರಿಯೆ ನೀಡಿ, ನಮ್ಮವರನ್ನು ಕೊಂದವರಿಗೆ ತಕ್ಕ ಶಿಕ್ಷೆ ಆಗಬೇಕಿತ್ತು ಈಗ ಮೋದಿಯವರು ಸರಿಯಾದ ನಿರ್ಧಾರ ತೆಗೆದುಕೊಂಡಿದ್ದಾರೆ. ಅಮಾಯಕರಿಗೆ ಏನೂ ಆಗಬಾರದು. ಎಲ್ಲರೂ ಚೆನ್ನಾಗಿರಬೇಕು ಎಂಬುದೇ ನಮ್ಮ ಇಚ್ಛೆ ಎಂದಿದ್ದಾರೆ.

ಯಾವ ಸಹೋದರಿ, ಮಗಳ 'ಸಿಂಧೂರ' (ಕುಂಕುಮ) ಮುಂದಿನ ದಿನಗಳಲ್ಲಿ ಅಳಿಸಬಾರದು: ವಿನಯ್ ನರ್ವಾಲ್ ಅವರ ಮಾವ ಸುನೀಲ್ ಸ್ವಾಮಿ ಪ್ರತಿಕ್ರಿಯಿಸಿದ್ದು, ನಮಗೆ ಒಳ್ಳೆಯ ಸುದ್ದಿ ಸಿಕ್ಕಿದೆ, ಇದಕ್ಕಾಗಿ ನಾವು ಕಾಯುತ್ತಿದ್ದೆವು. ಹಿಮಾಂಶಿ (ವಿನಯ್ ನರ್ವಾಲ್ ಅವರ ಪತ್ನಿ) ಸೇಡು ಯಾವಾಗ ತೀರಿಸಿಕೊಳ್ಳುತ್ತೀರಿ ಎಂದು ಕೇಳುತ್ತಿದ್ದಳು. ಸರ್ಕಾರವು ಅದನ್ನು ಪ್ರಾರಂಭಿಸಿದೆ. ನಮಗೆ ಸರ್ಕಾರದ ಮೇಲೆ ಸಂಪೂರ್ಣ ನಂಬಿಕೆ ಇದೆ. ಇನ್ನಷ್ಟು ದೊಡ್ಡ ಪ್ರತೀಕಾರ ಆಗಬೇಕು. ಇದರಿಂದ ಯಾವ ಸಹೋದರಿ, ಮಗಳ 'ಸಿಂಧೂರ' (ಕುಂಕುಮ) ಮುಂದಿನ ದಿನಗಳಲ್ಲಿ ಅಳಿಸಬಾರದು. ಇಡೀ ದೇಶ, ನಮ್ಮ ಕುಟುಂಬ ನಿರಾಳವಾಗುತ್ತದೆ. ಇದು ಆಪರೇಷನ್ ಸಿಂಧೂರ್ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಏಕೆಂದರೆ ಅವರು ಉದ್ದೇಶಪೂರ್ವಕವಾಗಿ ಪುರುಷರನ್ನು ಕೊಂದು, ಮಹಿಳೆಯರನ್ನು ಬಿಟ್ಟಿದ್ದರು. ಅಂತಿಮ ಮತ್ತು ನಿರ್ಣಾಯಕ ದಾಳಿ ಇರಬೇಕು, ಶತ್ರುಗಳನ್ನು ಸರ್ವನಾಶಪಡಿಸಬೇಕು ಎಂದು ಹೇಳಿದರು.

ಬಲಿಪಶುಗಳಿಗೆ ಅಂತಿಮವಾಗಿ ನ್ಯಾಯ ಸಿಕ್ಕಿದೆ: ಶುಭಂ ದ್ವಿವೇದಿ ಅವರ ಚಿಕ್ಕಪ್ಪ ಮನೋಜ್ ದ್ವಿವೇದಿ ಅವರು ಪಹಲ್ಗಾಮ್ ಬಲಿಪಶುಗಳಿಗೆ ಅಂತಿಮವಾಗಿ ನ್ಯಾಯ ಸಿಕ್ಕಿದೆ ಎಂದು ಹೇಳಿದರು. ಏಪ್ರಿಲ್ 22ರಂದು, ನಮ್ಮ ಮಗು ತನ್ನ ಪ್ರಾಣವನ್ನು ಕಳೆದುಕೊಂಡಾಗ, ನಮ್ಮ ದೇಶದಲ್ಲಿ ಕ್ರಾಂತಿ ಬರಲಿದೆ ಎಂದು ನಾವು ಹೇಳಿದ್ದೇವೆ ಮತ್ತು ಪ್ರಧಾನಿ ಮೋದಿ ಅವರು ಭಯೋತ್ಪಾದನೆಯನ್ನು ಕೊನೆಗಾಣಿಸಲು ಕಠಿಣ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನಮಗೆ ಖಚಿತವಾಗಿತ್ತು. ಇಂದು ನಮ್ಮ ಮಗನಿಗೆ ಸೇನೆಯು ನಿಜವಾದ ಗೌರವವನ್ನು ಸಲ್ಲಿಸಿದ್ದಕ್ಕಾಗಿ ಪ್ರಧಾನಿ ಮೋದಿ ಅವರಿಗೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ ಎಂದರು.

ಪಹಲ್ಗಾಮ್ ದಾಳಿಯಲ್ಲಿ ಕೊಲ್ಲಲ್ಪಟ್ಟ ಸಂಜಯ್ ಲೇಲೆ ಅವರ ಪುತ್ರ ಹರ್ಷಲ್ ಸಂಜಯ್ ಲೇಲೆ ಅವರು ಆಪರೇಷನ್ ಸಿಂಧೂರ್ ಬಗ್ಗೆ ಮಾತನಾಡುತ್ತಾ, ನಾನು ಆ ಸಮಯದಲ್ಲಿ ಎಚ್ಚರವಾಗಿದ್ದೆ, ನಿದ್ದೆ ಮಾಡಲು ಯಾಕೆ ಸಾಧ್ಯ ಆಗಲಿಲ್ಲ ಎಂದು ನನಗೆ ತಿಳಿದಿಲ್ಲ, ಆದರೆ ಒಳ್ಳೆಯದೇ ಆಯ್ತು, ಪ್ರತೀಕಾರದ ಘಟನೆಗಳನ್ನು ನೇರವಾಗಿ ನೋಡಲು ಸಾಧ್ಯ ಆಯಿತು ಎಂದಿದ್ದಾರೆ.

ಮೋದಿಯವರಿಗೆ ದೊಡ್ಡ ಸಲಾಂ: ಕಾಶ್ಮೀರದಲ್ಲಿ ಭಯೋತ್ಪಾದಕ ದಾಳಿಯಲ್ಲಿ ಕೊಲ್ಲಲ್ಪಟ್ಟ ಎನ್.ರಾಮಚಂದ್ರನ್ ಅವರ ಪುತ್ರಿ ಆರತಿ ಅವರು ಪ್ರಧಾನಿಮೋದಿ, ಭಾರತೀಯ ಸೇನೆ ಮತ್ತು ಕೇಂದ್ರ ಸರ್ಕಾರಕ್ಕೆ ಪಾಕಿಸ್ತಾನ ಮತ್ತು ಪಿಒಕೆನಲ್ಲಿನ ಭಯೋತ್ಪಾದಕ ಶಿಬಿರಗಳ ವಿರುದ್ಧ ಕ್ಷಿಪಣಿ ದಾಳಿ ನಡೆಸಿದ್ದಕ್ಕಾಗಿ ಪ್ರಧಾನಿ ಮೋದಿಯವರಿಗೆ ದೊಡ್ಡ ಸಲಾಂ ಸಲ್ಲಿಸಿದ್ದಾರೆ.

ಇಂದು ನಮಗೆ ನ್ಯಾಯ ಸಿಕ್ಕಿದೆ: ಇನ್ನು ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಸ್ಥಳೀಯ ಕುದುರೆ ನಿರ್ವಾಹಕ ಸೈಯದ್ ಆದಿಲ್ ಹುಸೇನ್ ಶಾ ಪ್ರವಾಸಿಗರನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾಗ ಸಾವನ್ನಪ್ಪಿದ್ದು, 'ಆಪರೇಷನ್ ಸಿಂಧೂರ್' ಬಗ್ಗೆ ಅವರ ತಂದೆ ಹೈದರ್ ಶಾ ಪ್ರತಿಕ್ರಿಯಿಸಿ, ನನ್ನ ಮಗ ಸೇರಿದಂತೆ 26 ಪಹಲ್ಗಾಮ್ ಬಲಿಪಶುಗಳ ಸಾವಿಗೆ ಸೇಡು ತೀರಿಸಿಕೊಂಡಿದ್ದಕ್ಕೆ ನಮಗೆ ಸಂತೋಷವಾಗಿದೆ. ನಾನು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಭದ್ರತಾ ಪಡೆಗಳು ಮತ್ತು ಸರ್ಕಾರವು ಸೇಡು ತೀರಿಸಿಕೊಂಡಿದೆ. ಇಂತಹ ಸಾವು ಯಾರಿಗೂ ಸಂಭವಿಸಬಾರದು. ನಮಗೆ ಪ್ರಧಾನಿ ಮೋದಿ ಅವರ ಮೇಲೆ ನಂಬಿಕೆ ಇತ್ತು. ಇಂದು ನಮಗೆ ನ್ಯಾಯ ಸಿಕ್ಕಿದೆ ಎಂದರು.

ಅವರ ಸಹೋದರ ಸೈಯದ್ ನೌಷಾದ್ ಅವರು ಭದ್ರತಾ ಪಡೆಗಳು, ಪ್ರಧಾನಿ ನರೇಂದ್ರ ಮೋದಿ ಮತ್ತು ಸರ್ಕಾರಕ್ಕೆ ಇಂತಹ ಉತ್ತಮ ಹೆಜ್ಜೆ ಇಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಅವರು ಆ ಅಮಾಯಕ ಜನರ ಸಾವಿಗೆ ಸೇಡು ತೀರಿಸಿಕೊಂಡಿದ್ದಾರೆ. ನಮ್ಮ ಸರ್ಕಾರದ ಬಗ್ಗೆ ನಮಗೆ ಹೆಮ್ಮೆ ಇದೆ, ನಮಗೆ ಅವರ ಮೇಲೆ ನಂಬಿಕೆ ಇತ್ತು ಎಂದು ಹೇಳಿದ್ದಾರೆ.

ನನ್ನ ಇಡೀ ಕುಟುಂಬ ಮೋದಿ ಸಾಹೇಬರೊಂದಿಗೆ ಇದೆ



ಪಹಲ್ಗಾಮ್ ದಾಳಿಯಲ್ಲಿ ಉಗ್ರರ ಗುಂಡೇಟಿಗೆ ಮೊದಲು ಬಲಿಯಾದ ಭಾರತೀಯ ನೌಕಾಪಡೆಯ ಲೆಫ್ಟಿನೆಂಟ್ ವಿನಯ್ ನರ್ವಾಲ್ ಅವರ ತಾಯಿ ಆಶಾ ನರ್ವಾಲ್ ಪ್ರತಿಕ್ರಿಯಿಸಿ, ನನ್ನ ಇಡೀ ಕುಟುಂಬ ಮೋದಿ ಸಾಹೇಬರೊಂದಿಗೆ ಇದೆ. ಅವರು ಇಂದು ಸೇಡು ತೀರಿಸಿಕೊಂಡಿದ್ದಾರೆ. ಸಶಸ್ತ್ರ ಪಡೆಗಳ ಸಿಬ್ಬಂದಿಗೆ ಮುಂದೆ ಸಾಗುವಂತೆ ನಾನು ಹೇಳಲು ಬಯಸುತ್ತೇನೆ. ಪಹಲ್ಗಾಮ್‌ನಲ್ಲಿ ಪ್ರಾಣ ಕಳೆದುಕೊಂಡ ಎಲ್ಲರಿಗೂ ಗೌರವ ಸಲ್ಲಿಸಲಾಗಿದೆ ಎಂದರು.

ಸುದ್ದಿ ಕೇಳಿ ಮನಸ್ಸು ಹಗುರ ಆಗಿದೆ



ಪಹಲ್ಗಾಮ್ ದಾಳಿಯಲ್ಲಿ ಬಲಿಯಾದ ಶುಭಂ ದ್ವಿವೇದಿ ಅವರ ತಂದೆ ಸಂಜಯ್ ದ್ವಿವೇದಿ ಅವರು, ನಾನು ಭಾರತೀಯ ಸೇನೆಗೆ ನಮಿಸುತ್ತೇನೆ. ದೇಶದ ಜನರ ನೋವನ್ನು ಆಲಿಸಿದ ಪ್ರಧಾನಿ ಮೋದಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಪಾಕಿಸ್ತಾನದಲ್ಲಿ ಭಯೋತ್ಪಾದನೆ ಹೆಚ್ಚುತ್ತಿರುವ ರೀತಿಯನ್ನು ಭಾರತೀಯ ಸೇನೆ ನಾಶಪಡಿಸಿದೆ, ಅದಕ್ಕಾಗಿ ನಾನು ನಮ್ಮ ಸೈನ್ಯಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಸುದ್ದಿ ಕೇಳಿದಾಗಿನಿಂದ ನನ್ನ ಇಡೀ ಕುಟುಂಬ ಹಗುರವಾಗಿದೆ ಎಂದಿದ್ದಾರೆ.

ಬರೋಬ್ಬರಿ 15 ದಿನಗಳ ತಯಾರಿ...!



ನವದೆಹಲಿ, ಮೇ 7– ಪಾಕಿಸ್ತಾನ ಬೆಂಬಲಿತ ಉಗ್ರರ ತಂಡ ಏಪ್ರಿಲ್ 22 ರಂದು ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ದಾಳಿ ನಡೆಸಿ 26 ಭಾರತೀಯ ನಾಗರಿಕರ ಜೀವ ತೆಗೆದಿತ್ತು. ಆ ದಿನವೇ ಉಗ್ರರಿಗೆ ಪಾಠ ಕಲಿಸಬೇಕು ಎಂದು ಭಾರತೀಯ ಸೇನೆ ತೀರ್ಮಾನಿಸಿತ್ತು. ಇದಕ್ಕಾಗಿ ಸತತ ಎರಡು ವಾರಗಳ ಕಾಲ ಯೋಜನೆ ರೂಪಿಸಿ ಸರಿಯಾಗಿ 15 ದಿನಕ್ಕೆ 'ಆಪರೇಷನ್ ಸಿಂಧೂರ್' ಕೈಗೊಂಡು ಯಶಸ್ವಿಯಾಗಿ ಸೇಡು ತೀರಿಸಿಕೊಂಡಿದೆ.

ಪಹಲ್ಗಾಮ್ ದಾಳಿಯ ಬಳಿಕ ಭಾರತ ಸರ್ಕಾರದ ಮೇಲೆ ಮೃತರ ಕುಟುಂಬ ಹಾಗೂ ದೇಶಾಭಿಮಾನಿಗಳ ಒತ್ತಡ ಹೆಚ್ಚಿತ್ತು. ಉಗ್ರರ ವಿರುದ್ಧ ದಾಳಿ ಯಾವಾಗ ಎಂದು ಇಡೀ ದೇಶವೇ ಪ್ರಶ್ನೆ ಮಾಡುತ್ತಿತ್ತು. ಒತ್ತಡಕ್ಕೆ ಮಣಿದು ಒಮ್ಮೆಗೆ ಪಾಕಿಸ್ತಾನ ಅಥವಾ ಉಗ್ರರ ಮೇಲೆ ಭಾರತ ಸರ್ಕಾರ ದಾಳಿಗೆ ಮುಂದಾಗಲಿಲ್ಲ. ಕಾದು ನೋಡಿ ಹೊಡೆಯುವ ತಂತ್ರ ಪ್ರಯೋಗ ಮಾಡಿದೆ. ಇದಕ್ಕೂ ಮುನ್ನ ಹಲವು ಹಂತಗಳಲ್ಲಿ ಭಾರತ ಸರ್ಕಾರ, ಸೇನೆಯು ತಯಾರಿ ನಡೆಸಿದೆ.

ಸೌದಿಯಿಂದ ಹಿಂದಿರುಗಿದ ಪ್ರಧಾನಿ ಮೋದಿ: ಪಹಲ್ಗಾಮ್‌ನಲ್ಲಿ 25 ಪ್ರವಾಸಿಗರನ್ನು ಮತ್ತು ಕುದುರೆ ಸವಾರಿ ನಡೆಸುತ್ತಿದ್ದ ಕಾಶ್ಮೀರಿ ವ್ಯಕ್ತಿ ಸೇರಿ 26 ಮಂದಿಯನ್ನು ಉಗ್ರರು ಕೊಂದರು. ಕೂಡಲೇ ಸೌದಿ ಅರೇಬಿಯಾ ಪ್ರವಾಸದಲ್ಲಿದ್ದ ಪ್ರಧಾನಿ ಮೋದಿ ತಮ್ಮ ಭೇಟಿಯನ್ನು ಮೊಟಕುಗೊಳಿಸಿ ಭಾರತಕ್ಕೆ ಹಿಂದಿರುಗಿದರು. ಇತ್ತ ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾಶ್ಮೀರಕ್ಕೆ ತೆರಳಿ ಜಮ್ಮು–ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಅವರೊಂದಿಗೆ ಭದ್ರತಾ ಪರಿಶೀಲನೆ ಕೈಗೊಂಡರು.

ನೀರಿಗೆ ಗೇಟ್, ಪಾಕ್ ಪ್ರಜೆಗಳಿಗೆ ಗೇಟ್ ಪಾಸ್: ಪಾಕಿಸ್ತಾನದ ವಿರುದ್ಧದ ಮೊದಲ ಕ್ರಮವಾಗಿ, ಭಾರತವು ಸಿಂಧೂ ನದಿ ನೀರು ಒಪ್ಪಂದವನ್ನು ರದ್ದುಗೊಳಿಸಿತು. ಅತ್ತಾರಿಯಲ್ಲಿನ ಸಮಗ್ರ ತಪಾಸಣಾ ಕೇಂದ್ರವನ್ನು ಮುಚ್ಚಿತು. ಪಾಕಿಸ್ತಾನಿ ಪ್ರಜೆಗಳಿಗೆ ವೀಸಾ ಸೇವೆಗಳನ್ನು ಸ್ಥಗಿತಗೊಳಿಸಲಾಯಿತು. ನವದೆಹಲಿಯು ಭಾರತದಲ್ಲಿನ ಪಾಕಿಸ್ತಾನದ ರಾಯಭಾರಿ ಕಚೇರಿಯ ಸಿಬ್ಬಂದಿಯನ್ನು ಕಡಿತ ಮಾಡಿತು ಮತ್ತು ಪಾಕಿಸ್ತಾನದ ರಕ್ಷಣಾ ಸಲಹೆಗಾರರು ಒಂದು ವಾರದೊಳಗೆ ದೇಶ ಬಿಟ್ಟು ಹೋಗಲು ಗಡುವು ವಿಧಿಸಿತು.

ಜನತೆಗೆ ಮೋದಿ ಭರವಸೆ: ಬಿಹಾರದಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿ ಮೋದಿ 'ಭಾರತವು ಪ್ರತಿಯೊಬ್ಬ ಭಯೋತ್ಪಾದಕನನ್ನು ಮತ್ತು ಅವರಿಗೆ ಬೆಂಬಲ ನೀಡುವವರನ್ನು ಗುರುತಿಸಿ, ಪತ್ತೆಹಚ್ಚಿ ಶಿಕ್ಷಿಸುತ್ತದೆ' ಎಂದು ಹೇಳಿದ್ದರು.

ಸರ್ವಪಕ್ಷಗಳ ಬೆಂಬಲ ಪಡೆದ ಸರ್ಕಾರ: ಕೇಂದ್ರ ಸರ್ಕಾರವು ಸರ್ವಪಕ್ಷ ಸಭೆಯನ್ನು ಕರೆದು ಪಹಲ್ಗಾಮ್ ದುರಂತದ ಬಗ್ಗೆ ಮತ್ತು ಭಾರತವು ಹೇಗೆ ಪ್ರತಿಕ್ರಿಯಿಸಲು ಸಿದ್ಧತೆ ನಡೆಸುತ್ತಿದೆ ಎಂಬುದರ ಬಗ್ಗೆ 15 ರಾಜಕೀಯ ಪಕ್ಷಗಳಿಗೆ ವಿವರಿಸಿತ್ತು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಎಲ್ಲಾ ಪಕ್ಷಗಳ ನಾಯಕರು ಭಯೋತ್ಪಾದಕ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳಲು ಸರ್ಕಾರ ತೆಗೆದುಕೊಳ್ಳುವ ಯಾವುದೇ ಕ್ರಮಕ್ಕೆ ಸಂಪೂರ್ಣ ಬೆಂಬಲವನ್ನು ಸೂಚಿಸಿದ್ದರು.

ಸೇನೆಗೆ ಸಂಪೂರ್ಣ ಸ್ವತಂತ್ರ ನೀಡಿದ ಪ್ರಧಾನಿ: ಪ್ರಧಾನಿ ಮೋದಿ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಿಡಿಎಸ್ ಜನರಲ್ ಅನಿಲ್ ಚೌಹಾಣ್ ಮತ್ತು ಸೇನೆ, ನೌಕಾಪಡೆ ಮತ್ತು ವಾಯುಪಡೆಯ ಮುಖ್ಯಸ್ಥರೊಂದಿಗೆ ಸಭೆ ನಡೆಸಿದರು. ಸೇನೆಗೆ ಸಂಪೂರ್ಣ ಸ್ವತಂತ್ರ ನೀಡಲಾಗಿದೆ ಎಂದು ಪ್ರಧಾನಿ ಹೇಳಿದರು.

ಪಾಕ್ ವಿರುದ್ಧ ವಿಶ್ವಸಂಸ್ಥೆಯಲ್ಲಿ ಕೂಗು: ಇಸ್ಲಾಮಾಬಾದ್‌ನ ಕೋರಿಕೆ ಮೇರೆಗೆ ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಭೆಯಲ್ಲಿ ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಖಂಡಿಸಲಾಯಿತು.

ಮಾಕ್ ಡ್ರಿಲ್ ಮುನ್ನೆಚ್ಚರಿಕೆ

ಕೇಂದ್ರ ಗೃಹ ಸಚಿವಾಲಯವು ಮೇ 7ರಂದು ನಾಗರಿಕ ರಕ್ಷಣಾ ತಾಲೀಮುಗಳನ್ನು ನಡೆಸಲು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿತ್ತು. ಈ ಮಾಕ್ ಡ್ರಿಲ್, ವಾಯುದಾಳಿ ಎಚ್ಚರಿಕೆ ಸೈರನ್‌ಗಳು, ಬ್ಲ್ಯಾಕ್ ಔಟ್‌ಗಳು ಮತ್ತು ಸ್ಥಳಾಂತರಿಸುವ ವ್ಯಾಯಾಮಗಳಿಗೆ ಪ್ರತಿಕ್ರಿಯಿಸುವ ತರಬೇತಿ ಒಳಗೊಂಡಿತ್ತು. ಗೃಹ ಸಚಿವಾಲಯದ ನಿರ್ದೇಶನಗಳಲ್ಲಿ ಪಹಲ್ಗಾಮ್ ಬಗ್ಗೆ ಉಲ್ಲೇಖಿಸದಿದ್ದರೂ, ಸಮಯವು ಯಾವುದೇ ಅನುಮಾನಕ್ಕೆ ಅವಕಾಶ ನೀಡಲಿಲ್ಲ.

ಉಗ್ರರ ಆ 9 ನೆಲೆಗಳು



ಮರ್ಕಜ್ ಸುಭಾನ್ ಅಲ್ಲಾ, ಬಹವಾಲ್ಪುರ್

2015ರಿಂದ ಕಾರ್ಯನಿರ್ವಹಿಸುತ್ತಿರುವ ಇದು ಜೆಇಎಂನ ಪ್ರಾಥಮಿಕ ತರಬೇತಿ ಮತ್ತು ಬೋಧನೆ ಕೇಂದ್ರವಾಗಿದ್ದು, ವರ್ಚುವಲ್ ಪ್ರಧಾನ ಕಚೇರಿಯಾಗಿ ಕಾರ್ಯನಿರ್ವಹಿಸುತ್ತದೆ. ಇದು 2019ರ ಪುಲ್ವಾಮಾ ಆತ್ಮಹತ್ಯಾ ಬಾಂಬ್ ದಾಳಿ ಸೇರಿದಂತೆ ಹಿಂದಿನ ದಾಳಿಗಳಿಗೆ ನಿಕಟ ಸಂಬಂಧ ಹೊಂದಿದೆ. ಇದು ಜೆಇಎಂ ಮುಖ್ಯಸ್ಥ ಮಸೂದ್ ಅಜರ್ ಮತ್ತು ಇತರ ಹಿರಿಯ ನಾಯಕರನ್ನು ಹೊಂದಿದೆ. ಅಜರ್ ಇಲ್ಲಿಂದ ಹಲವಾರು ಭಾರತ ವಿರೋಧಿ ಭಾಷಣಗಳನ್ನು ಮಾಡಿದ್ದಾನೆ. ಜಿಹಾದ್‌ಗೆ ಕರೆ ನೀಡುವುದು, ಯುವಕರನ್ನು ನೇಮಿಸಿಕೊಳ್ಳುವುದು ಇಲ್ಲಿಂದಲೇ ಮಾಡುತ್ತಿರುತ್ತಾನೆ. ಈ ತಾಣವು ನಿಯಮಿತ ಶಸ್ತ್ರಾಸ್ತ್ರ ಮತ್ತು ಧಾರ್ಮಿಕ ತರಬೇತಿಯನ್ನು ಹೊಂದಿದೆ.

ಮರ್ಕಜ್ ತೈಬಾ, ಮುರಿಡ್ಕೆ

2000ನೇ ಇಸವಿಯಲ್ಲಿ ಪಂಜಾಬ್‌ನ ಶೇಖುಪುರದಲ್ಲಿ ಸ್ಥಾಪಿಸಲಾದ ಇದು ಎಲ್‌ಇಟಿಯ ಅತ್ಯಂತ ಮಹತ್ವದ ತರಬೇತಿ ಸೌಲಭ್ಯವಾಗಿದ್ದು, ವಾರ್ಷಿಕವಾಗಿ ಸುಮಾರು ಸಾವಿರ ವ್ಯಕ್ತಿಗಳನ್ನು ನೇಮಿಸಿಕೊಳ್ಳುತ್ತದೆ ಎಂದು ಹೇಳಲಾಗುತ್ತಿದೆ. ಇದು ಶಸ್ತ್ರಾಸ್ತ್ರ ತರಬೇತಿ, ಧಾರ್ಮಿಕ ಬೋಧನೆ ಮತ್ತು ಮೂಲಭೂತವಾದವನ್ನು ನೀಡುತ್ತದೆ. ಅಲ್–ಖೈದಾ ನಾಯಕ ಒಸಾಮಾ ಬಿನ್ ಲಾಡೆನ್ ಇಲ್ಲಿ ಮಸೀದಿ ಮತ್ತು ಅತಿಥಿ ಗೃಹವನ್ನು ನಿರ್ಮಿಸಲು 10 ಮಿಲಿಯನ್ ಹಣ ನೀಡಿದ್ದ ಎಂದು ಹೇಳಲಾಗುತ್ತಿದೆ. ಈ ಕೇಂದ್ರವು ಅಜ್ಮಲ್ ಕಸಬ್ ಸೇರಿದಂತೆ 26/11 ಮುಂಬೈ ದಾಳಿಯ ಅಪರಾಧಿಗಳಿಗೆ ಐಎಸ್‌ಐ ಮೇಲ್ವಿಚಾರಣೆಯಲ್ಲಿ ತರಬೇತಿ ನೀಡಿತು.

ಸರ್ಜಲ್, ಟೆಹ್ರಾ ಕಲಾನ್

ನರೋವಲ್ ಜಿಲ್ಲೆಯಲ್ಲಿರುವ ಈ ಜೆಇಎಂ ಕೇಂದ್ರವು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಕಾರ್ಯನಿರ್ವಹಿಸುತ್ತಿದ್ದು ಜಮ್ಮುವಿನ ಸಾಂಬಾದಲ್ಲಿರುವ ಅಂತಾರಾಷ್ಟ್ರೀಯ ಗಡಿಯಿಂದ ಕೇವಲ 6 ಕಿ.ಮೀ ದೂರದಲ್ಲಿದೆ. ಇದು ಗಡಿಯಾಚೆಗಿನ ಸುರಂಗ ಒಳನುಸುಳುವಿಕೆ ಮತ್ತು ಡ್ರೋನ್ ಆಧಾರಿತ ಶಸ್ತ್ರಾಸ್ತ್ರಗಳು ಮತ್ತು ಮಾದಕವಸ್ತು ಸಾಗಾಟಕ್ಕೆ ಉಡಾವಣಾ ತಾಣವಾಗಿ ಕಾರ್ಯನಿರ್ವಹಿಸುತ್ತದೆ. ಜೆಇಎಂ ಕಮಾಂಡರ್‌ಗಳಾದ ಮೊಹಮ್ಮದ್ ಅದ್ನಾನ್ ಅಲಿ ಮತ್ತು ಕಾಶಿಫ್ ಜಾನ್ ಆಗಾಗ್ಗೆ ಈ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಇದನ್ನು ಮುಫ್ತಿ ಅಬ್ದುಲ್ ರೌಫ್ ಅಸ್ಗರ್ ನೋಡಿಕೊಳ್ಳುತ್ತಾನೆ.

ಮೆಹಮೂನಾ ಜೋಯಾ, ಸಿಯಾಲ್‌ಕೋಟ್

ಭುಟ್ಟಾ ಕೋಟ್ಲಿ ಸರ್ಕಾರಿ ಆವರಣದಲ್ಲಿ ನೆಲೆ ಗೊಂಡಿರುವ ಈ ಹಿಜ್ಬುಲ್ ಮುಜಾಹಿದ್ದೀನ್ ಶಿಬಿರವು ಉಗ್ರರಿಗೆ ತರಬೇತಿ ನೀಡುತ್ತದೆ. ಜಮ್ಮುವಿಗೆ ಒಳನುಸುಳುವಿಕೆಯನ್ನು ಮೇಲ್ವಿಚಾರಣೆ ಮಾಡುತ್ತದೆ. ಮೊಹಮ್ಮದ್ ಇರ್ಫಾನ್ ಖಾನ್, ಅಲಿಯಾಸ್ ಇರ್ಫಾನ್ ತಂಡಾ ನೇತೃತ್ವದಲ್ಲಿ, ಈ ಕೇಂದ್ರವು ಸುಮಾರು 2025 ಸಶಸ್ತ್ರ ಉಗ್ರಗಾಮಿಗಳನ್ನು ಇರಿಸುತ್ತದೆ.

ಮರ್ಕಜ್ ಅಹ್ಲೆ ಹದೀಸ್ ಬರ್ನಾಲಾ, ಭಿಂಬರ್

ಪಾಕ್ ಆಕ್ರಮಿತ ಕಾಶ್ಮೀರದ ಬರ್ನಾಲಾದ ಹೊರವಲಯದಲ್ಲಿರುವ ಈ ಎಲ್‌ಇಟಿ ಶಿಬಿರವನ್ನು ಉಗ್ರಗಾಮಿಗಳಿಗೆ ಉಡಾವಣೆಗೆ ಮತ್ತು ಪೂಂಚ್, ರಾಜೌರಿ ಮತ್ತು ರಿಯಾಸಿ ವಲಯಗಳಿಗೆ ಶಸ್ತ್ರಾಸ್ತ್ರಗಳನ್ನು ಕಳ್ಳಸಾಗಣೆ ಮಾಡಲು ಬಳಸಲಾಗುತ್ತದೆ. ಕಾರ್ಯಾಚರಣೆಯ ಕಮಾಂಡರ್‌ಗಳು ಈ ಸೌಲಭ್ಯಕ್ಕೆ ಆಗಾಗ್ಗೆ ಹೋಗುತ್ತಾರೆ, ಇದು 100–150 ಕಾರ್ಯಕರ್ತರನ್ನು ಹೊಂದಿದೆ. ಈ ಪ್ರದೇಶದಲ್ಲಿ ಎಲ್‌ಇಟಿ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಮರ್ಕಜ್ ಅಬ್ಬಾಸ್, ಕೋಟ್ಲಿ

ಜೆಇಎಂ ಕೌನ್ಸಿಲ್‌ನ ಹಿರಿಯ ಸದಸ್ಯ ಮತ್ತು ಮುಫ್ತಿ ಅಬ್ದುಲ್ ರೌಫ್ ಅಸ್ಗರ್ ಆಪ್ತ ಸಹಾಯಕ ಖಾರಿ ಜರ್ರಾರ್ ನೇತೃತ್ವದ ಪ್ರಮುಖ ಜೆಇಎಂ ಕೇಂದ್ರ. ಜರ್ರಾರ್ ಭಾರತದ ರಾಷ್ಟ್ರೀಯ ತನಿಖಾ ಸಂಸ್ಥೆಗೆ ಬೇಕಾದವನಾಗಿದ್ದಾನೆ. ಈ ತಾಣವು ಪೂಂಚ್ ಮತ್ತು ರಾಜೌರಿ ಮೂಲಕ ಒಳನುಸುಳುವಿಕೆ ಮಾರ್ಗಗಳನ್ನು ಬೆಂಬಲಿಸುತ್ತದೆ, 125 ಉಗ್ರಗಾಮಿಗಳಿಗೆ ಆಶ್ರಯ ನೀಡುತ್ತದೆ.

ಮಸ್ಕರ್ ರಹೀಲ್ ಶಾಹಿದ್, ಕೋಟ್ಲಿ

ಹಿಜ್ಬುಲ್ ಮುಜಾಹಿದ್ದೀನ್‌ನ ಅತ್ಯಂತ ಹಳೆಯ ಶಿಬಿರಗಳಲ್ಲಿ ಒಂದಾದ ಈ ಸೌಲಭ್ಯವು ಪರ್ವತ ಯುದ್ಧಕ್ಕೆ ಸೂಕ್ತವಾದ ಶಸ್ತ್ರಾಸ್ತ್ರ ನಿರ್ವಹಣೆ, ಸ್ನೈಪಿಂಗ್ ಮತ್ತು ಬದುಕುಳಿಯುವ ತಂತ್ರಗಳಲ್ಲಿ 150–200 ಕಾರ್ಯಕರ್ತರಿಗೆ ತರಬೇತಿ ನೀಡುತ್ತದೆ. ಗಡಿಯಾಚೆಗಿನ ಅತಿಕ್ರಮಣಗಳಿಗೆ ಉಗ್ರರನ್ನು ಸಜ್ಜುಗೊಳಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ.

ಶವಾಯಿ ನಲ್ಲಾ ಕ್ಯಾಂಪ್, ಮುಜಫರಾಬಾದ್

ಬೈತ್–ಉಲ್–ಮುಜಾಹಿದ್ದೀನ್ ಎಂದೂ ಕರೆಯಲ್ಪಡುವ ಈ ಎಲ್‌ಇಟಿ ಶಿಬಿರವು ಮುಜಫರಾಬಾದ್–ನೀಲಂ ರಸ್ತೆಯ ಚೆಲಾಬಂಡಿ ಸೇತುವೆಯ ಬಳಿ ಇದೆ. ಇದು ಅಜ್ಮಲ್ ಕಸಬ್ ಸೇರಿದಂತೆ 26/11 ದಾಳಿಕೋರರಿಗೆ ತರಬೇತಿ ನೀಡಿತು. 2000 ದಶಕದ ಆರಂಭದಿಂದಲೂ ಕಾರ್ಯನಿರ್ವಹಿಸುತ್ತಿರುವ ಈ ಸ್ಥಳವು 250 ತರಬೇತಿದಾರರಿಗೆ ಸ್ಥಳಾವಕಾಶ ಕಲ್ಪಿಸುತ್ತದೆ, ಪಾಕಿಸ್ತಾನ ಸೇನಾ ತರಬೇತುದಾರರು ಇಲ್ಲಿ ಶಸ್ತ್ರಾಸ್ತ್ರ ತರಬೇತಿಯಲ್ಲಿ ಸಹಾಯ ಮಾಡುತ್ತಾರೆ ಎಂದು ತಿಳಿದುಬಂದಿದೆ.

ಮರ್ಕಜ್ ಸೈಯದ್ನಾ ಬಿಲಾಲ್, ಮುಜಫರಾಬಾದ್

ಈ ಜೆಇಎಂ ಸಾರಿಗೆ ಸೌಲಭ್ಯವು ಮುಜಫರಾಬಾದ್‌ನ ಕೆಂಪು ಕೋಟೆಯ ಎದುರು ಇದೆ. ಸಾಮಾನ್ಯವಾಗಿ 50–100 ಕೇಡರ್‌ಗಳಿಗೆ ವಸತಿ ಕಲ್ಪಿಸಲಾಗುತ್ತದೆ, ಇದನ್ನು ಮುಫ್ತಿ ಅಸ್ಗರ್ ಖಾನ್ ಕಾಶ್ಮೀರಿ ನೋಡಿಕೊಳ್ಳುತ್ತಾನೆ. ಪರಾರಿಯಾದ ಉಗ್ರ ಆಶಿಕ್ ನೆಂಗ್ರೂ ಮತ್ತು ಇತರರು ಇಲ್ಲಿಂದ ಕಾರ್ಯನಿರ್ವಹಿಸುತ್ತಾರೆ. ಈ ಸೌಲಭ್ಯವನ್ನು ಪಾಕಿಸ್ತಾನ ಸೇನೆಯ ಗಣ್ಯ ವಿಶೇಷ ಸೇವೆಗಳ ಗುಂಪು (SSG) ಜೆಇಎಂ ಹೋರಾಟಗಾರರಿಗೆ ತರಬೇತಿ ನೀಡಲು ಬಳಸಲಾಗುತ್ತದೆ.

ಟ್ರಾಕ್ಟರ್‌ನಲ್ಲಿ ಉಗ್ರರ ಶವ ಸಾಗಿಸಿದ ಪಾಕಿಸ್ತಾನ



ಅಂತ್ಯಕ್ರಿಯೆಯಲ್ಲಿ ಪಾಕ್ ಸೇನಾ ಅಧಿಕಾರಿಗಳು ಭಾಗಿ

ಭಾರತೀಯ ಸೇನೆ ರಾತ್ರೋರಾತ್ರಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಒಂಭತ್ತು ಅಡಗುತಾಣಗಳ ಮೇಲೆ ದಾಳಿ ನಡೆಸಿತ್ತು.

ಈ ಪ್ರತೀಕಾರದ ದಾಳಿಯಲ್ಲಿ ನಿಷೇಧಿತ ಮೂರು ಉಗ್ರ ಸಂಘಟನೆಗಳಾದ ಜೈಶ್ ಎ ಮೊಹಮ್ಮದ್, ಲಷ್ಕರ್ ಎ ತೈಬಾ ಮತ್ತು ಹಿಜ್ಬುಲ್ ಮುಜಾ ಹಿದ್ದೀನ್ ಉಗ್ರರ ಪ್ರಧಾನ ಕಚೇರಿಗಳು ಧ್ವಂಸವಾಗಿವೆ. ಕಾರ್ಯಾಚರಣೆಯಲ್ಲಿ ನಿಷೇಧಿತ ಜೈಶ್–ಎ–ಮೊಹಮ್ಮದ್ ಭಯೋತ್ಪಾದಕ ಗುಂಪುಗಳ ನೆಲೆಯಿರುವ ಬಹವಾಲ್‌ಪುರದಲ್ಲಿ ಮರ್ಕಜ್ ಸುಭಾನ್ ಅಲ್ಲಾ ಮಸೀದಿ, ತೆಹ್ರಾ ಕಲಾನ್ ನಲ್ಲಿನ ಸರ್ಜಾಲ್, ಕೋಟಿಯ ಮರ್ಕಜ್ ಅಬ್ಬಾಸ್ ಮತ್ತು ಮುಜಫರಾಬಾದ್‌ನ ಸೈಯನ್ನಾ ಬಿಲಾಲ್ ಕ್ಯಾಂಪ್‌ಗಳ ಮೇಲೆ ಭಾರತ ದಾಳಿ ನಡೆಸಿದೆ. ಲಷ್ಕರ್ ಎ ತೈಬಾ ಉಗ್ರ ಸಂಘಟನೆಯ ಶಿಬಿರಗಳಿರುವ ಮುರ್ಡಿಕೆಯ ಮರ್ಕಝ್ ತೈಬಾ, ಬರ್ನಾಲಾದಲ್ಲಿ ಮರ್ಕಝ್ ಅತ್ತೆ ಹದಿತ್ ಮತ್ತು ಮುಜಫರಾಬಾದ್‌ನ ಶ್ವಾಯಿನಲ್ಲಾ ಮೇಲೆ ದಾಳಿ ನಡೆದಿದೆ.

ಇಸ್ಲಾಮಾಬಾದ್, ಮೇ 7– ಭಾರತ ಸೇನೆಯ ಆಪರೇಷನ್ ಸಿಂಧೂರಕ್ಕೆ ತತ್ತರಿಸಿರುವ ಪಾಕ್, ಉಗ್ರರ ಶವಗಳಿಗೆ ಧ್ವಜ ಹೊದಿಸಿ ಟ್ರ್ಯಾಕ್ಟರ್‌ನಲ್ಲಿ ಸಾಗಿಸಿದ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ವೀಡಿಯೋ ಕ್ಲಿಪ್‌ನಲ್ಲಿ, ಭಯೋತ್ಪಾದಕರ ಶವಗಳಿಗೆ ಪಾಕ್ ಧ್ವಜ ಹೊದಿಸಿ ಗೌರವ ಸೂಚಿಸಲಾಗಿದೆ. ಈ ಶವಗಳನ್ನು ಬಹಾವಲ್ಪುರದಲ್ಲಿ ಅಂತ್ಯಕ್ರಿಯೆಗೆ ಕೊಂಡೊಯ್ಯಲಾಗುತ್ತಿತ್ತು. ಉಗ್ರರ ಶವಗಳ ಅಂತ್ಯಕ್ರಿಯೆಯಲ್ಲಿ ಪಾಕ್ ಸೇನೆ ಅಧಿಕಾರಿಗಳು ಭಾಗವಹಿಸಿ ಅಂತಿಮ ನಮನ ಸಲ್ಲಿಸಿದ್ದಾರೆ.

ಇದರಿಂದಾಗಿ ಉಗ್ರವಾದಿಗಳಿಗೆ ಪಾಕ್ ಸೇನೆಯ ಬೆಂಬಲ ಎಷ್ಟರಮಟ್ಟಿಗಿತ್ತು ಎಂಬುದು ರುಜುವಾತಾಗುತ್ತದೆ.

'ಆಪರೇಷನ್ ಸಿಂಧೂರ' ಯಶಸ್ಸು ಕೋರಿ ಆಂಜನೇಯನಿಗೆ ವಿಶೇಷ ಪೂಜೆ



'ಆಪರೇಷನ್ ಸಿಂಧೂರ' ಯಶಸ್ವಿಗೊಳ್ಳಲಿ ಎಂದು ಯುವ ಭಾರತ್ ಸಂಘಟನೆ ಹಾಗೂ ವೀರ ಸಾವರ್ಕರ್ ಯುವ ಬಳಗದ ವತಿಯಿಂದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿ ವೃತ್ತದ ಬಳಿಯ ಜೆಎಸ್‌ಎಸ್ ವಿದ್ಯಾಪೀಠದ ಮುಂಭಾಗವಿರುವ ಶ್ರೀ ಕಾರ್ಯ ಸಿದ್ಧಿ ಆಂಜನೇಯ ದೇವಸ್ಥಾನದಲ್ಲಿ ಬುಧವಾರ ವಿಶೇಷ ಪೂಜೆ ಸಲ್ಲಿಸಲಾಯಿತು.

ಮೈಸೂರು, ಮೇ 7(ಜಿಎ)–'ಆಪರೇಷನ್ ಸಿಂಧೂರ' ಯಶಸ್ವಿಗೊಳ್ಳಲಿ ಎಂದು ಯುವ ಭಾರತ್ ಸಂಘಟನೆ ಹಾಗೂ ವೀರ ಸಾವರ್ಕರ್ ಯುವ ಬಳಗದ ವತಿಯಿಂದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿ ವೃತ್ತದ ಬಳಿಯ ಜೆಎಸ್‌ಎಸ್ ವಿದ್ಯಾಪೀಠದ ಮುಂಭಾಗವಿರುವ ಶ್ರೀ ಕಾರ್ಯಸಿದ್ಧಿ ಆಂಜನೇಯ ದೇವಸ್ಥಾನದಲ್ಲಿ ಬುಧವಾರ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ ಹಣೆಗೆ ಪರಸ್ಪರ ತಿಲಕ ಇಡುವ ಮೂಲಕ ಕೇಂದ್ರದ ದಿಟ್ಟ ಹೆಜ್ಜೆ ಆಪರೇಷನ್ ಸಿಂಧೂರ ಸ್ವಾಗತಿಸಿದರು.

ನಂತರ ಮಾಧ್ಯಮಗಳೊಂದಿಗೆ ಮಾಜಿ ಸಂಸದ ಪ್ರತಾಪ್‌ಸಿಂಹ ಮಾತನಾಡಿ, ಜಮ್ಮು ಮತ್ತು ಕಾಶ್ಮೀರ ಭಾರತ ಮಾತೆಯ ಸಿಂಧೂರ ಅಂತ ಚಿಕ್ಕಂದಿನಿಂದಲೂ ಹೇಳಿಕೊಂಡು ಬೆಳೆದಿದ್ದೇವೆ. ಭಾರತ ಮಾತೆಯ ಸಿಂಧೂರ ಕಾಶ್ಮೀರದಲ್ಲಿ ಹಿಂದೂ ಹೆಣ್ಣು ಮಕ್ಕಳ ಸಿಂಧೂರ ಅಳಿಸುವ ಕೆಲಸಕ್ಕೆ ಮುಸ್ಲಿಂ ಉಗ್ರರು ಮುಂದಾಗಿದ್ದರು. ಅದಕ್ಕೆ ತಕ್ಕ ಉತ್ತರವನ್ನು ಮೋದಿ ನೀಡಿದ್ದಾರೆ ಎಂದರು.

ಕೇವಲ ಘೋಷ ವಾಕ್ಯದಿಂದ ಮೋದಿ ಬೆಳೆದು ಬಂದಿಲ್ಲ. ಅದಕ್ಕೆ ತಕ್ಕ ಉತ್ತರ ಕೊಡುವ ನಾಯಕನಾಗಿ ಬೆಳೆದಿದ್ದಾರೆ. ಹೆಣ್ಣು ಮಕ್ಕಳ ಸಿಂಧೂರ ಅಳಿಸಿದ ಉಗ್ರರ ಹುಟ್ಟನ್ನು ಅಡಗಿಸಿದ್ದಾರೆ. ನಮ್ಮ ಹೆಮ್ಮೆಯ ಸೈನಿಕರಿಗೆ, ದೇಶದ ಪ್ರಧಾನಿಗೆ ಇಡಿ ಭಾರತೀಯರ ಪರವಾಗಿ, ಕನ್ನಡಿಗರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಜಮ್ಮು ಕಾಶ್ಮೀರದಲ್ಲಿ ನಮ್ಮವರ ಹತ್ಯೆ ಮಾಡಿದರು. ಅದಕ್ಕೆ ಪ್ರತೀಕಾರವನ್ನು ಭಾರತ ತೀರಿಸಿಕೊಂಡಿದೆ. ಈ ಹಿಂದೆ ಪುಲ್ವಾಮಾ ಅಟ್ಯಾಕ್ ಆದ ಬಳಿಕ ಮೋದಿ ಪಾಕ್ ಮುಟ್ಟಿ ನೋಡಿಕೊಳ್ಳುವ ರೀತಿ ಉತ್ತರ ಕೊಟ್ಟಿದ್ದರು. ಅದು ಕೂಡ 12 ದಿನಗಳ ಅಂತರದಲ್ಲಿ ಮಾಡಿದರು. ಈಗಲೂ ಕೂಡ ಕಾಶ್ಮೀರ ಘಟನೆಯಾದ 12 ದಿನಗಳಲ್ಲಿ ಪಾಕಿಸ್ತಾನಕ್ಕೆ ನುಗ್ಗಿ ಏರ್ ಸ್ಟ್ರೈಕ್ ಮಾಡಿದ್ದಾರೆ. ನುಗ್ಗಿ ಹೊಡೆದು ನಮ್ಮ ಸೈನಿಕರು, ಜೆಟ್‌ಗಳು ವಾಪಸ್ ಬಂದಿದೆ. ಇದು ನಮ್ಮ ಸೇನೆಯ ಶಕ್ತಿ ತೋರಿಸುತ್ತದೆ. ಈ ಹಿಂದೆ ನ್ಯೂಕ್ಲೀಯರ್ ಬಾಂಬ್ ಟೆಸ್ಟ್ ಮಾಡಿ ಅಟಲ್ ಬಿಹಾರಿ ವಾಜಪೇಯಿ ಹೆಮ್ಮೆಪಡುವಂತೆ ಮಾಡಿದರು. ಇದೀಗ ಮೋದಿ ಕೂಡ ಪಾಕ್‌ಗೆ ತಕ್ಕ ಉತ್ತರ ಕೊಟ್ಟಿದ್ದಾರೆ. ಇದು ನಮ್ಮ ಭಾರತದ ಪ್ರತೀಕಾರ ಎಂದರು.

> “ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲು ಯುದ್ಧ ಬೇಡ ಎಂದು ಹೇಳಿ ಪಾಕಿಸ್ತಾನಿಗಳಿಗೆ ಹೀರೋ ಆಗಿದ್ದರು. ಜನ ಥೂ ಛೀ ಅಂತಾ ಉಗಿದ ಮೇಲೆ ಸಿದ್ದರಾಮಯ್ಯ ಬದಲಾಗಿದ್ದಾರೆ. ಇವತ್ತು ಕಾಂಗ್ರೆಸ್ ಶಾಂತಿಯ ಮಂತ್ರದ ಟ್ವೀಟ್ ಮಾಡಿತ್ತು. ಆದರೆ, ಜನ ತಿರುಗಿ ಬಿದ್ದ ಮೇಲೆ ಟ್ವೀಟ್ ಡಿಲೀಟ್ ಮಾಡಿದ್ದಾರೆ, ಜನಕ್ಕೆ ಹೆದರಿ ಸಿದ್ದರಾಮಯ್ಯ ಇಂದು ಹಣೆಗೆ ಸಿಂಧೂರ ಇಟ್ಟು ಕೊಂಡಿದ್ದಾರೆ. ಸಿದ್ದರಾಮಯ್ಯ ಇಂದು ಸಿಂಧೂರಾಮಯ್ಯ ಆಗಿದ್ದಾರೆ.
> **–ಪ್ರತಾಪ್ ಸಿಂಹ, ಮಾಜಿ ಸಂಸದ**

ಹಿಂದೂಗಳು ಒಟ್ಟಾಗಿದ್ದಾರೆ. ರಾಜಕಾರಣಿಗಳು ಹೇಗೆ ಬದಲಾಗುತ್ತಾರೆ ಎಂಬುದಕ್ಕೆ ಸಿಎಂ ಸಿಂಧೂರವೇ ಸಾಕ್ಷಿ. ಶಾಂತಿಯಿಂದ ಮಾತ್ರ ಸ್ವಾತಂತ್ರ್ಯ ಬಂತಾ? ಗಾಂಧೀಜಿ ಯ ಶಾಂತಿ ಮಾತ್ರದಿಂದ ಮಾತ್ರ ಸ್ವಾತಂತ್ರ್ಯ ಬರಲಿಲ್ಲ. ಭಗತ್ ಸಿಂಗ್, ಸಾವರ್ಕರ್, ಸುಭಾಷ್ ಚಂದ್ರ ಬೋಸ್‌ರಂತಹ ಕ್ರಾಂತಿಕಾರಿಗಳ ಕೊಡುಗೆ ಮುಖ್ಯ ಆಗಿತ್ತು. ಯುದ್ಧ ಗೆದ್ದ ಮೇಲೆ ಶಾಂತಿ ಸ್ಥಾಪನೆ ಮಾಡುತ್ತೇವೆ. ಶಾಂತಿ ಸ್ಥಾಪನೆಗಾಗಿಯೆ ಯುದ್ಧ ಮಾಡುತ್ತಿರುವುದು ಎಂದರು.

ಭಾರತೀಯರ ಸಿಂಧೂರ ಅಳಿಸಲು ಯತ್ನಿಸಿದವರಿಗೆ ಮೋದಿ ತಕ್ಕ ಉತ್ತರ

ಪಾಕಿಸ್ತಾನ ಸೃಷ್ಟಿ ಆಗಲು ಕಾರಣ ಕಾಂಗ್ರೆಸ್. ಪಾಕಿಸ್ತಾನದ ಪಿತಾಮಹ ಕಾಂಗ್ರೆಸ್, ಕಾಂಗ್ರೆಸ್ ಹುಟ್ಟಿಸಿದ ಶಿಶು ಪಾಕಿಸ್ತಾನ. ಹೀಗಾಗಿ ಪಾಕಿಸ್ತಾನದ ಮೇಲೆ ಯುದ್ಧ ಅಂದರೆ ಕಾಂಗ್ರೆಸ್‌ಗೆ ಹಿಂಸೆ ಅನ್ನಿಸುತ್ತೆ. ಕಾಂಗ್ರೆಸ್ ಮನಸ್ಥಿತಿ ಅರ್ಥ ಮಾಡಿಕೊಳ್ಳಬೇಕು. ಸಿದ್ದರಾಮಯ್ಯರ ಒಳಗಡೆಯೂ ನೋವು ಬಂದು ಶಾಂತಿಯ ಮಂತ್ರ ಪಠಿಸಿದ್ದರು ಎಂದು ಕಿಡಿಕಾರಿದರು.

ಈ ವೇಳೆಯಲ್ಲಿ ನಗರಪಾಲಿಕ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಯುವ ಭಾರತ್ ಸಂಘಟನೆಯ ಅಧ್ಯಕ್ಷ ಜೋಗಿ ಮಂಜು, ವೀರ ಸಾವರ್ಕರ್ ಯುವ ಬಳಗದ ಅಧ್ಯಕ್ಷ ರಾಕೇಶ್ ಭಟ್, ಬಿಜೆಪಿ ಮುಖಂಡರಾದ ಆರ್.ಪರಮೇಶ್ ಗೌಡ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಕನ್ನಡ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ವಿಶೇಷ ಚೇತನ ಕ್ರೀಡಾಪಟು ಅಲೋಕ್ ಆರ್.ಜೈನ್, ಬಿಜೆಪಿ ಮುಖಂಡರಾದ ಪ್ರದೀಪ್, ಭೈರತಿ ಲಿಂಗರಾಜು, ಅಮಿತ್, ಸಂದೀಪ್, ಧರ್ಮೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ದೇಶ ರಕ್ಷಣೆಗೆ ನಾವು ಸಿದ್ದರಿದ್ದೇವೆ

ಮಾಜಿ ಸೈನಿಕರ ಘೋಷಣೆ



ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್‌ಉತ್ತಯ್ಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು


ವಿರಾಜಪೇಟೆ: ಭಾರತದ ಮಣ್ಣಿನ ರಕ್ಷಣೆಗೆ ಮಾಜಿ ಸೈನಿಕರಾದ ನಾವು ಸದಾ ಸಿದ್ಧರಿದ್ದೇವೆ. ಕೇಂದ್ರ ಸರ್ಕಾರ ಯಾವ ಸಂದರ್ಭದಲ್ಲಾದರೂ ಆಹ್ವಾನಿಸಿದರೆ ಮುಕ್ತ ಮನಸ್ಸಿನಿಂದ ದೇಶ ಸೇವೆಗೆ ನಾವು ಸದಾ ಸಿದ್ದರಿದ್ದೇವೆ ಎಂದು ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್‌ಉತ್ತಯ್ಯ ಹೇಳಿದ್ದಾರೆ.

ದೇಶಸೇವೆ ಮಾಡುವುದು ನಮ್ಮ ಆಜನ್ಮ ಕರ್ತವ್ಯ. ಪಾಕಿಸ್ತಾನದ ಮೇಲೆ ಯುದ್ಧ ಸಾರುತ್ತಿರುವ ಈ ಹೊತ್ತಿನಲ್ಲಿ ಯಾವುದೇ ಸಂದರ್ಭದಲ್ಲೇ ಆದರೂ ಯುದ್ಧದಲ್ಲಿ ಭಾಗವಹಿಸಲು ಆಹ್ವಾನಿಸಿದರೆ ನಾವೆಲ್ಲ ಸಿದ್ಧರಿದ್ದೇವೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಿಂದೆಯೂ ಕೂಡ ದೇಶದ ಮೇಲೆ ಅನೇಕ ರೀತಿಯ ಭಯೋತ್ಪಾದಕ ಧಾಳಿ ನಡೆಸಲಾಗಿದೆ. ಮುಂಬಯಿ ದಾಳಿ ದೇಶಕ್ಕೆ ಕಪ್ಪು ಚುಕ್ಕೆಯಾಗಿತ್ತು. ಪುಲ್ವಾಮ ಧಾಳಿ ಭೀಕರವಾಗಿತ್ತು. ಸಾಕಷ್ಟು ನಮ್ಮ ಯೋಧರು ಹುತಾತ್ಮರಾದಾಗ ಕೇಂದ್ರ ಸರಕಾರ ದಿಟ್ಟ ಪ್ರತಿಕಾರ ಕ್ರಮ ಕೈಗೊಂಡಿತ್ತು. ಹಾಗೆ ಈ ಬಾರಿ ಪಹಲ್ಗಾಮ್‌ನಲ್ಲಿ ಅಮಾಯಕರ ಮೇಲಿನ ಧಾಳಿಗೆ ತಕ್ಕ ಉತ್ತರ ನೀಡುತ್ತಿದ್ದಾರೆ. ಇದು ಇಷ್ಟಕ್ಕೆ ಸಾಲದು. ಇನ್ನು ಮುಂದೆ ಭಯೋತ್ಪಾದಕರು ಭಾರತದ ತಂಟೆಗೆ ಬಾರದ ರೀತಿಯಲ್ಲಿ ನಡೆಯಬೇಕು ಎಂದರು.

ಸಂಘದ ಉಪಾಧ್ಯಕ್ಷ ರಾಜ ಚಂದ್ರ ಶೇಖರ್, ಮಾಜಿ ಅಧ್ಯಕ್ಷ ಪುಗ್ಗೆ ನಂದಾ, ನಿರ್ದೇಶಕರಾದ ಸಲಾಂ ಕಡಂಗ, ಪಟ್ರ ಪಂಡ ಸೋಮೇಶ್ ಉಪಸ್ಥಿತರಿದ್ದರು.

ವಿರಾಜಪೇಟೆ ಮಹಿಳಾ ಸಮಾಜ-ಬೇಟೋಳಿ ರಸ್ತೆಗೆ ಪಟ್ಟಡ ಸಿ ಉತ್ತಯ್ಯ ಹೆಸರು ನಾಮಕರಣ



ಪಟ್ಟಡ ಕುಟುಂಬದ ಅಧ್ಯಕ್ಷ ಪೂವಣ್ಣ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ವಿರಾಜಪೇಟೆ: ಪಟ್ಟಣದ ಮಹಿಳಾ ಸಮಾಜದಿಂದ ಬೇಟೋಳಿ ಅಂಗನವಾಡಿವರೆಗೆ ತೆರಳುವ ರಸ್ತೆಗೆ ಮಾಜಿ ಮಂತ್ರಿ ಹಾಗೂ ಶಿಕ್ಷಣ ತಜ್ಞ ಪಟ್ಟಡ ಸಿ.ಉತ್ತಯ್ಯ ಅವರ ಹೆಸರು ನಾಮಕರಣ ಮಾಡಲು ತೀರ್ಮಾನಿಸಲಾಗಿದೆ ಎಂದು ಪಟ್ಟಡ ಕುಟುಂಬದ ಅಧ್ಯಕ್ಷ ಪೂವಣ್ಣ ಹೇಳಿದರು.

ವಿರಾಜಪೇಟೆಯಲ್ಲಿ ಹೈಸ್ಕೂಲ್ ಇಲ್ಲದ ಕಾರಣ ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ಹೇರಿ 1922ರಲ್ಲಿ ಹೈಸ್ಕೂಲ್ ಪ್ರಾರಂಭಿಸಿದರು. 1948ರಲ್ಲಿ ಡಿಪಿಓ ಆಗಿ ನಿವೃತ್ತಿ ಹೊಂದಿದ ಬಳಿಕ ಕಾಂಗ್ರೆಸ್ ಪಕ್ಷ ಸೇರಿ ವಿರಾಜಪೇಟೆಯ ಮುನ್ಸಿಪಾಲಿಟಿಯ ಉಪಾಧ್ಯಕ್ಷರಾಗಿದ್ದರು. ಕೊಡಗು ಉಪಾದ್ರಿಯುರ ಸಹಕಾರ ಸಂಘದ ಅಧ್ಯಕ್ಷರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

1952ರಲ್ಲಿ ವಿರಾಜಪೇಟೆ ಗ್ರಾಮಾಂತರ ಪ್ರದೇಶದಿಂದ ಶಾಸಕರಾಗಿ ಆಯ್ಕೆಗೊಂಡು 4 ವರ್ಷಗಳ ಕಾಲ ಶಿಕ್ಷಣ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆ ಇವರದು. 1964 ರಲ್ಲಿ ಸ್ವರ್ಗಸ್ಥರಾದ ಉತ್ತಯ್ಯರ ಸೇವೆಯನ್ನು ಸ್ಮರಿಸಿ ಅವರ ಹೆಸರು ಅಜರಾಮರ ವಾಗಿರಲು ಮನೆಗೆ ತೆರಳುವ ರಸ್ತೆಗೆ ಹೆಸರನ್ನು ಇಟ್ಟು ಸಾರ್ವಜನಿಕರಿಗೆ ಪರಿಚಯಿಸಲಾಗುತ್ತಿದೆ ಎಂದರು.

ಕಾರ್ಯದರ್ಶಿ ಧನು ಉತ್ತಯ್ಯ ಮಾತನಾಡಿ, ಭಾನುವಾರ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಟ್ಟಡ ಒಕ್ಕಡ ಅಧ್ಯಕ್ಷ ಪೂವಣ್ಣ ವಹಿಸಲಿದ್ದಾರೆ. ಮುಖ್ಯಅತಿಥಿಗಳಾಗಿ ಶಾಸಕ ಎ.ಎಸ್.ಪೊನ್ನಣ್ಣ, ನಿವೃತ್ತ ಪೊಲೀಸ್ ಅಧಿಕಾರಿ ಮುಕ್ಕಾಟಿರ ಚೋಟು ಅಪ್ಪಯ್ಯ, ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಉಪಸ್ಥಿತರಿರುವರೆಂದರು. ಗೋಷ್ಠಿಯಲ್ಲಿ ಸಮಿತಿ ಸದಸ್ಯರಾದ ಮೋಹನ್ ಮುತ್ತಪ್ಪ, ಕವಿತಾ ಕಾರ್ಯಪ್ಪ, ಪ್ರಮೀಳಾ ಬೋಪಣ್ಣ, ಜ್ಯೋತಿ ರಾಜನ್ ಇದ್ದರು.

ಕರ್ಣಂಗೇರಿ ಕ್ಷೇತ್ರದ ಶ್ರೀ ರಾಜರಾಜೇಶ್ವರಿ ಬಡಾವಣೆ

ಎಸ್‌ಸಿ ಸಮಗ್ರ ಸಮೀಕ್ಷೆ; ಡಿಸಿ ಭೇಟಿ, ಪರಿಶೀಲನೆ

ಮಡಿಕೇರಿ ಮೇ 7-ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ವರ್ಗೀಕರಣ ಸಂಬಂಧ ನಡೆಯುತ್ತಿರುವ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯನ್ನು ಜಿಲ್ಲಾಧಿಕಾರಿ ವೆಂಕಟ್ ರಾಜಾ ನಗರದ ಉಕ್ಕುಡ ಬಳಿಯ ರಾಜರಾಜೇಶ್ವರಿ ಬಡಾವಣೆಗೆ ತೆರಳಿ ವೀಕ್ಷಿಸಿದರು.

ಮೊಬೈಲ್ ಅಪ್ಲಿಕೇಷನ್ ಮೂಲಕ ಮಾಹಿತಿ ತುಂಬುವ ಬಗ್ಗೆ ಪರಿಶೀಲಿಸಿದರು. ಸಮೀಕ್ಷೆದಾರರು ತಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಸಮೀಕ್ಷೆ ಅಪ್ಲಿಕೇಷನ್‌ಗೆ ಲಾಗಿನ್ ಆಗುವುದು. ಸಮೀಕ್ಷೆದಾರರ ಮೊಬೈಲ್ ಸಂಖ್ಯೆಗೆ ಒಟಿಪಿ ನಮೂದಿಸಿ ಲಾಗಿನ್ ಆಗುವುದು, ಸಮೀಕ್ಷೆ ಪ್ರಾರಂಭಿಸಿ ಎಂಬ ಟ್ಯಾಗ್‌ನ್ನು ಒಳಗೊಂಡು ಸಮೀಕ್ಷೆಗೆ ಕ್ಲಿಕ್ ಮಾಡುವುದು, ಹಾಗೆಯೇ ಮತದಾರರ ಪಟ್ಟಿಯಲ್ಲಿರುವ ಮನೆಗಳ ಆಧಾರದ ಮೇಲೆ ಸಮೀಕ್ಷೆ ಪ್ರಾರಂಭಿಸುವುದು. ಲಿಂಗ, ವಯಸ್ಸು, ಆಧಾರ್ ಕಾರ್ಡ್ ಸಂಖ್ಯೆ ಮತ್ತಿತರವನ್ನು ಭರ್ತಿ ಮಾಡುವುದು, ಶಿಕ್ಷಣ, ವಿದ್ಯಾಭ್ಯಾಸ, ಅಕ್ಷರಸ್ಥ, ಅನಕ್ಷರಸ್ಥ, ಶಾಲೆ ಬಿಟ್ಟ ತರಗತಿ, ಉದ್ಯೋಗ ಮಾಹಿತಿ, ಸರ್ಕಾರಿ ಅಥವಾ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ, ಮತ್ತಿತರ ಭರ್ತಿ ಮಾಡುವ ಸಂಬಂಧ ಸ್ಥಳದಲ್ಲಿಯೇ ವೀಕ್ಷಿಸಿದರು.



ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯನ್ನು ಜಿಲ್ಲಾಧಿಕಾರಿ ವೆಂಕಟ್ ರಾಜಾ ರಾಜರಾಜೇಶ್ವರಿ ಬಡಾವಣೆಗೆ ತೆರಳಿ ವೀಕ್ಷಿಸಿದರು.

ಜಿಲ್ಲೆಯಲ್ಲಿ 552 ಸಮೀಕ್ಷೆದಾರರನ್ನು ನಿಯೋಜಿಸಲಾಗಿದ್ದು, ವಿಧಾನಸಭಾ ಕ್ಷೇತ್ರದಲ್ಲಿ 275, ವಿರಾಜಪೇಟೆ ಕ್ಷೇತ್ರದಲ್ಲಿ 277, ಮತಗಟ್ಟೆವಾರುನಂತೆ ಪರಿಶಿಷ್ಟ ಜಾತಿ ಕುಟುಂಬಗಳು ವಾಸಿಸುವ ಮನೆಗಳಿಗೆ ತೆರಳಿ ಸಮೀಕ್ಷೆ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.'

ಕ್ಷೇತ್ರ ಶಿಕ್ಷಣಾಧಿಕಾರಿ ದೊಡ್ಡೇಗೌಡ ಅವರು ಮಾತನಾಡಿ ಗಣತಿದಾರರಾಗಿ ಶಾಲಾ ಶಿಕ್ಷಕರನ್ನು ನಿಯೋಜಿಸಲಾಗಿದ್ದು, ವ್ಯವಸ್ಥಿತವಾಗಿ ಗಣತಿ ಕೈಗೊಳ್ಳಲಾಗಿದ್ದು, ಸರ್ಕಾರದ ನಿರ್ದೇಶನದಂತೆ ಪರಿಶಿಷ್ಟ ಜಾತಿ ಕುಟುಂಬಗಳ ಸಮೀಕ್ಷೆ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ತಾಲೂಕು ಸಮಾಜ ಕಲ್ಯಾಣಾಧಿಕಾರಿ ಬಾಲಕೃಷ್ಣ ರೈ, ಗಣತಿದಾರರು ಇತರರಿದ್ದರು.

ಕ್ಷುಲ್ಲಕ ಕಾರಣಕ್ಕೆ ಜಗಳ ಕೊಲೆಯಲ್ಲಿ ಅಂತ್ಯ

ಮಡಿಕೇರಿ,ನಾಪೋಕ್ಲು: ಮದ್ಯದ ಅಮಲಿನಲ್ಲಿ ಕ್ಷುಲ್ಲಕ ಕಾರಣಕ್ಕೆ ಕಾರ್ಮಿಕರಿಬ್ಬರ ನಡುವೆ ನಡೆದ ಜಗಳ ಓರ್ವನ ಕೊಲೆಯಲ್ಲಿ ಅಂತ್ಯವಾದ ಘಟನೆ ನಾಪೋಕ್ಲು ಕೋಕೇರಿ ಗ್ರಾಮದಲ್ಲಿ ನಡೆದಿದೆ.



ರಮೇಶ


ಕಾರ್ಮಿಕ ಮಂಜು ಕೊಲೆಗೀಡಾದ ದುರ್ದೈವಿಯಾಗಿದ್ದಾನೆ ಕೊಲೆ ಮಾಡಿದ ಆರೋಪಿ ರಮೇಶ್ ಈಗ ಪೋಲೀಸರ ಅತಿಥಿಯಾಗಿದ್ದಾನೆ.

ಗ್ರಾಮದ ನಿವಾಸಿ ಪಿ.ಎಸ್ ಮಾದಪ್ಪ ಅವರ ಲೈನ್ ಮನೆಯಲ್ಲಿ ರಮೇಶ್ ಮತ್ತು ಪತ್ನಿ ಕಾವೇರಿ ಹಲವು ವರ್ಷಗಳಿಂದ ವಾಸವಾಗಿದ್ದರು. ಕೆಲ ದಿನಗಳ ಹಿಂದೆ ಕುಶಾಲನಗರ ಬಳಿಯ ಮಾದಲಾಪುರದಿಂದ ಕಾಫಿ ತೋಟಕ್ಕೆ ಕಪತ್ ಮಾಡಲೆಂದು ಆಗಮಿಸಿದ್ದ ಕಾರ್ಮಿಕರು ಈ ಲೈನ್ ಮನೆ ಸಮೀಪ ವಾಸವಿದ್ದರು.

ರಾತ್ರಿ ಕಾರ್ಮಿಕ ಮಂಜು ಹಾಗೂ ರಮೇಶ್ ನಡುವೆ ಕಲಹ ಏರ್ಪಟ್ಟಿದೆ. ಕುಡಿದ ಮತ್ತಿನಲ್ಲಿ ಪರಸ್ಪರ ಬಡಿದಾಡಿಕೊಂಡಿದ್ದು ಮಂಜು ಎಂಬಾತನಿಗೆ ಕತ್ತಿ ಏಟಿನಿಂದ ತೀವ್ರ ಗಾಯಗಳಾಗಿದೆ. ಈ ಬಗ್ಗೆ ಮಾಹಿತಿ ತಿಳಿದ ತೋಟದ ಮಾಲೀಕ ಪಿ.ಎಸ್.ಮಾದಪ್ಪ ನಾಪೋಕ್ಲು ಪೊಲೀಸರಿಗೆ ದೂರು ನೀಡಿ ಗಾಯಾಳು ಮಂಜುನನ್ನು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದರಾದರೂ ಚಿಕಿತ್ಸೆ ಫಲಕಾರಿ ಆಗದೆ ಮಂಜು ಮೃತಪಟ್ಟಿದ್ದಾನೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ. ಪೊಲೀಸರು ಮೊಕದ್ದಮೆ ದಾಖಲಿಸಿಕೊಂಡು ಆರೋಪಿ ರಮೇಶ್‌ನನ್ನು ಬಂಧಿಸಿ ಕಾನೂನಿನ ಕ್ರಮ ಕೈಗೊಂಡಿದ್ದಾರೆ.

ಕಾಫಿ ಪ್ಲಾಂಟರ್ ಹತ್ಯೆ ಮಾಡಿದ್ದ ಆರೋಪಿ ಬಂಧನ

ಮಡಿಕೇರಿ,ಮೇ 7-ಕಾಫಿ ಬೆಳೆಗಾರನ ಹತ್ಯೆಗೆ ಸಂಬಂಧಿಸಿದಂತೆ ಮೃತ ವ್ಯಕ್ತಿಯ ಸಹೋದರ ಕೊಳಂಬೆ ಸುಬ್ಬಯ್ಯ(72) ಎಂಬಾತನನ್ನು ಬಂಧಿಸಲಾಗಿದೆ.



ಸುಬ್ಬಯ್ಯ

ಕುಶಾಲನಗರ ತಾಲೂಕಿನ ನಂಜರಾಯಪಟ್ಟಣ ನಿವಾಸಿ ಕೊಳಂಬೆ ವಿನಯ್ ಕುಮಾರ್(50) ಎಂಬವರನ್ನು ಗುಂಡು ಹೊಡೆದು ಹತ್ಯೆ ಮಾಡಲಾಗಿತ್ತು. ತನಿಖೆ ಕೈಗೊಂಡ ಪೊಲೀಸರು ಆರೋಪಿ ಕೊಳಂಬೆ ಸುಬ್ಬಯ್ಯನನ್ನು ಬಂಧಿಸಿದ್ದಾರೆ. ಕೃತ್ಯಕ್ಕೆ ಬಳಸಿದ್ದ ಒಂಟಿ ನಳಿಗೆ ಬಂದೂಕನ್ನು ವಶಕ್ಕೆ ಪಡೆಯಲಾಗಿದ್ದು, ತನಿಖೆ ಮುಂದುವರೆಸಲಾಗಿದೆ. ಸಹೋದರರ ನಡುವೆ ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ವ್ಯಾಜ್ಯವಿದ್ದು, ಇದೇ ವಿಚಾರಕ್ಕೆ ಕೊಲೆ ಘಟನೆ ನಡೆದಿದೆ ಎಂಬುದು ತನಿಖೆಯಿಂದ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ

ಮೀರಾ ವೆಲ್ಸ್, ಡಾ.ಶುಭಾ ವರ್ಮಾ ತಂಡ ಭೇಟಿ

ಮಡಿಕೇರಿ: ಕೋವಿಡ್-19 ಸಂದರ್ಭದಲ್ಲಿ 'ಆಕ್ಸಿಜನ್ ಫಾರ್ ಇಂಡಿಯಾ' ಕಾರ್ಯಕ್ರಮದಡಿಯಲ್ಲಿ ಅಮೇರಿಕಾದ ಮೀರಾ ವೆಲ್ಸ್, ಡಾ.ಶುಭಾ ವರ್ಮಾ ಮತ್ತು ತಂಡದವರು ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಕೊಡುಗೆಯಾಗಿ ನೀಡಿದ್ದು, ಈ ಸಂಬಂಧ ಡಾ. ಮೀರಾ ವೆಲ್ಸ್ ಅವರ ಪತಿ ಐಬಿಎಂ ಸಂಸ್ಥೆ ನಿರ್ದೇಶಕ ಕೋರ್ಟ್ ಲ್ಯಾಂಡ್ ನಿವೃತ್ತ ಐಎಎಸ್ ಅಧಿಕಾರಿ ಎ.ಕೆ.ಮೊಣ್ಣಪ್ಪ ಮತ್ತು ಸ್ಥಳೀಯ ವೈದ್ಯ ಡಾ.ಸಣ್ಣುವಂಡ ಕಾವೇರಪ್ಪ ಭೇಟಿ ನೀಡಿ ಪರಿಶೀಲಿಸಿದರು.

ಡಾ.ಶೋಭಾ ಚೊಟ್ಟೆರಾ, ಎ.ಕೆ ಮೊಣ್ಣಪ್ಪ, ನಾಪೋಕ್ಲುವಿನಿಂದ ಡಾ.ಸಣ್ಣುವಂಡ್ಡವರನ್ನು ಸಂಪರ್ಕಿಸಿದ ಎಂ.ಕಾವೇರಪ್ಪ ಕೊಡಗಿನಲ್ಲಿ ಆಮ್ಲಜನಕದ ಸಾಂದ್ರೀಕರಣದ ಅಗತ್ಯವಿದೆಯೇ ಎಂದು ವಿಚಾರಿಸಿ. ಅಂದಿನ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮತ್ತು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಅವರನ್ನು ಸಂಪರ್ಕಿಸಿ ಉಪಕರಣದ ಅವಶ್ಯಕತೆ ಬಗ್ಗೆ ಆಸಕ್ತಿ ವ್ಯಕ್ತಪಡಿಸಿದರು.



ಜಿಲ್ಲಾ ವೈದ್ಯಕೀಯ ಸಂಸ್ಥೆಗೆ ಇಂದು ಡಾ.ಮೀರಾ ವೆಲ್ಸ್ ಅವರ ಪತಿ ಐಬಿಎಂ ಸಂಸ್ಥೆ ನಿರ್ದೇಶಕ ಕೋರ್ಟ್‌ಲ್ಯಾಂಡ್, ನಿವೃತ್ತ ಐಎಎಸ್ ಅಧಿಕಾರಿ ಎ.ಕೆ.ಮೊಣ್ಣಪ್ಪ, ಮತ್ತು ಸ್ಥಳೀಯ ವೈದ್ಯ ಡಾ ಸಣ್ಣುವಂಡ ಕಾವೇರಪ್ಪ ಭೇಟಿ ನೀಡಿದ್ದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್, ಸಂಸ್ಥೆ ಪ್ರಾಂಶುಪಾಲ ಡಾ.ವಿಶಾಲ್‌ಕುಮಾರ್, ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ರೋಹಿಣಿ ಹಾಜರಿದ್ದು, ತಂಡದೊಂದಿಗೆ ಆತ್ಮೀಯ ಸಂವಾದ ನಡೆಸಿದರು.

ವಿದೇಶದ ಆರೋಗ್ಯ ತಂತ್ರಜ್ಞಾನ ಮತ್ತು ಈ ದೇಶದ ಆರೋಗ್ಯ ಕ್ಷೇತ್ರದ ಬೆಳವಣಿಗೆ ಮತ್ತು ಅಗತ್ಯತೆಗಳ ಬಗ್ಗೆ ಚರ್ಚೆ ನಡೆಸಲಾಯಿತು. ಕೊಡಗು ವೈದ್ಯಕೀಯ ಮಹಾವಿದ್ಯಾಲಯದ ಪರವಾಗಿ ಡಾ.ಕಾವೇರಪ್ಪ ಅವರು ಡಾ.ಮೀರಾ ವೆಲ್ಸ್ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದರು ಮತ್ತು ಭವಿಷ್ಯದಲ್ಲಿ ಗ್ರಾಮೀಣ ವೈದ್ಯಕೀಯ ಕಾಲೇಜಿಗೆ ನಿರಂತರ ಬೆಂಬಲವನ್ನು ಕೋರಿದರು.

ಇಂದು ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ

ಮಡಿಕೇರಿ: ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಆದೇಶದಂತೆ ಬೆಳಗ್ಗೆ 9ಕ್ಕೆ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ.

ರಾಜ್ಯದ ಮುಜರಾಯಿ ಇಲಾಖೆಯ ಎಲ್ಲಾ ದೇವಾಲಯಗಳಲ್ಲಿ ಭಾರತೀಯ ಸೇನೆಯ ಹೆಸರಿನಲ್ಲಿ ಯೋಧರಿಗೆ ಒಳಿತಾಗಲಿ ಎಂದು ಹಾರೈಸುತ್ತಾ, ಭಾರತೀಯ ಸೇನೆಗೆ ಮತ್ತಷ್ಟು ಶಕ್ತಿಯನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸಿ ವಿಶೇಷ ಪೂಜೆ ಮಾಡುತ್ತಿರುವುದಾಗಿ ಕಾರ್ಯ ನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.



ಶ್ರದ್ಧಾಭಕ್ತಿಯಿಂದ ನಡೆದ ಶ್ರೀ ರಾಜರಾಜೇಶ್ವರಿ ದೇವಾಲಯದ ವಾರ್ಷಿಕೋತ್ಸವ

ಮಡಿಕೇರಿ: ನಗರದ ಅಂಚಿನಲ್ಲಿರುವ ಕರ್ಣಂಗೇರಿ ಕ್ಷೇತ್ರದ ಶ್ರೀ ರಾಜರಾಜೇಶ್ವರಿ ದೇವಾಲಯದ ವಾರ್ಷಿಕೋತ್ಸವ ಶ್ರದ್ಧಾ ಭಕ್ತಿಯಿಂದ ನಡೆಯಿತು. ದೇವಾಲಯದಲ್ಲಿ ಧ್ವಜಾರೋಹಣದ ಮೂಲಕ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು. ಗಣಪತಿ ಹೋಮ, ದೇವಿಗೆ ಅಭಿಷೇಕ, ಹೂವಿನ ಅಲಂಕಾರ ನಂತರ ತೀರ್ಥ ಸ್ನಾನ, ಕಳಶ ಪೂಜೆ, ನೈವೇದ್ಯ ಪ್ರಸಾದ ಹಾಗೂ ಮಹಾಮಂಗಳಾರತಿ ನಡೆಯಿತು. ದೇವಿಯ ರಥೋತ್ಸವ ದೇವಾಲಯದ ಆವರಣದ ಸುತ್ತ ಸಾಗಿತು. ನಂತರ ತುಲಾಭಾರ, ತಲೆಮುಡಿ ತೆಗೆಯುವುದು, ತೀರ್ಥಸ್ನಾನ, ಉರುಳು ಸೇವೆ, ಕುಂಕುಮ ಅರ್ಚನೆ, ಮಂಗಳಾರತಿ, ಅನ್ನದಾನ, ತಾಯಿಯ ದರ್ಶನ ಜರುಗಿತು. ಸಂಜೆ ದೇವಾಲಯದ ಆವರಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ದೀಪಾಲಂಕಾರ ನಡೆಯಿತು.

ಕ್ರೀಡಾ ಚಟುವಟಿಕೆಗಳು ನಿರಂತರವಾಗಿರಬೇಕು

ಕುಲಪತಿ ಪ್ರೊ. ಎಂ.ಆರ್. ಗಂಗಾಧರ್

ಚಾಮರಾಜನಗರ: ಕ್ರೀಡಾ ಚಟುವಟಿಕೆಗಳು ಒಂದು ದಿನದ ಕಾರ್ಯಕ್ರಮವಾಗದೇ ನಿರಂತರವಾಗಿರಬೇಕು ಎಂದು ಕುಲಪತಿ ಪ್ರೊ. ಎಂ.ಆರ್. ಗಂಗಾಧರ್ ತಿಳಿಸಿದರು.

ಜಿಲ್ಲಾ ಕ್ರೀಡಾಂಗಣದಲ್ಲಿಂದು ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ಅಂತರ ಕಾಲೇಜುಗಳ ಪುರುಷರ ಹಾಗೂ ಮಹಿಳೆಯರ ಕ್ರೀಡಾಕೂಟ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕ್ರೀಡಾ ಚಟುವಟಿಕೆ ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಅವಿಭಾಜ್ಯ ಅಂಗವಾಗಿರಬೇಕು. ಕ್ರೀಡೆ ದೈಹಿಕ, ಮಾನಸಿಕ ಸದೃಢತೆಗೆ ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕ್ರೀಡೆಗೂ ಮಹತ್ವ ನೀಡಬೇಕು. ವಿಶ್ವವಿದ್ಯಾಲಯದಲ್ಲಿ ಕ್ರೀಡೆಗೂ ಪ್ರಾಮುಖ್ಯತೆ ನೀಡಲು ದೈಹಿಕ ಶಿಕ್ಷಣ ವಿಭಾಗಕ್ಕೆ ನಿರ್ದೇಶಕರನ್ನು ನೇಮಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಡೀನ್ ಡಾ.ಎಚ್.ಜಿ. ಮಂಜುನಾಥ್ ಮಾತನಾಡಿ ಪ್ರತಿಯೊಬ್ಬರು ದೈಹಿಕ ಹಾಗೂ ಮಾನಸಿಕ ಆರೋಗ್ಯದಿಂದ ಕೂಡಿರಲು ಕ್ರೀಡೆಗಳು ಸಹಕಾರಿಯಾಗಿವೆ. ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ಪ್ರತಿದಿನ ಉಲ್ಲಾಸ, ಉತ್ಸಾಹದಿಂದಿರಲು ಸಾಧ್ಯವಾಗಲಿದೆ ಎಂದರು.

ಅಂತರಾಷ್ಟ್ರೀಯ ಖೋ-ಖೋ ಕ್ರೀಡಾಪಟು ಬಿ. ಚೈತ್ರ ಮಾತನಾಡಿ ಕ್ರೀಡೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರೆ ಯಶಸ್ಸು ನಮ್ಮನ್ನು ಹುಡುಕಿ ಬರಲಿದೆ. ನಾನು ಸಹ ಸಾಮಾನ್ಯ ಕ್ರೀಡಾಪಟುವಾಗಿದ್ದೆ, ಕ್ರೀಡೆಯನ್ನು ಪ್ರೀತಿಸಿ, ಯಶಸ್ವಿಯಾಗಿದ್ದೇನೆ. ಗಣ್ಯರಿಂದ ಸಾಕಷ್ಟು ಅಭಿನಂದನೆ ಗಳನ್ನು ಪಡೆದಿದ್ದೇನೆ. ಮುಂದಿನ ದಿನಗಳಲ್ಲಿ ಕ್ರೀಡಾಕ್ಷೇತ್ರಕ್ಕೆ ಹೆಚ್ಚಿನ ಕೊಡುಗೆ ನೀಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.



ಅಂತರ ಕಾಲೇಜುಗಳ ಪುರುಷರ ಹಾಗೂ ಮಹಿಳೆಯರ ಕ್ರೀಡಾಕೂಟವನ್ನು ಡೀನ್ ಡಾ. ಎಚ್.ಜಿ. ಮಂಜುನಾಥ್ ಉದ್ಘಾಟಿಸಿದರು. ಕುಲಪತಿ ಪ್ರೊ. ಎಂ.ಆರ್.ಗಂಗಾಧರ್ ಉಪಸ್ಥಿತರಿದ್ದರು.

ಕುಲಸಚಿವ (ಆಡಳಿತ) ಆರ್.ಲೋಕನಾಥ್, ಪರಿಕ್ಷಾಂಗ ಕುಲಸಚಿವ ಡಾ.ವಿ.ಜಿ. ವೆಂಕಟರಮಣ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಶಾಂತರಾಜು, ಜಿಲ್ಲಾ ಯುವ ಪ್ರಶಸ್ತಿ ಪುರಸ್ಕೃತರು ಹಾಗೂ ವಿ.ವಿ. ಕ್ರೀಡಾ ಸಲಹಾ ಸಮಿತಿ ಸದಸ್ಯರಾದ ಜಿ. ಬಂಗಾರು, ಕಾರ್ತಿಕ್, ಇತರರು ಕಾರ್ಯಕ್ರಮದಲ್ಲಿ ಇದ್ದರು. ಇದೇ ವೇಳೆ ಅಂತರಾಷ್ಟ್ರೀಯ ಖೋ ಖೋ ಕ್ರೀಡಾಪಟು ಹಾಗೂ ವಿಶ್ವಕಪ್ ವಿಜೇತೆ ಬಿ. ಚೈತ್ರ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ವಿ.ವಿ. ಕುಲಪತಿ ಪ್ರೊ.ಎಂ.ಆರ್. ಗಂಗಾಧರ್ ಧ್ವಜಾರೋಹಣ ನೆರವೇರಿಸಿ, ವಿವಿಧ ತಾಲೂಕುಗಳಿಂದ ಆಗಮಿಸಿದ್ದ ಕ್ರೀಡಾತಂಡಗಳ ಪರಿಚಯ ಮಾಡಿಕೊಂಡರು. ಬಳಿಕ ಕ್ರೀಡಾಪಟುಗಳಿಂದ ಆಕರ್ಷಕ ಪಥಸಂಚಲನ ನಡೆಯಿತು.

ಆಪರೇಷನ್ ಸಿಂಧೂರ

ಭಗತ್ ಯುವಸೇನೆ ವಿಜಯೋತ್ಸವ

ಚಾಮರಾಜನಗರ, ಮೇ 7- ಪಾಕಿಸ್ತಾನದ ಉಗ್ರರ ನೆಲೆಗಳ ಮೇಲೆ ಭಾರತೀಯ ಸೇನೆ ದಾಳಿ ಮಾಡಿ ಉಗ್ರರ ಮಾರಣಹೋಮ ಮಾಡಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಭಗತ್ ಯುವ ಸೇನೆಯಿಂದ ವಿಜಯೋತ್ಸವ ಆಚರಿಸಲಾಯಿತು.

ನಗರದ ಶ್ರೀಚಾಮರಾಜೇಶ್ವರಸ್ವಾಮಿ ಉದ್ಯಾನವನ ಮುಂಭಾಗದಲ್ಲಿ ಸಮಾವೇಶಗೊಂಡ ಸೇನೆಯ ಪದಾಧಿಕಾರಿಗಳು ಭಾರತದ ಬಾವುಟ ಹಿಡಿದು ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಾರ್ವಜನಿಕರಿಗೆ ಸಿಹಿ ವಿತರಿಸಿ ಸಂಭ್ರಮಿಸಿದರು.



ಚಾಮರಾಜನಗರದಲ್ಲಿ ಭಗತ್ ಯುವ ಸೇನೆಯಿಂದ ವಿಜಯೋತ್ಸವ ಆಚರಿಸಲಾಯಿತು.

ಭಗತ್ ಯುವಸೇನೆ ಅಧ್ಯಕ್ಷ ಶಿವವಿರಾಟ್ ಮಾತನಾಡಿ, ಪಾಕಿಸ್ತಾನಿ ದಾಳಿಗೆ ಪ್ರತೀಕಾರವಾಗಿ ಶಾಶ್ವತವಾಗಿ ಕಡಿವಾಣ ಹಾಕುವ ನಿಟ್ಟಿನಲ್ಲಿ ಒಂದೇ ಬಾರಿ ಎಲ್ಲಾ ಉಗ್ರರನ್ನು ನಿರ್ನಾಮ ಮಾಡಬೇಕು ಎಂದು ಆಗ್ರಹಿಸಿದರು. ಪ್ರತಿ ಬಾರಿ ಉಗ್ರರ ದಾಳಿ ಆದಾಗಲೂ ನಮ್ಮ ಭಾರತೀಯ ಸೇನೆ ಅವರಿಗೆ ತಕ್ಕ ಉತ್ತರ ಕೊಟ್ಟಿದೆ. ಇನ್ಮುಂದೆ ಭಾರತದ ಮೇಲೆ ದಾಳಿ ಮಾಡಲು ಪಾಕಿಸ್ತಾನ ನೂರು ಸಲ ವಿಚಾರ ಮಾಡುವಂತೆ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಪಾಠ ಕಲಿಸಿದೆ ಎಂದು ಹರ್ಷ ವ್ಯಕ್ತಡಿಸಿದರು.

ಈ ವೇಳೆ ನಗರಸಭಾ ಮಾಜಿ ಸದಸ್ಯ ಶಿವಣ್ಣ, ರಾಜುಭಕ್ತಿ, ಸತೀಶ್, ಬಂಗಾರನಾಯಕ, ಕೃಷ್ಣ ಪಾಪು, ಪ್ರದೀಪ್‌ಕುಮಾರ್, ಕಿರಣ್, ಚಂದ್ರು, ಮಣಿ, ರಾಹುಲ್, ನಿಖಿಲ್, ಪ್ರವೀಣ್, ಪೃಥ್ವಿ, ಚೇತನ್ ನಾಯಕ, ಮಹೇಶ್, ಪುನೀತ್, ರಾಜೇಂದ್ರ, ಹರೀಶ್, ಮಂಜು, ಪ್ರಸನ್ನ, ಭಗತ್, ಲೋಹಿತ್, ಪುನೀತ್, ಭಾನುಪ್ರಕಾಶ್ ಇದ್ದರು.

ಹೊಂಗನೂರು ಹಿರಿಕೆರೆಗೆ 14.50 ಕೋಟಿ ರೂ. ಬಿಡುಗಡೆ



ಎಚ್.ವಿ. ಚಂದ್ರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಚಾಮರಾಜನಗರ: ಮಹದೇಶ್ವರಬೆಟ್ಟದಲ್ಲಿ ನಡೆದ ಸಚಿವ ಸಂಪುಟದಲ್ಲಿ ಹೊಂಗನೂರು ಹಿರಿಕೆರೆಯ ಸಮಗ್ರ ಅಭಿವೃದ್ಧಿಗಾಗಿ 14.50ಕೋಟಿ ಅನುದಾನವನ್ನು ರಾಜ್ಯ ಸರ್ಕಾರ ಬಿಡುಗಡೆಗೊಳಿಸಿದ್ದು, ಇದರಿಂದ ಈ ಭಾಗದ ರೈತರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರ ಸಮಿತಿ ಅಧ್ಯಕ್ಷ ಎಚ್.ವಿ.ಚಂದ್ರು ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಭಾಗದ ರೈತರ ಬಹುವರ್ಷಗಳ ಕನಸನ್ನು ನನಸು ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಣ್ಣ ನೀರಾವರಿ ಸಚಿವರಾದ ಬೋಸರಾಜು ಅವರಿಗೆ ಹಾಗೂ ಕೆರೆಯ ಅಭಿವೃದ್ಧಿ ಬಗ್ಗೆ ಸರ್ಕಾರದ ಗಮನ ಸೆಳೆಯುವ ಮೂಲಕ ಅನುದಾನ ಬಿಡುಗಡೆ ಮಾಡಿಸಿದ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಹೊಂಗನೂರು ಹಿರಿಕೆರೆಯು ಹೊಂಗನೂರು, ಮಸಣಾಪುರ, ಇರಸವಾಡಿ, ಗಂಗವಾಡಿ, ಸುತ್ತೂರು, ಕಳ್ಳೀಪುರ, ಹೆಚ್.ಮೂಕಳ್ಳಿ, ಸೇರಿದಂತೆ ಹಲವು ಗ್ರಾಮಗಳ ರೈತರಿಗೆ ಸೇರಿದ್ದು, ಸುಮಾರು 732 ಎಕರೆ ಅಚ್ಚುಕಟ್ಟು ಪ್ರದೇಶವಿದೆ. ಕೆರೆಯಲ್ಲಿ 216.5 ಎಂಸಿಎಫ್‌ಟಿ ಅಂದರೆ 0.250 ಕಾಲು ಟಿಎಂಸಿ ನೀರು ಸಂಗ್ರಹವಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹೊಂಗನೂರು ಗ್ರಾಪಂ ಅಧ್ಯಕ್ಷೆ ರೂಪಾ ಮೋಹನ್, ಉಪಾಧ್ಯಕ್ಷ ನವೀನ್ ಕುಮಾರ್, ಮಸಣಾಪುರ ಗ್ರಾಪಂ ಅಧ್ಯಕ್ಷ ಬಿ. ರೇವಣ್ಣ, ಇರಸವಾಡಿ ಗ್ರಾಪಂ ಅಧ್ಯಕ್ಷ ವಸಂತ ಕುಮಾರ್ ಹಾಜರಿದ್ದರು.

ನಾಳೆ ಶಾರದಾ ಮಾತೆಯ ರಥೋತ್ಸವ

ಚಾಮರಾಜನಗರ, ಮೇ 7- ತಾಲೂಕಿನ ಹೆಬ್ಬಸೂರಿನ ಶೃಂಗೇರಿಯ ಶಾಖಾ ಮಠದಲ್ಲಿ ಶ್ರೀಶಂಕರಾಚಾರ್ಯರ ಜಯಂತಿ ಅಂಗವಾಗಿ ಮೇ 9ರಂದು ಶಾರದಾ ಮಾತೆಯ ರಥೋತ್ಸವ ನಡೆಯಲಿದೆ ಎಂದು ಮಠದ ಎಚ್.ಎಸ್. ಶ್ರೀಧರಪ್ರಸಾದ್ ತಿಳಿಸಿದರು.

ಅಂದು ಬೆಳಗ್ಗೆ ಸುಬ್ರಹ್ಮಣ್ಯ ಹೋಮ, ರುದ್ರ ಹೋಮ, ಮಹಾಭಿಷೇಕ ನಡೆಯಲಿದೆ. ನಂತರ ಬೆಳಗ್ಗೆ 11 ರಿಂದ 11.30ರವರೆಗೆ ರಥೋತ್ಸವ ನಡೆಯಲಿದೆ. ರಥೋತ್ಸವಕ್ಕೆ ಹೆಚ್ಚಿನ ಭಕ್ತರು ಆಗಮಿಸಿ ಯಶಸ್ವಿಗೊಳಿಸಬೇಕು ಎಂದರು.

ರಥೋತ್ಸವದ ಪ್ರಯುಕ್ತ ಹೆಬ್ಬಸೂರಿನ ಶೃಂಗೇರಿ ಮಠದಲ್ಲಿ ಮೇ 8ರಂದು ಬೆಳಗ್ಗೆ 8 ಗಂಟೆಗೆ ನವಚಂಡಿಕಾಯಾಗ, ಪೂರ್ಣಾಹುತಿ, ಮಹಾ ಮಂಗಳಾರತಿ, ರಥ ಸಂಪ್ರೋಕ್ಷಣೆ, ಉಯ್ಯಾಲೋತ್ಸವ ನಡೆಯಲಿದೆ.

ಪ್ರಣವ್ ಸ್ವರೂಪ್‌ಗೆ ಶೇ.99 ಅಂಕ



ಯಳಂದೂರು, ಮೇ 7- ತಾಲೂಕಿನ ಚಾಮಲಾಪುರ ಗ್ರಾಮದ ಎಸ್. ಪ್ರಣವ ಸ್ವರೂಪ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.99.04 ರಷ್ಟು ಅಂಕಗಳಿದ್ದಾನೆ.

ಕುದೇರು ಪೊಲೀಸ್ ಠಾಣೆಯ ಮುಖ್ಯ ಪೇದೆ ಸಿ.ಜಿ. ಸತೀಶ್ ಹಾಗೂ ರಶ್ಮಿ ದಂಪತಿಯ ಪುತ್ರನಾಗಿರುವ ಈತ ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡುತಿದ್ದಾನೆ. ಕನ್ನಡದಲ್ಲಿ 124, ಇಂಗ್ಲೀಷ್ 100, ಹಿಂದಿ 98, ಗಣಿತ 99, ವಿಜ್ಞಾನ 98, ಸಮಾಜ ವಿಜ್ಞಾನದಲ್ಲಿ 100 ಅಂಕಗಳಿಸುವ ಮೂಲಕ ಒಟ್ಟು 619 ಅಂಕ ಗಳಿಸಿ ಈ ಸಾಧನೆ ಮಾಡಿದ್ದಾನೆ

ಚಾಮುಲ್‌ನಲ್ಲಿ ಐಸ್ ಕ್ರೀಂ ಘಟಕ ಸ್ಥಾಪನೆ ವಿರುದ್ಧ ರೈತರಿಂದ ಪ್ರತಿಭಟನೆ



ಕುದೇರು ಗ್ರಾಮದ ಚಾಮುಲ್ ಕಚೇರಿ ಆವರಣದಲ್ಲಿ ಮಂಗಳವಾರ ರೈತ ಸಂಘ ಹಾಗೂ ಹೈನುಗಾರರು ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿದರು.

ಯಳಂದೂರು, ಮೇ 7- ಕುದೇರು ಗ್ರಾಮದಲ್ಲಿರುವ ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟ(ಚಾಮುಲ್)ದಲ್ಲಿ ನೂತನವಾಗಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಐಸ್‌ಕ್ರೀಂ ಘಟಕವನ್ನು ಸ್ಥಾಪಿಸದಂತೆ ಒತ್ತಾಯಿಸಿ ರೈತ ಸಂಘದ ಸದಸ್ಯರು ಹಾಗೂ ಹೈನುಗಾರರು ಚಾಮುಲ್ ಬಳಿ ಪ್ರತಿಭಟನೆ ನಡೆಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಈಗಾಗಲೇ ಚಾಮುಲ್ 26 ಕೋಟಿ ಸಾಲದಲ್ಲಿದೆ. ಈಗ ಮತ್ತೆ 25 ಕೋಟಿ ರೂ. ಸಾಲವನ್ನು ತಂದು ಐಸ್‌ಕ್ರೀಂ ಘಟಕವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಬಗ್ಗೆ ದೃಢ ನಿರ್ಧಾರ ಹೊಂದಿದ್ದರೆ ಸರ್ಕಾರದಿಂದ ಚಾಮುಲ್‌ಗೆ 25 ಕೋಟಿ ರೂ. ಹಣವನ್ನು ತನ್ನಿ ಎಂದು ಆಗ್ರಹಿಸಿದರು.

ಚಾಮುಲ್‌ನ ವ್ಯವಸ್ಥಾಪಕ ನಿರ್ದೇಶಕ ರಾಜ್ ಕುಮಾರ್ ಮಾತನಾಡಿ, ಹಾಲಿನ ಜಿಡ್ಡಿನ ಅಂಶವನ್ನು ಶೀಘ್ರವಾಗಿ ಪತ್ತೆ ಮಾಡಲು ಹೊಸ ಆಪ್ ಬಿಡುಗಡೆ ಮಾಡಲಾಗುವುದು. ಜೂನ್ ವೇಳೆಗೆ ಇದನ್ನು ಅಳವಡಿಸಲಾಗುವುದು. ಪ್ರತಿ ಉತ್ಪಾದಕರಿಗೂ ಹೊಸ ಆಪ್ ಮೂಲಕ ತಮ್ಮ ಮೊಬೈಲ್‌ನಲ್ಲೇ ತಾವು ಪೂರೈಸಿರುವ ಹಾಲಿನ ಸಂಪೂರ್ಣ ಡಾಟಾವನ್ನು ಪಡೆದುಕೊಳ್ಳುವ ಆಪ್ ಕೂಡ ತಯಾರಾಗಿದ್ದು ಮುಂದಿನ ತಿಂಗಳಿಂದ ಇದು ಜಾರಿಗೆ ಬರಲಿದೆ ಎಂದರು.

ಮಾದ್ರಳ್ಳಿ ಪಾಪಣ್ಣ, ಲೋಕೇಶ್, ಉಮ್ಮತ್ತೂರು ಬಸವರಾಜು, ಅಂಬಳೆ ಶಿವಕುಮಾರ್, ಭೀಮನಬೀಡು ರಾಜ, ಹನೂರು ಜಗದೀಶ್, ಶ್ರೀನಿವಾಸ ರೆಡ್ಡಿ, ವಿರೇಶ್, ಕುದೇರು ಫಣೀಂದ್ರ, ಕೋಡಿಮೋಳೆ ಶಿವರುದ್ರಸ್ವಾಮಿ ಇದ್ದರು.

ವೃದ್ಧ ಕಾಣೆ : ಸುಳಿವಿಗೆ ಸಹಕರಿಸಲು ಮನವಿ

ಚಾಮರಾಜನಗರ: ತಾಲೂಕಿನ ಗಣಗನೂರು ಗ್ರಾಮದ ನಿವಾಸಿ ಬಸವಯ್ಯ ಎಂಬುವರು ಕಾಣೆಯಾಗಿದ್ದಾರೆ.



ಸುಮಾರು 65 ವರ್ಷ ವಯಸ್ಸಿನ ಬಸವಯ್ಯ 5.3 ಅಡಿ ಎತ್ತರ, ಕಪ್ಪು ಮೈಬಣ್ಣ, ಕೋಲು ಮುಖ, ತೆಳ್ಳನೆಯ ಮೈಕಟ್ಟು ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಬಿಳಿ ಬಣ್ಣದ ಶರ್ಟ್ ಮತ್ತು ಪಂಚೆ ಧರಿಸಿದ್ದರು.

ಇವರ ಸುಳಿವು ದೊರೆತಲ್ಲಿ ಕುದೇರು ಠಾಣೆ ದೂ.ಸಂ.08226-234439, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮೊ.ಸಂ.9480804647 ಸಂಪರ್ಕಿಸುವಂತೆ ಕುದೇರು ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಸಿ.ಎಚ್.ರಂಗಸ್ವಾಮಿ ನಿಧನ

ಚಾಮರಾಜನಗರ, ಮೇ 7- ನಗರದ ಡಾ.ಬಿ.ಆರ್. ಅಂಬೇಡ್ಕರ್ ಬಡಾವಣೆ ನಿವಾಸಿ ವೀಣಾ ನ್ಯಾಯಬೆಲೆ ಅಂಗಡಿ ಮಾಲೀಕರಾದ ಸಿ.ಎಚ್. ರಂಗಸ್ವಾಮಿ(78) ಬುಧವಾರ ನಿಧನರಾದರು.



ಮೃತರಿಗೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಇದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಸಾಲ ನವೀಕರಣಕ್ಕೆ ಆಗ್ರಹಿಸಿ ರೈತರ ಪ್ರತಿಭಟನೆ



ಸಾಲ ನವೀಕರಣಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ, ಮೇ 7– ರೈತರು ಪಡೆದ ಸಾಲಗಳಿಗೆ ಬಡ್ಡಿ ಕಟ್ಟಿಸಿಕೊಂಡು ಸಾಲ ನವೀಕರಣ ಮಾಡಿಕೊಡುವಂತೆ ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಪಟ್ಟಣದ ಕೆನರಾ ಬ್ಯಾಂಕ್ ಎದುರು ಪ್ರತಿಭಟನೆ ನಡೆಸಿದರು.

ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಕಿರಗಸೂರು ಶಂಕರ್ ಮಾತನಾಡಿ, ರೈತರು ಬ್ಯಾಂಕ್ ಶಾಖೆಗಳಲ್ಲಿ ಕೃಷಿ ಚಟುವಟಿಕೆಗೆ ಆಧಾರದ ಮೇಲೆ ಕೃಷಿ ಸಾಲ ಪಡೆದ ಬಳಿಕ ಸಾಲದ ಅವಧಿ ಮುಗಿಯುತ್ತಿರುವ ರೈತರಿಗೆ ತಿ.ನರಸೀಪುರ ಶಾಖೆಯಲ್ಲಿ ಬಡ್ಡಿ ಕಟ್ಟಿಸಿಕೊಂಡು ಹೊಸ ಸಾಲವಾಗಿ ನವೀಕರಣ ಮಾಡಿಕೊಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅಸಲು, ಬಡ್ಡಿ ಸೇರಿಸಿ ಕಟ್ಟಬೇಕೆಂದು ಬ್ಯಾಂಕ್ ಅಧಿಕಾರಿಗಳು ನೋಟಿಸ್ ನೀಡುತ್ತಿರುವುದರಿಂದ ರೈತರಿಗೆ ಸಮಸ್ಯೆಯಾಗುತ್ತಿದೆ ಎಂದು ದೂರಿದರು.

ರೈತರಿಗೆ ಕೃಷಿ ಆದಾಯ ಬಿಟ್ಟು ಬೇರೆ ಯಾವ ಆದಾಯವೂ ಬರುವುದಿಲ್ಲ. ಬರಗಾಲ, ಅತಿವೃಷ್ಟಿ, ಅನಾವೃಷ್ಟಿಗಳಿಂದ 2 ವರ್ಷಗಳಿಂದ ಬೆಳೆ ಬೆಳೆದರೂ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಇದರಿಂದ ರೈತರು ಜೀವನ ನಡೆಸುವುದೇ ಕಷ್ಟಕರವಾಗಿದೆ ಎಂದರು.

ಪ್ರಸಕ್ತ ಮುಂಗಾರು ಶುರುವಾಗಿದ್ದು, ರೈತರು ಕೃಷಿ ಚಟುವಟಿಕೆ ನಡೆಸಬೇಕಿದೆ. ಸಿಬಿಲ್ ಸ್ಕೋರ್ ಪರಿಗಣಿಸದೆ ರೈತರಿಗೆ ಹಿಂದಿನ ಸಾಲಕ್ಕೆ ಬಡ್ಡಿ ಕಟ್ಟಿಸಿಕೊಂಡು ಹೊಸ ಸಾಲ ನೀಡಬೇಕು. ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ, ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸಿ ರೈತರಿಗೆ ಸಹಕರಿಸಬೇಕು ಎಂದು ಕೋರಿದರು.

ರೈತರ ಮಕ್ಕಳಿಗೆ ಶೈಕ್ಷಣಿಕ ಸಾಲ ಸೌಲಭ್ಯ, ಮುದ್ರಾ ಯೋಜನೆಯಡಿ ಮಹಿಳೆ ಹಾಗೂ ಯುವಕರಿಗೆ ಉದ್ಯೋಗ ಹೈನುಗಾರಿಕೆ ಸಾಲ, ಸಾಲ ಮೇಳಗಳಲ್ಲಿ ಜಾನುವಾರು ಸಾಕಾಣಿಕೆಗೆ ನೇರ ಸಾಲ ಹಾಗೂ ಸಹಾಯಧನ ಇರುವ ಯೋಜನೆಗಳ ಸಾಲ, ರೈತರಿಗೆ ಹಾಗೂ ಮಹಿಳೆಯರಿಗೆ ಸಹಾಯಧನ ಯೋಜನೆಯಡಿ ಸಾಲಗಳ ವಿವರ, ಕೃಷಿ ಬೆಳೆ ಸಾಲ ವಿವರ ಪ್ರಕಟಿಸಿ, ಕನ್ನಡ ಮಾತನಾಡುವ ಅಧಿಕಾರಿ ಹಾಗೂ ಸಿಬ್ಬಂದಿ ನೇಮಿಸುವಂತೆ ಒತ್ತಾಯಿಸಿದರು.

ರೈತರು ಸಾಲ ಪಡೆಯುವಾಗ ಅಡಮಾನ ಮಾಡಿದ ಆಸ್ತಿಗಳನ್ನು ಹರಾಜು ಮಾಡಬಾರದು. ಪ್ರತಿ 3 ತಿಂಗಳಿಗೊಮ್ಮೆ ಗ್ರಾಹಕರ ಕುಂದು ಕೊರತೆಗಳ ಸಭೆ ಕಡ್ಡಾಯವಾಗಿ ನಡೆಸಿ ಮಾಹಿತಿ ನೀಡುವುದು ಸೇರಿದಂತೆ ಸಮಸ್ಯೆ ಬಗೆಹರಿಸದಿದ್ದಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ಪ್ರದೀಪ್, ಯೋಗೇಶ್, ವಾಚ್ ಕುಮಾರ್, ಅಪ್ಪಣ್ಣ, ಶಿವಪ್ರಸಾದ್, ಮುಡುಕನಪುರ ರೂಪ, ಕುರುಬೂರು ಉಮೇಶ್, ರಾಜಬುದ್ಧಿ, ನಿಂಗರಾಜು, ಬಿ.ಪಿ.ಪರಶಿವಮೂರ್ತಿ, ರವಿ, ಮಂಟೇಸ್ವಾಮಿ, ಬಸವಣ್ಣ ರವಿ, ಪ್ರದೀಪ್, ಪ್ರಕಾಶ್, ಸತೀಶ್, ಗುರುಮಲ್ಲಪ್ಪ, ಬಸವಯ್ಯ, ರಾಜೇಶ್ ಹಾಜರಿದ್ದರು.

ವಿಜೃಂಭಣೆಯ ಶ್ರೀಲಕ್ಷ್ಮಿ ವರದರಾಜಸ್ವಾಮಿ ಬ್ರಹ್ಮ ರಥೋತ್ಸವ



ಶ್ರೀಲಕ್ಷ್ಮೀವರದರಾಜಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಹೆಚ್.ಡಿ.ಕೋಟೆ, ಮೇ 7– ಪಟ್ಟಣದಲ್ಲಿ ಶ್ರೀಲಕ್ಷ್ಮಿವರದರಾಜಸ್ವಾಮಿ ಬ್ರಹ್ಮ ರಥೋತ್ಸವ ಬುಧವಾರ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಶ್ರೀವರದರಾಜಸ್ವಾಮಿ ದೇವಾಲಯದ ಆವರಣದಲ್ಲಿ ಭೂ ನೀಳಾ ಮತ್ತು ಮಹಾಲಕ್ಷ್ಮಿ ಸಮೇತ ಶ್ರೀವರದರಾಜಸ್ವಾಮಿ ಉತ್ಸವ ಮೂರ್ತಿಗಳನ್ನು ಮುಂಜಾನೆ 7.25ರೊಳಗೆ ಸಲ್ಲುವ ವೃಷಭ ಲಗ್ನದಲ್ಲಿ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಈ ವೇಳೆ ವಿವಿಧ ಹೂಗಳಿಂದ ಅಲಂಕಾರಗೊಂಡಿದ್ದ ರಥ ಮಂಗಳವಾದ್ಯ, ನಗಾರಿ, ದಾಸಯ್ಯನ ಕುಣಿತದ ಮೂಲಕ ದೇವಾಲಯದಿಂದ ಹೊರಟು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸ್ವಸ್ಥಾನ ತಲುಪಿತು. ಹೆಚ್ಚಾಗಿ ಮಹಿಳೆಯರೇ ರಥ ಎಳೆಯುತ್ತಿದ್ದದ್ದು ಕಂಡು ಬಂತು. ದಾರಿಯುದ್ದಕ್ಕೂ ಹರಕೆ ಹೊತ್ತ ಭಕ್ತರು ರಥಕ್ಕೆ ಹಣ್ಣು ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಅಲ್ಲದೆ ಭಕ್ತರಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು. ಅಲ್ಲದೇ ತಮಟೆ ಸದ್ದಿಗೆ ಯುವಕರು, ಮಹಿಳೆಯರು ಹೆಜ್ಜೆ ಹಾಕಿದರು. ಇದೇ ವೇಳೆ ದೇವಾಲಯದಲ್ಲಿ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಬ್ರಹ್ಮ ರಥೋತ್ಸವದ ಅಂಗವಾಗಿ ಏ.29 ರಿಂದ ಪ್ರತಿದಿನ ವಿವಿಧ ಸಮಾಜಗಳಿಂದ ಶೇಷ ವಾಹನ, ಸಮರ ಭೂಪಾಲ, ಸೂರ್ಯ ಮಂಡಲ, ಚಂದ್ರಮಂಡಲ, ಪುಷ್ಪ ಮಂಟಪೋತ್ಸವ, ಗರುಡ ವಾಹನ, ಆನೆ ವಾಹನೋತ್ಸವಗಳ ಮೂಲಕ ವರದರಾಜಸ್ವಾಮಿಯವರ ಉತ್ಸವ ನಡೆಸಲಾಯಿತು.

ಈ ವೇಳೆ ದೇವಾಲಯ ಸಮಿತಿ ಕಾರ್ಯದರ್ಶಿ ತಿರುಮಲ ಆಚಾರ್, ದೇವರಾಜ್, ವೆಂಕಟೇಶ್ ಪ್ರಸಾದ್, ಡೈರಿ ಶ್ರೀಕಾಂತ್, ಜಯಂತ್, ಪೂರ್ಣೇಶ್, ಕನ್ನಡ ಪ್ರಮೋದ್, ಸಿ.ಎಸ್.ನಾಗಣ್ಣ ಬ್ಯಾಂಕ್ ವಿಜಯ್ ಮಹೇಶ್, ಎಚ್.ಸಿ. ಮಂಜುನಾಥ್, ಚಾಕಳ್ಳಿ ಕೃಷ್ಣ, ಕೆಂಡಣ್ಣ, ಚೆಲುವನಾಯಕ, ನಟರಾಜು, ಸುಧಾಕರ್, ಫಣೀಂದ್ರ, ಸಂತೋಷ್, ಪ್ರಶಾಂತ್, ಶ್ರೀನಿವಾಸ್, ಚಂದ್ರು, ರವಿ, ಜವರನಾಯಕ, ಪ್ರಕಾಶ್, ಅರ್ಚಕರಾದ ವಿನಯ್ ವಾದ್ಯರ್, ಶ್ರೀಧರ ಮೂರ್ತಿ, ಶ್ರೀನಿಧಿ ಸೇರಿದಂತೆ ಹಾಜರಿದ್ದರು.

ಬೈಲಕುಪ್ಪೆ: ಸಾಲಬಾಧೆಗೆ ವ್ಯಕ್ತಿ ಆತ್ಮಹತ್ಯೆ

ಬೈಲಕುಪ್ಪೆ, ಮೇ 7– ಸಾಲಬಾಧೆ ತಾಳಲಾರದೇ ವ್ಯಕ್ತಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೈಲಕುಪ್ಪೆ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಪಿರಿಯಾಪಟ್ಟಣ ತಾಲೂಕಿನ ದಿಂಡಿಗಾಡು ಗ್ರಾಮದ ನಿವಾಸಿ ಪರಮೇಶ್ (48) ಆತ್ಮಹತ್ಯೆ ಮಾಡಿಕೊಂಡವರು. ಈತ ಸಹಕಾರ ಸಂಘದಲ್ಲಿ 3 ಲಕ್ಷ, ಟ್ರಾಕ್ಟರ್ ಸಾಲ, ಖಾಸಗಿಯವರಿಂದ ಕೈಸಾಲ ಮಾಡಿದ್ದರು. ಸಾಲ ತೀರಿಸಲಾಗದೇ ಮನನೊಂದಿದ್ದ ಪರಮೇಶ್ ಬುಧವಾರ ಮುಂಜಾನೆ ತೋಟವೊಂದರ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಬೈಲುಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಎಸ್ಐ ರವಕುಮಾರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ: ಕ್ರಮಕ್ಕೆ ಆಗ್ರಹ



ತಾಲೂಕು ಮಟ್ಟದ ರೈತರ ಕುಂದುಕೊರತೆ ಸಭೆ ನಡೆಯಿತು.

ನಂಜನಗೂಡು, ಮೇ 7– ತಾಲೂಕಿನ ಹಲವು ಗ್ರಾಮಗಳ ಗೂಡಂಗಡಿಗಳಲ್ಲಿ ರಾಜರೋಷವಾಗಿ ಅಕ್ರಮ ಮದ್ಯ ಮಾರಾಟವಾಗುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಹಲವು ಬಾರಿ ತಾಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ರೈತ ಸಂಘದ ಮುಖಂಡ ಬೊಕ್ಕಳ್ಳಿ ನಂಜುಂಡಸ್ವಾಮಿ ಆರೋಪಿಸಿದರು.

ನಗರದ ಎಪಿಎಂಸಿ ಮಾರುಕಟ್ಟೆ ಸಭಾಂಗಣದಲ್ಲಿ ತಾಲೂಕು ಆಡಳಿತ ಬುಧವಾರ ನಡೆಸಿದ ರೈತರ ಕುಂದುಕೊರತೆ ಸಭೆಯಲ್ಲಿ ಮಾತನಾಡಿದ ಅವರು, ಅಕ್ರಮ ಮದ್ಯ ಮಾರಾಟ ತಡೆಯುವಂತೆ ದೂರು ಸಲ್ಲಿಸಿದ ನನ್ನ ಮೇಲೆ ಅಕ್ರಮ ಮದ್ಯ ಮಾರಾಟಗಾರರು ಹಲ್ಲೆ ನಡೆಸಿದ್ದಾರೆ. ಹೀಗಾದರೆ ಗ್ರಾಮಗಳಲ್ಲಿ ಶಾಂತಿ ನೆಲೆಸಲು ಹೇಗೆ ಸಾಧ್ಯ. ತಾಲೂಕು ಆಡಳಿತ 17 ತಿಂಗಳ ನಂತರ ಕಾಟಾಚಾರಕ್ಕೆ ರೈತರ ಕುಂದು ಕೊರತೆ ಸಭೆ ನಡೆಸುತ್ತೀದ್ದಿರಿ. ಇದರಿಂದ ರೈತರ ಸಮಸ್ಯೆಗಳಿಗೆ ಪರಿಹಾರ ದೊರಕುವುದಿಲ್ಲ ಎಂದರು.

ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಸೋಮಶೇಖರ್ ಮಾತನಾಡಿ, ಸರ್ಕಾರಿ ಕಚೇರಿಗಳಲ್ಲಿ ಕರ್ತವ್ಯದ ವೇಳೆ ಅಧಿಕಾರಿಗಳು ಲಭ್ಯರಿರುವುದಿಲ್ಲ. ವರ್ಷದ ಹಿಂದೆ ಜಮೀನು ಸರ್ವೆ ಮಾಡಿಸಲು ಮನವಿ ನೀಡಿದ್ದರೂ ಸರ್ವೆ ಕಾರ್ಯ ನಡೆಸಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಟಿ.ಟಿ. ಚುಚ್ಚು ಮದ್ದು ಲಭ್ಯವಿಲ್ಲ. ಹೊರಳವಾಡಿಯಲ್ಲಿ ಕುಡಿಯುವ ನೀರು, ವಿದ್ಯುತ್ ದೀಪದ ವ್ಯವಸ್ಥೆ ಮಾಡುವಂತೆ ಪಿಡಿಓಗೆ ಮನವಿ ಮಾಡಿದರೆ, ಬೆದರಿಕೆವೊಡ್ಡಿ ಸಾಗ ಹಾಕುತ್ತಾರೆ ಎಂದು ಆರೋಪಿಸಿದರು.

ತಾಲೂಕು ರೈತ ಸಂಘದ ಅಧ್ಯಕ್ಷ ಸತೀಶ್‌ರಾವ್ ಮಾತನಾಡಿ, ಜಲಜೀವನ್ ಮಿಷನ್ ಯೋಜನೆಯಲ್ಲಿ ಪ್ರತಿ ಗ್ರಾಮಕ್ಕೆ 1 ಕೋಟಿ ಅನುದಾನ ಬಂದಿದ್ದರೂ ಪ್ರಯೋಜನವಾಗುತ್ತಿಲ್ಲ. ಪೌತಿ ಖಾತೆ ಮಾಡಿಕೊಡುತ್ತಿಲ್ಲ. ಕಂದಾಯ ಇಲಾಖೆಯಲ್ಲಿ ರೈತರು ತಮ್ಮ ಜಮೀನಿನ ದಾಖಲೆ ಪಡೆಯಲು ಲಂಚ ನೀಡಬೇಕಾಗಿದೆ. ಮಧ್ಯವರ್ತಿಗಳಿಗೆ ದಾಖಲೆಗಳು ಸಲೀಸಾಗಿ ದೊರಕುತ್ತವೆ. ಕಂದಾಯ ಇಲಾಖೆಯಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ ಎಂದು ಆಪಾದಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್, ಲಂಚ ಕೇಳುವ ಸಿಬ್ಬಂದಿ ವಿರುದ್ಧ ಅಧಿಕೃತವಾಗಿ ದೂರು ನೀಡಿದರೆ ಕ್ರಮವಹಿಸಬಹುದು. ಕೆರೆ ಮತ್ತು ಸ್ಮಶಾನಗಳ ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸಲಾಗುವುದು. ತಾಲೂಕಿನಲ್ಲಿ ಸರ್ವೇಯರ್‌ಗಳ ಕೊರತೆ ಇದೆ. 600 ಸರ್ವೇ ಕಾರ್ಯ ನನೆಗುದಿಗೆ ಬಿದ್ದಿದೆ. ಪ್ರತಿ ಹೋಬಳಿಗೆ 2 ದಿನದಂತೆ ಸರ್ವೇಯರ್‌ಗಳು ಕೆಲಸ ಮಾಡುವಂತೆ ಸೂಚಿಸಲಾಗಿದೆ. ಹೆಚ್ಚುವರಿಯಾಗಿ 5 ಮಂದಿ ಸರ್ವೇಯರ್‌ಗಳನ್ನು ನೇಮಿಸಿ ಸರ್ವೇ ಕಾರ್ಯ ನಡೆಸಲಾಗುವುದು. ಕವಲಂದೆ ನಾಡ ಕಚೇರಿಯಲ್ಲಿ ಹೆಚ್ಚಿನ ಸ್ಥಳಾವಕಾಶವಿಲ್ಲ. ನಾಡ ಕಚೇರಿಗಾಗಿ ಜಾಗ ಗುರ್ತಿಸಲಾಗುತ್ತಿದೆ. ಬಿಳಿಗೆರೆ ನಾಡ ಕಚೇರಿ ನಿರ್ಮಾಣಕ್ಕಾಗಿ ಜಾಗ ಗುರ್ತಿಸಲಾಗಿದೆ. ರೈತರು ಹೇಳಿದ ಸಮಸ್ಯೆಗಳ ಬಗ್ಗೆ ಪರಿಶೀಲನೆ ನಡೆಸಿ, ಶೀಘ್ರ ಪರಿಹಾರ ನೀಡಲಾಗುವುದು ಎಂದರು.

ಸಭೆಯಲ್ಲಿ ತಾಪಂ ಇಓ ಜೆರಾಲ್ಡ್ ರಾಜೇಶ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೆ.ಎಸ್. ರವಿ, ಸಿಡಿಪಿಓಗಳಾದ ಭವ್ಯಶ್ರೀ, ಮಂಜುಳಾ, ತೋಟಗಾರಿಕಾ ಸಹಾಯಕ ನಿರ್ದೇಶಕ ಚಂದ್ರು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗ, ಟಿಹೆಚ್ಓ ಈಶ್ವರ್ ಕಾನಟ್ಕೆ, ಆರ್‌ಎಫ್‌ಓ ನಿತಿನ್ ಕುಮಾರ್, ಬಿಇಓ ಮಹೇಶ್ ಹಾಗೂ ರೈತ ಮುಖಂಡರು ಉಪಸ್ಥಿತರಿದ್ದರು.

ಮೆರವಣಿಗೆ



ಸರಗೂರು ತಾಲೂಕಿನ ಕೊತ್ತೇಗಾಲದಲ್ಲಿ ಶ್ರೀಗುಜ್ಜಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ಮೆರವಣಿಗೆ ನಡೆಯಿತು. ಈ ವೇಳೆ ಎಲ್ಲಾ ಸಮುದಾಯದ ಮುಖಂಡರು, ಭಕ್ತರು ಹಾಜರಿದ್ದರು.

ಗೌಡ್ರು ಪ್ರಕಾಶ್ ನಿಧನ



ಮೂಗೂರು, ಮೇ 7– ಬಿಜೆಪಿ ಹಿರಿಯ ಮುಖಂಡ, ರೈತಪರ ಹೋರಾಟಗಾರ ಗೌಡ್ರು ಪ್ರಕಾಶ್ (54) ಬುಧವಾರ ನಿಧನರಾದರು. ಮೃತರು ಪತ್ನಿ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪರಶಿವಮೂರ್ತಿ



ಹೆಚ್.ಡಿ.ಕೋಟೆ, ಮೇ 7– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ದಿ.ಸುಬ್ಬಣ್ಣನವರ ಅಳಿಯ ಪರಶಿವಮೂರ್ತಿ (75) ಬುಧವಾರ ಸಂಜೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರಿನ ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ಗುರುವಾರ ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ಅಂಬೇಡ್ಕರ್ ತತ್ವಾದರ್ಶ ಅಳವಡಿಸಿಕೊಳ್ಳಿ



ಕಾರ್ಯಕ್ರಮವನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ಹುಣಸೂರು, ಮೇ 7– ಅಂಬೇಡ್ಕರ್ ಶೋಷಿತರ ದನಿಯಾಗಿದ್ದು, ಅವರ ಪರಿಶ್ರಮದಿಂದ ಸೃಷ್ಟಿಯಾದ ಸಂವಿಧಾನದಡಿ ಇಂದು ದೇಶ ಭವ್ಯ ಭಾರತವಾಗಿ ಬೆಳಗುತ್ತಿದೆ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ತಾಲೂಕಿನ ಉಯಿಗೌಡನಹಳ್ಳಿ ಹೊಸೂರು ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಯುವಕರ ಸಂಘದಿಂದ ನಡೆದ ಅಂಬೇಡ್ಕರ್ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಜಯಂತಿಯನ್ನು ಭಾರತವಲ್ಲದೇ ವಿಶ್ವದ ಎಲ್ಲಾ ಕಡೆ ಆಚರಿಸಲಾಗುತ್ತಿದೆ. ಅಂತಹ ಮಹಾನ್ ಚೇತನದ ಜಯಂತಿ ಆಚರಿಸುವ ಮೂಲಕ ಅವರನ್ನು ಸ್ಮರಣೆ ಮಾಡುವ ವೇಳೆ ನಾವು ಅವರ ಗುಣಗಾನ ಮಾಡುವ ಬದಲು ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಸಮಾಜದ ಅಭಿವೃದ್ಧಿಗೆ ಶ್ರಮಿಸಿದರೇ ಅವರ ಜಯಂತಿಗೆ ಅರ್ಥ ಬರುತ್ತದೆ ಎಂದರು.

ಗ್ರಾಮದ ಯುವಕರು ಉನ್ನತ ವ್ಯಾಸಂಗ ಮಾಡಿ ಸಮಾಜದಲ್ಲಿ ಉನ್ನತ ಸ್ಥಾನ ಪಡೆಯುವುದರ ಜೊತೆಗೆ ಸಮಾಜದ ಮುಖ್ಯವಾಹಿನಿಗೆ ಬರಬೇಕು. ಸರ್ಕಾರದಿಂದ ಲಭ್ಯವಿರುವ ಸವಲತ್ತುಗಳನ್ನು ಬಳಸಿಕೊಂಡು ಸಮಾಜದಲ್ಲಿ ಬಲಿಷ್ಟರಾಗಬೇಕು ಎಂದರು.

ಇದೇ ವೇಳೆ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ವಿಜೇತ ಹರಿಹರ ಆನಂದಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಹುಣಸೂರು ಟಿಎಪಿಎಂಎಸ್ ಮಾಜಿ ಅಧ್ಯಕ್ಷ ಬಸವಲಿಂಗಯ್ಯ, ಅಕ್ರಮ ಸಕ್ರಮ ಸಮಿತಿ ಸದಸ್ಯ ಕುಮಾರ್, ರೋಟರಿ ಸಂಸ್ಥೆ ಅಧ್ಯಕ್ಷ ಪ್ರಸನ್ನ, ಶಿಕ್ಷಕರಾದ ಚಿಲ್ಕುಂದ ಮಹೇಶ್, ಮುಖಂಡರಾದ ಚಂದ್ರಶೇಖರ, ಸೋಮಯ್ಯ, ಮಹೇಶ, ಪುಟ್ಟ ಸ್ವಾಮಿ, ಸಂಘದ ಅಧ್ಯಕ್ಷ ಚಂದ್ರು ಸೇರಿ ದಂತೆ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರಿದ್ದರು.

ಮೇ 12, ಕೋಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಶಾಸಕ ಅನಿಲ್ ಪೂರ್ವಸಿದ್ಧತೆ ಪರಿಶೀಲಿಸಿದರು.

ಹೆಚ್.ಡಿ.ಕೋಟೆ, ಮೇ 7– ಪಟ್ಟಣದ ಅಂಬೇಡ್ಕರ್ ಭವನದ ಬಳಿ ನೂತನವಾಗಿ ನಿರ್ಮಿಸಿರುವ ಅಂಬೇಡ್ಕರ್ ಪುತ್ಥಳಿ ಅನಾವರಣ, ವಿವಿಧ ಇಲಾಖೆಯ 112 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲು ಮೇ 12 ರಂದು ಸಿಎಂ ಸಿದ್ದರಾಮಯ್ಯ ಆಗಮಿಸು ತ್ತಿರುವ ಹಿನ್ನೆಲೆಯಲ್ಲಿ ಪಟ್ಟಣದ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಕೈಗೊಂಡಿರುವ ಕಾರ್ಯಕ್ರಮದ ಪೂರ್ವ ಸಿದ್ಧತೆಯನ್ನು ಶಾಸಕ ಅನಿಲ್ ಪರಿಶೀಲಿಸಿದರು.

ನಂತರ ಮಾತನಾಡಿದ ಶಾಸಕರು ಇದೇ ತಿಂಗಳ 12 ರಂದು ಕಾರ್ಯಕ್ರಮ ಪಟ್ಟಣದ ಪದವಿಪೂರ್ವ ಕಾಲೇಜು ಮೈದಾನದಲ್ಲಿ ನಡೆಯಲಿದ್ದು, ಮುಖ್ಯಮಂತ್ರಿಗಳು ಅಂಬೇಡ್ಕರ್ ಜಯಂತಿ, ಪ್ರತಿಮೆ ಅನಾವರಣ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಯಶಸ್ವಿಗಾಗಿ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಸಿಪಿಐ ಗಂಗಾಧರ್, ಜಿಪಂ ಮಾಜಿ ಸದಸ್ಯ ರವಿ, ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್, ಸತೀಶ್‌ಗೌಡ, ಮೈಮುಲ್ ನಿರ್ದೇಶಕ ಈರೇಗೌಡ, ಪರಶಿವ ಮೂರ್ತಿ, ಭಾಸ್ಕರ್, ಮರಿದೇವಯ್ಯ, ಪುಟ್ಟಸ್ವಾಮಿ, ಶಂಕರ್ ಸೇರಿದಂತೆ ಇತರರಿದ್ದರು.

ಬೆಟ್ಟದಪುರದಲ್ಲಿ ವಿಜೃಂಭಣೆಯ ಬಸವ ಜಯಂತಿ



ಬೆಟ್ಟದಪುರದಲ್ಲಿ ವೀರಶೈವ ಲಿಂಗಾಯತ ಸಮಾಜದಿಂದ ಬಸವ ಜಯಂತಿ ಆಚರಿಸಲಾಯಿತು. ಪ್ರಧಾನ ಅರ್ಚಕ ಸುಬ್ಬಣ್ಣ ವಿಶೇಷ ಪೂಜೆ ನೆರವೇರಿಸಿದರು. ಸಮಾಜದ ಗೌರವಾಧ್ಯಕ್ಷ ನಿವೃತ್ತ ಶಿಕ್ಷಕ ಬಿ.ಜಿ.ಜಗದೀಶ್, ಅಧ್ಯಕ್ಷ ಶಿವದೇವ್, ಖಜಾಂಚಿ ರಾಜೇಂದ್ರ, ಕಾರ್ಯದರ್ಶಿ ಮಹದೇವಪ್ಪ, ಶಿವು, ನಾಗರಾಜಶೆಟ್ಟಿ, ನಟರಾಜ್, ಗ್ರಾಪಂ ಸದಸ್ಯ ರಜನಿಕಾಂತ್, ವಿಶ್ವೇಶ್ವರಯ್ಯ, ಬಿ.ಎಂ.ಜಗದೀಶ್, ಶಿವಕುಮಾರಸ್ವಾಮಿ ಬಳಗದ ಅಧ್ಯಕ್ಷ ಕೂರ್ಗಲ್ ಶಿವಕುಮಾರಸ್ವಾಮಿ, ಪಟೇಲ್ ನಟೇಶ್ ಇತರರಿದ್ದರು.

ಭೈರಾಪುರದಲ್ಲಿ ಪ.ಜಾತಿ ಜನಗಣತಿಗೆ ಚಾಲನೆ



ಜಾತಿ ಗಣತಿ ಸಮೀಕ್ಷೆ ಕಾರ್ಯಕ್ಕೆ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಚಾಲನೆ ನೀಡಿದರು.

> "ಆಧಾರ್ ಕಾರ್ಡ್‌ನಲ್ಲಿರುವ ಕುಟುಂಬದ ಸದಸ್ಯರನ್ನು ಸರ್ವೇಯಲ್ಲಿ ಸೇರ್ಪಡೆ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಆಧಾರ್ ಇಲ್ಲದ ಮಕ್ಕಳನ್ನು ಕೂಡ ಸೇರ್ಪಡೆ ಮಾಡಲು ಆ್ಯಪ್‌ನಲ್ಲಿ ಅವಕಾಶ ಇದೆ. ಅದರ ಮಾಹಿತಿ ಹುಡುಕಿ ಸೇರ್ಪಡೆ ಮಾಡಿದ್ದೇವೆ. ಈ ಸಮಸ್ಯೆ ಬೇರೆಲ್ಲೂ ಕಂಡು ಬಂದಿಲ್ಲ. ಮರಯ್ಯನವರು ಗಮನಕ್ಕೆ ತಂದ ಹಿನ್ನೆಲೆಯಲ್ಲಿ ತರಬೇತಿ ಪಡೆದ ಶಿಕ್ಷಕ ಸಿಬ್ಬಂದಿ ಸಹಕಾರದೊಂದಿಗೆ ಆಧಾರ್ ಇಲ್ಲದ ಮಕ್ಕಳನ್ನು ಸರ್ವೇಗೆ ಸೇರಿಸುವ ಮಾಹಿತಿ ಹುಡುಕಿ ತೆಗೆದಿದ್ದೇವೆ. ಈ ಮಾಹಿತಿಯನ್ನು ತಾಲೂಕಿನೆಲ್ಲೆಡೆ ಹಂಚಿಕೊಳ್ಳುತ್ತೇವೆ. ಯಾವುದೇ ಗ್ರಾಮದಲ್ಲೂ ಸರ್ವೇಯಿಂದ ಯಾವುದೇ ಕುಟುಂಬವೂ ಹೊರಗುಳಿಯಬಾರದು. ನಾಗಮೋಹನ್ ದಾಸ್ ವರದಿಯನ್ವಯ ನ್ಯಾಯಯುತ, ಪ್ರಾಮಾಣಿಕವಾಗಿ ನಿಖರವಾಗಿ ದಾಖಲೆಗಳನ್ನು ನಮೂದಿಸಲಾಗುತ್ತದೆ.
> – ಟಿ.ಜೆ.ಸುರೇಶಾಚಾರ್, ತಹಸೀಲ್ದಾರ್.

ತಿ.ನರಸೀಪುರ, ಮೇ 7– ಸರ್ಕಾರ ರಚಿಸಿರುವ ನ್ಯಾಯಮೂರ್ತಿ ನಾಗಮೋಹನ್ ದಾಸ್ ಏಕಸದಸ್ಯ ಆಯೋಗದ ಶಿಫಾರಸ್ಸಿನ ಮೇರೆಗೆ ಪ.ಜಾತಿ ಜನಗಣತಿ ಕಾರ್ಯ ಕ್ರಮಕ್ಕೆ ತಾಲೂಕಿನ ಭೈರಾಪುರದಲ್ಲಿ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಚಾಲನೆ ನೀಡಿದರು.

ಗ್ರಾಮದ ತಾಪಂ ಮಾಜಿ ಸದಸ್ಯ ಬಿ.ಮರಯ್ಯ ನಿವಾಸದಲ್ಲಿ ಮೊದಲಿಗೆ ಕುಟುಂಬಸ್ಥರ ದತ್ತಾಂಶ ಸಂಗ್ರಹಿಸುವ ಮೂಲಕ ಪ.ಜಾತಿ ಜಾತಿಗಣತಿ ಸಮೀಕ್ಷೆಗೆ ಚಾಲನೆ ದೊರಕಿತು.

ನಿನ್ನೆಯಷ್ಟೆ ಬಿ.ಮರಯ್ಯ ಒಳ ಮೀಸಲಾತಿ ಸಂಬಂಧ ನಡೆಯುತ್ತಿರುವ ಜನಗಣತಿ ಕಾರ್ಯವನ್ನು ತಾಲೂಕು ಆಡಳಿತ ಬೇಕೆಂತಲೇ ವಿಳಂಬ ಮಾಡಿ ಮಾದಿಗ ಜನಾಂಗಕ್ಕೆ ಅನ್ಯಾಯವೆಸಗಲು ಮುಂದಾಗಿದೆ ಎಂದು ಆರೋಪಿಸಿದ್ದ ಹಿನ್ನೆಲೆಯಲ್ಲಿ ಬುಧವಾರ ಅವರ ಮನೆಯಲ್ಲಿಯೇ ತರಬೇತಿ ಪಡೆದ ಸಮೀಕ್ಷೆ ಸಿಬ್ಬಂದಿ ಮೊದಲ ದತ್ತಾಂಶ ಸಂಗ್ರಹ ಮಾಡಿ ಮರಯ್ಯ ಅವರಿಂದ ಸಹಿ ಪಡೆದುಕೊಂಡರು.

ಸೋಮವಾರದಿಂದಲೇ ಜಾತಿ ಗಣತಿ ಸಮೀಕ್ಷೆ ಆರಂಭಗೊಳ್ಳಬೇಕಿತ್ತಾದರೂ, ಗಣತಿ ಕಾರ್ಯಕ್ಕೆ ಬೇಕಾದ ಪರಿಕರಗಳು ಸರಬರಾಜಾಗದ ಹಿನ್ನೆಲೆಯಲ್ಲಿ ವಿಳಂಬವಾಗಿತ್ತು. ಇಂದು ಬೆಳಗ್ಗೆ ಪುರಸಭೆ ವ್ಯಾಪ್ತಿಯ ಭೈರಾಪುರ ಗ್ರಾಮಕ್ಕೆ ಬಂದ ಜಾತಿಗಣತಿ ಸಂಗ್ರಹಿಸುವ ಸಿಬ್ಬಂದಿ ಮೊದಲಿಗೆ ಮರಯ್ಯ ನವರ ಮನೆಗೆ ತೆರಳಿ ದತ್ತಾಂಶ ಸಂಗ್ರಹಕ್ಕೆ ಮುಂದಾಯಿತು. ಆದರೆ ಮನೆಯಲ್ಲಿ ಇರುವ 0–5 ವರ್ಷದ ಮಕ್ಕಳ ಹೆಸರನ್ನೂ ಕೂಡ ಸಮೀಕ್ಷೆಗೆ ಸೇರ್ಪಡೆ ಮಾಡಬೇಕೆಂದು ಮರಯ್ಯ ಒತ್ತಾಯಿಸಿದರು.

ಆದರೆ ಪುಟ್ಟ ಮಕ್ಕಳನ್ನು ದತ್ತಾಂಶಕ್ಕೆ ತೆಗೆದುಕೊಳ್ಳಲು ಅವಕಾಶವಿಲ್ಲ ಎಂದು ಅವರಿಗೆ ಮನವರಿಕೆ ಮಾಡಿಕೊಡಲು ಸಿಬ್ಬಂದಿ ಮುಂದಾಯಿತಾದರೂ ಮರಯ್ಯ ಹಿಡಿದ ಪಟ್ಟನ್ನು ಸಡಿಲಿಸಲಿಲ್ಲ. ಮಕ್ಕಳನ್ನು ಗಣತಿಯಲ್ಲಿ ಸೇರ್ಪಡೆ ಮಾಡಿಕೊಳ್ಳದ ಹೊರತು ದತ್ತಾಂಶ ಸಂಗ್ರಹಕ್ಕೆ ಗ್ರಾಮದಲ್ಲಿ ಅವಕಾಶ ಮಾಡಿಕೊಡುವುದಿಲ್ಲವೆಂದು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಸಿಬ್ಬಂದಿಗಳು ತಹಸೀಲ್ದಾರ್‌ಗೆ ವಿಷಯ ಮುಟ್ಟಿಸಿದರು. ಈ ವೇಳೆ ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಹಾಗೂ ಬಿಇಓ ಶಿವಮೂರ್ತಿ ಬಿ.ಮರಯ್ಯನವರ ಮನವೊಲಿಕೆಗೆ ಪ್ರಯತ್ನಿಸಿದರಾದರೂ ಅದು ಸಾಧ್ಯವಾಗಲಿಲ್ಲ. ಮಕ್ಕಳನ್ನು ಗಣತಿಯಲ್ಲಿ ನಮೂದು ಮಾಡಬೇಕು. ಆ ಮೂಲಕ ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಿಸಿದರು. ಈ ವೇಳೆ ತಹಸೀಲ್ದಾರ್ ಅವರು ಮೇಲ್ಮಟ್ಟದ ಅಧಿಕಾರಿಗಳಿಗೆ ಮಾಹಿತಿ ನೀಡಿ 5 ವರ್ಷದೊಳಗಿನ ಮಕ್ಕಳನ್ನೂ ಜಾತಿ ಗಣತಿಯಲ್ಲಿ ಸೇರ್ಪಡೆ ಮಾಡಲು ಅವಕಾಶ ಮಾಡಿಕೊಟ್ಟ ಹಿನ್ನೆಲೆಯಲ್ಲಿ ಜಾತಿ ಗಣತಿ ಕಾರ್ಯ ಆರಂಭವಾಯಿತು.

ಬಿ.ಮರಯ್ಯ ಮಾತನಾಡಿ, ಜಾತಿ ಜನಗಣತಿ ವೇಳೆ ಮಕ್ಕಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂಬ ಒತ್ತಾಯ ನನ್ನದಾಗಿತ್ತು. ಆದರೆ ಸಣ್ಣ ಮಕ್ಕಳನ್ನು ಜಾತಿ ಗಣತಿಗೆ ಪರಿಗಣಿಸಬಾರದೆಂದು ಕಲಂನಲ್ಲಿ ನಮೂದಾಗಿದೆ ಎಂಬ ಮಾಹಿತಿ ದೊರಕಿತ್ತು. ತಹಸೀಲ್ದಾರ್ ನಮ್ಮ ಮನವಿಗೆ ಸ್ಪಂದಿಸಿ ನಮ್ಮ ಜನಾಂಗಕ್ಕೆ ಅನ್ಯಾಯವಾಗಬಾರದೆಂದು ಸಮಸ್ಯೆ ಸರಿಪಡಿಸಿ ಮಕ್ಕಳನ್ನು ಗಣತಿಯಲ್ಲಿ ಸೇರ್ಪಡೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಹಾಗಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ರಾಜ್ಯದಲ್ಲಿ ಹಮ್ಮಿಕೊಂಡಿರುವ ಜಾತಿ ಜನಗಣತಿಯಲ್ಲಿ ಮಾದಿಗರು, ಹೊಲೆಯರು, ಒಕ್ಕಲಿಗರು, ಕುರುಬ, ಕುಂಬಾರ ಸಮಾಜ ಸೇರಿದಂತೆ ಯಾವುದೇ ಸಮಾಜಕ್ಕೂ ಅನ್ಯಾಯವಾಗುವುದು ಬೇಡ. ಜಾತಿ ಜನಗಣತಿಯಲ್ಲಿ ನಿಖರ ಮಾಹಿತಿಯನ್ನು ಸರ್ಕಾರಕ್ಕೆ ನೀಡಬೇಕು ಎಂದರು.

ತಹಸೀಲ್ದಾರ್ ಸೇರಿದಂತೆ ಎಂಎಲ್‌ಸಿ ಡಾ.ತಿಮ್ಮಯ್ಯ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಲು ಸಹಕಾರ ನೀಡಿದ್ದಾರೆ. ಪ.ಜಾತಿ ಜಾತಿ ಗಣತಿ ಕಾರ್ಯ ತಾಲೂಕಿನಾದ್ಯಂತ ಮುಕ್ತವಾಗಿ, ನ್ಯಾಯಯುತವಾಗಿ ನಡೆಯಬೇಕು ಎಂದರು.

ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ, ಬಿಆರ್‌ಸಿ ನಾಗೇಶ್, ಟಿಓಟಿ ನಾಗರಾಜ್, ಮಾಸ್ಟರ್ ಟ್ರೈನರ್‌ಗಳಾದ ಎಸ್.ನಾಗರಾಜು ಪಿ.ಮುರಳೀಧರ್, ಗಣತಿದಾರರಾದ ಶಿಕ್ಷಕಿ ಲಕ್ಷ್ಮಿ, ಗೀತಾ ಮತ್ತು ಮೇಲ್ವಿಚಾರಕರು ಹಾಜರಿದ್ದರು.

ಮೈಸೂರು ಮಿತ್ರ

ಐಪಿಎಲ್ ಹಂಗಾಮ

ಕೋಲ್ಕತ್ತಾ ವಿರುದ್ಧ ಚೆನ್ನೈ ಸೂಪರ್ ಕಿಂಗ್ಸ್‌ಗೆ ಜಯ



ಕೋಲ್ಕತ್ತಾ, ಮೇ 7– ಇಂಡಿಯನ್ ಪ್ರಿಮಿಯರ್ ಲೀಗ್‌ನ 57ನೇ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಚೆನ್ನೈ ಸೂಪರ್ ಕಿಂಗ್ಸ್ 2 ವಿಕೆಟ್‌ಗಳ ಗೆಲುವು ಸಾಧಿಸಿದೆ.

ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 179 ರನ್ ಗಳಿಸಿತು. 180 ರನ್ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈ 19.4 ಓವರ್‌ಗಳಲ್ಲಿ 183 ರನ್ ಗಳಿಸಿ ಜಯ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಆಯೂಷ್ ಮ್ಹಾತ್ರೆ ಮತ್ತು ಡೆವೊನ್ ಕಾನ್ವೇ ಶೂನ್ಯಕ್ಕೆ ಔಟಾದರು. ಆದರೆ ಈ ವೇಳೆ ಊರ್ವಿಲ್ ಪಟೇಲ್ ಸ್ಫೋಟಕ ಬ್ಯಾಟಿಂಗ್ ಮಾಡಿ ತಂಡಕ್ಕೆ ಚೇತರಿಕೆ ತಂದುಕೊಟ್ಟರು. ಪಟೇಲ್ 11 ಎಸೆತಗಳಲ್ಲಿ 4 ಸಿಕ್ಸರ್ 1 ಬೌಂಡರಿ ಸೇರಿದಂತೆ 31 ರನ್ ಸಿಡಿಸಿದರು. ಡೆವಾಲ್ಡ್ ಬ್ರೆವಿಸ್ ಸ್ಫೋಟಕ ಬ್ಯಾಟಿಂಗ್ ಮೂಲಕ 25 ಎಸೆತಗಳಲ್ಲಿ ತಲಾ 4 ಸಿಕ್ಸರ್, ಬೌಂಡರಿ ಒಳಗೊಂಡ 52 ರನ್ ಬಾರಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಶಿವಂ ದುಬೆ ಸಹ ಸ್ಫೋಟಕ ಬ್ಯಾಟಿಂಗ್ ಮಾಡಿ 45 ರನ್ ಬಾರಿಸಿ ಔಟಾದರು. ರವೀಂದ್ರ ಜಡೇಜಾ 19, ಎಂಎಸ್ ಧೋನಿ ಅಜೇಯ 17 ರನ್ ಗಳಿಸಿದ್ದು, ಅಂತಿಮವಾಗಿ ಅನ್ಶುಲ್ ಕಾಂಬೋಜ್ ಬೌಂಡರಿ ಬಾರಿಸುವ ಮೂಲಕ ಇನ್ನೂ 2 ಎಸೆತ ಬಾಕಿ ಇರುವಂತೆ ತಂಡಕ್ಕೆ ಗೆಲುವು ತಂದುಕೊಟ್ಟರು. ಕೆಕೆಆರ್ ಪರ ವೈಭವ್ ಅರೋರ 3, ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ ತಲಾ 2, ಮೊಯಿಲ್ ಅಲಿ 1 ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ಪರ ರಹಮಾನಲ್ಲಾ ಗುರ್ಬಾಜ್ 11, ಸುನೀಲ್ ನಾರಾಯಣ್ 26 ಮತ್ತು ನಾಯಕ ಅಜಿಂಕ್ಯಾ ರಹಾನೆ 48 ರನ್ ಗಳಿಸಿದರು. ರಘುವಂಶಿ ಕೇವಲ 1 ರನ್ ಗಳಿಸಿ ಔಟಾದರು. ನೂರ್ ಅಹ್ಮದ್ ಎಸೆತದಲ್ಲಿ ನಾರಾಯಣ್ ಅವರನ್ನು ನಾಯಕ ಎಂ.ಎಸ್. ಧೋನಿ ಸ್ಟಂಪ್ ಔಟ್ ಮಾಡಿದರು. ರಘುವಂಶಿ ಅವರನ್ನು ಧೋನಿ ಕ್ಯಾಚ್ ಮೂಲಕ ಔಟ್ ಮಾಡಿದರು. ಮನೀಶ್ ಪಾಂಡೆ 28 ಎಸೆತಗಳಲ್ಲಿ ಅಜೇಯ 36 ರನ್ ಗಳಿಸಿದರೆ, ಆಂಡ್ರೆ ರಸೆಲ್ 21 ಎಸೆತಗಳಲ್ಲಿ 38 ರನ್ ಗಳಿಸಿದರು. ಸಿಎಸ್‌ಕೆ ಪರ ನೂರ್ ಅಹ್ಮದ್ 4, ಅನ್ಶುಲ್ ಕಾಂಬೋಜ್, ರವೀಂದ್ರ ತಲಾ ಒಂದೊಂದು ವಿಕೆಟ್ ಪಡೆದರು. ನೂರ್ ಅಹ್ಮದ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	11	8	3	0	16
ಬೆಂಗಳೂರು	11	8	3	0	16
ಪಂಜಾಬ್	11	7	3	1	15
ಮುಂಬೈ	12	7	5	0	14
ಡೆಲ್ಲಿ	11	6	4	1	13
ಕೋಲ್ಕತ್ತಾ	12	5	6	1	11
ಲಕ್ನೋ	11	5	6	0	10
ಹೈದರಾಬಾದ್	11	3	7	1	7
ರಾಜಸ್ಥಾನ್	12	3	9	0	6
ಚೆನ್ನೈ	12	3	9	0	6

ಇಂದಿನ ಪಂದ್ಯ

ಪಂಜಾಬ್ ಕಿಂಗ್ಸ್
V/S
ಡೆಲ್ಲಿ ಕ್ಯಾಪಿಟಲ್ಸ್

ಸಮಯ: ಸಂಜೆ 7.30

ಸ್ಥಳ : ಹಿಮಾಚಲ ಪ್ರದೇಶ್ ಕ್ರೀಡಾಂಗಣ, ಧರ್ಮಶಾಲ

ನಿರುದ್ಯೋಗಿ ಪದವೀಧರರು ಭವಿಷ್ಯ ರೂಪಿಸಿಕೊಳ್ಳಲು ‘ಯುವನಿಧಿ’ ಯೋಜನೆ ಸಹಕಾರಿ

ಡಾ. ಪುಷ್ಪಾ ಅಮರನಾಥ್ ಅಭಿಮತ

ಮೈಸೂರು, ಮೇ 7(ಎಂಟಿವೈ)– ಪದವೀಧರ ನಿರುದ್ಯೋಗಿ ಯುವಕ–ಯುವತಿಯರಿಗೆ ದಾರಿದೀಪದಂತಿರುವ ಯುವನಿಧಿ ಯೋಜನೆಯು ಭವಿಷ್ಯವನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿದೆ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪಿ.ಜಿ.ಸೆಮಿನಾರ್ ಹಾಲ್‌ನಲ್ಲಿ ಬುಧವಾರ ಆಯೋಜಿಸಿದ್ದ ‘ಯುವನಿಧಿ’ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಯುವನಿಧಿ ಯೋಜನೆ, ಗೃಹಲಕ್ಷ್ಮಿ ಹಾಗೂ ಶಕ್ತಿ ಯೋಜನೆ ದೊಡ್ಡ ಬಲಿಷ್ಠವಾದ ಯೋಜನೆಗಳಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳು ಹೆಣ್ಣು ಮಕ್ಕಳ ಜೀವನದಲ್ಲಿ ಕ್ರಾಂತಿಕಾರಿ ಯೋಜನೆಗಳಾಗಿ ಮಾರ್ಪಟ್ಟಿದೆ. ಹೆಣ್ಣು ಮಕ್ಕಳು ಯಾವುದಕ್ಕೂ ಸೀಮಿತವಾಗದೇ, ಎಲ್ಲವನ್ನೂ ಎದುರಿಸುವಂತಹ ಶಕ್ತಿ ಹೆಣ್ಣು ಮಕ್ಕಳಲ್ಲಿರುವುದರಿಂದ ಇನ್ನಷ್ಟು ಶಕ್ತಿ ತುಂಬಲು ಈ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದರು.

ನಿರುದ್ಯೋಗ ಸಮಸ್ಯೆ ದೊಡ್ಡ ಪಿಡುಗಾಗಿದೆ. ಬೇರೆ ಎಲ್ಲಾ ಸಮಸ್ಯೆಗಳನ್ನು ಎದುರಿಸಿ ಜೀವನವನ್ನು ನಡೆಸಬಹುದು. ಆದರೆ, ಉದ್ಯೋಗ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ವಿದ್ಯಾರ್ಹತೆಗೆ ಅನುಗುಣವಾಗಿ ಅರ್ಹ ಉದ್ಯೋಗ ಸಿಗದೇ ನಿರುದ್ಯೋಗಿಗಳಾಗುವಂತಾಗಿದೆ. ಆದ್ದರಿಂದ ರಾಜ್ಯ ಸರ್ಕಾರದ ಯುವನಿಧಿ ಯೋಜನೆಯ ಸೌಲಭ್ಯ ಪಡೆದುಕೊಳ್ಳಲು ಅರ್ಹರು ಹೆಸರು ನೋಂದಣಿ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ರಾಜ್ಯ ಸರ್ಕಾರ ಕೌಶಲ ನಿರುದ್ಯೋಗ ಸಮಸ್ಯೆ ಹೋಗಲಾಡಿಸುವ ನಿಟ್ಟಿನಲ್ಲಿ ನಿರುದ್ಯೋಗಿಗಳಿಗೆ ಕೌಶಲಾಭಿವೃದ್ಧಿ ತರಬೇತಿ ನೀಡಲು ಮುಂದಾಗಿದೆ. 40 ಬಗೆಯ ಕೌಶಲ ತರಬೇತಿ ನೀಡಲಾಗುತ್ತಿದೆ. ಇದರ ಉಪಯೋಗವನ್ನು ಪಡೆದುಕೊಳ್ಳಬೇಕು. ಏನೇ ಕಷ್ಟ ಬಂದರೂ ಧೈರ್ಯದಿಂದ ಎದುರಿಸುತ್ತೇನೆ ಎಂಬ ಆತ್ಮಸ್ಥೈರ್ಯ ಬೆಳೆಸಿಕೊಳ್ಳಬೇಕು ಎಂದರು.

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರಾದ ಡಿ.ಎಂ. ರಾಣಿ ಮಾತನಾಡಿ, ಯುವನಿಧಿ ಯೋಜನೆಯಿಂದ ಯಾರು ವಂಚಿತರಾಗಬಾರದು. ಪದವಿ ವಿದ್ಯಾರ್ಥಿಗಳು ಈ ಯೋಜನೆಯ ಬಗ್ಗೆ ತಿಳಿದುಕೊಂಡು, ಬೇರೆಯವರಿಗೂ ಮಾಹಿತಿ ನೀಡಬೇಕು. ಅದಕ್ಕಾಗಿ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಾವು ಸ್ಪರ್ಧಾತ್ಮಕ ಜಗತ್ತಿನಲ್ಲಿರುವುದರಿಂದ ಪ್ರತಿಯೊಬ್ಬರು ಕೆಲಸ ಪಡೆದುಕೊಳ್ಳುವುದಕ್ಕೆ ಕಷ್ಟಪಡುವಂತಾಗಿದೆ. ಆದ್ದರಿಂದ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಉಪಯೋಗವಾಗಲಿ ಎಂದು ಹಾಗೂ ವಿದ್ಯಾರ್ಥಿಗಳು ತಮ್ಮ ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳುವ ಉದ್ದೇಶದಿಂದ ರಾಜ್ಯ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ. ಅರ್ಹರು ಸೇವಾ ಸಿಂಧು ಪೋರ್ಟಲ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಅರ್ಜಿ ಸಲ್ಲಿಸಿದ ನಂತರ ಪ್ರತಿ 3 ತಿಂಗಳಿಗೊಮ್ಮೆ 1ರಿಂದ 25ನೇ ತಾರೀಕಿನೊಳಗೆ ಸ್ವಯಂ ಘೋಷಣೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಯುವನಿಧಿ ಹಣ ಬರುವುದಿಲ್ಲ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನಾ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅರುಣ್ ಕುಮಾರ್, ಜಿಲ್ಲಾ ಗ್ಯಾರಂಟಿ ಯೋಜನಾ ಪ್ರಾಧಿಕಾರದ ಉಪಾಧ್ಯಕ್ಷರಾದ ಪ್ರೊ.ಶಿವಕುಮಾರ್, ಹುಣಸೂರು ಬಸವಣ್ಣ, ಸಾ.ಮಾ. ಯೋಗೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಉಪ ಮೇಯರ್ ಪುಷ್ಪವಲ್ಲಿ, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಐ.ಕ್ಯೂ.ಎ.ಸಿಯ ಸಂಯೋಜಕರಾದ ಡಾ.ಪ್ರಕಾಶ್.ಎನ್, ಪ್ಲೇಸ್ಮೆಂಟ್ ವಿಭಾಗದ ಸಂಚಾಲಕ ಡಾ.ಕೃಷ್ಣ ರಾಜೇಂದ್ರ ಭರತ್, ಡಾ.ನರಸಿಂಹರಾಜು ಎನ್, ಸೌರಭ್. ಕೆ ಸೇರಿದಂತೆ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.



ಮೈಸೂರಿನ ಮಹಾರಾಣಿ ಕಲಾ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ‘ಯುವನಿಧಿ’ ಅರಿವು ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ವಿದ್ಯಾರ್ಥಿನಿಯರೊಂದಿಗೆ ಯುವನಿಧಿ ಯೋಜನೆಯ ಪೋಸ್ಟರ್ ಪ್ರದರ್ಶಿಸಿದರು.

ಅಪರಿಚಿತ ಶವ ಪತ್ತೆ

ಮೈಸೂರು, ಮೇ 7– ಏ.26 ರಂದು ಮೈಸೂರು ರೈಲು ನಿಲ್ದಾಣದ ವೇದಿಕೆ ನಂ.3 ರಲ್ಲಿ ಮಲಗಿದ್ದವನನ್ನು ಚಿಕಿತ್ಸೆಗೆ ಮೈಸೂರಿನ ಕೆಆರ್ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಮೇ 3 ರಂದು ಮೃತಪಟ್ಟಿದ್ದು, ಮೃತದೇಹವು ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಾಗಾರದಲ್ಲಿದೆ. ಸುಮಾರು 60–65 ವರ್ಷ ವಯಸ್ಸಾಗಿದ್ದು, ಎತ್ತರ–5.2 ಅಡಿ ಎತ್ತರ, ಗೋಧಿ ಮೈಬಣ್ಣ, ಬಡಕಲು ಶರೀರ, ಕೋಲು ಮುಖ, 2 ಇಂಚು ಕಪ್ಪು ಕೂದಲು, 1/2 ಇಂಚು ಬಿಳಿ ಕೂದಲು, 1/2 ಇಂಚು ಬಿಳಿ ಗಡ್ಡಮೀಸೆ ಬಿಟ್ಟಿರುತ್ತಾರೆ. ಮೃತನ ಬಗ್ಗೆ ಮಾಹಿತಿ ಕಂಡುಬಂದಲ್ಲಿ ದೂ.ಸಂ: 0821–2516579 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೇ 9, 10ರಂದು ‘ಮೈಸಿರಿ ಸಮಾಗಮ 2025’ ಅಂತರ ಕಾಲೇಜು ವಿವಿಧ ಸಂಗೀತ ಸ್ಪರ್ಧೆಗಳು

ಮೈಸೂರು, ಮೇ 7(ಎಂಟಿವೈ)– ಮೈಸೂರಿನ ತಿ.ನರಸೀಪುರ ರಸ್ತೆ ಚಿಕ್ಕಹಳ್ಳಿಯಲ್ಲಿರುವ ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಮೇ 9 ಮತ್ತು 10ರಂದು ಮೈಸಿರಿ ಸಮಾಗಮ 2025 ವಾರ್ಷಿಕೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಧ್ಯಾಪಕ ಡಾ.ಜಯರಾಮ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾರ್ಷಿಕೋತ್ಸವದಲ್ಲಿ ಅಂತರ ಕಾಲೇಜು ಫ್ಯಾಷನ್ ಶೋ, ಸ್ಯಾಂಡಲ್‌ವುಡ್ ನೈಟ್ ಹಾಗೂ ಡಿಜೆ ನೈಟ್ ಮುಖ್ಯ ಆಕರ್ಷಣೆಯ ಕಾರ್ಯಕ್ರಮಗಳಾಗಿದ್ದು, ಇವುಗಳಲ್ಲಿ ಮೈಸೂರು ಭಾಗದ ವಿವಿಧ ಎಂಜಿನಿಯರಿಂಗ್ ಮತ್ತು ಪದವಿ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಮೇ 9ರಂದು ಬೆಳಗ್ಗೆ 10.30ಕ್ಕೆ 5 ರೂ. ಡಾಕ್ಟರ್ ಎಂದೇ ಪ್ರಸಿದ್ಧರಾಗಿರುವ ಮಂಡ್ಯದ ಡಾ.ಶಂಕರೇಗೌಡರು ಮೈಸಿರಿ ಸಮಾಗಮ 2025 ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮೇ 9ರಂದು ಸಂಜೆ 5.30ರಿಂದ ಅಂತರ ಕಾಲೇಜು ನೃತ್ಯ ಸ್ಪರ್ಧೆಗಳು ವಿವಿಧ ವಿಭಾಗಗಳಲ್ಲಿ ನಡೆಯಲಿವೆ. ಹಾಗೆಯೇ ಮೇ 9ಮತ್ತು 10ರಂದು ಸಂಜೆ 6ರಿಂದ ಅಂತರ ಕಾಲೇಜು ಫ್ಯಾಷನ್ ಶೋ ಸ್ಪರ್ಧೆಗಳು ಎರಡು ವಿಭಾಗಗಳಲ್ಲಿ ನಡೆಯಲಿದೆ. ಸ್ಪರ್ಧಾ ವಿಜೇತರಿಗೆ ಆಕರ್ಷಕ ಮೆಮೆಂಟೋಗಳನ್ನು ನೀಡಿ ಪುರಸ್ಕರಿಸಲಾಗುವುದು. ಆಸಕ್ತರು ದೂರವಾಣಿ 7353330769, 9972963781 ಅನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಸಿಬ್ಬಂದಿಗಳಾದ ಪ್ರೊ.ಜಿ.ಪ್ರೀತಿ, ಜಶ್ವಂತ್, ವ್ಯವಸ್ಥಾಪಕ ಶ್ರೀಕಂಠಮೂರ್ತಿ ಇದ್ದರು.



ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಮೈಸಿರಿ ಸಮಾಗಮ 2025 ವಾರ್ಷಿಕೋತ್ಸವ ಪೋಸ್ಟರ್ ಅನ್ನು ಕಾಲೇಜಿನ ಪ್ರಾಧ್ಯಾಪಕ ಡಾ.ಜಯರಾಮ್ ಬಿಡುಗಡೆ ಮಾಡಿದರು.

ವಿದ್ಯಾರ್ಥಿಗಳ ಆಸಕ್ತಿಗೆ ತಕ್ಕಂತೆ ಪ್ರೋತ್ಸಾಹಿಸಿ

ಮೈಸೂರು, ಮೇ 7(ಜಿಎ)–ಎಲ್ಲಾ ಕಲಾ ಪ್ರಕಾರಗಳು, ಕ್ರೀಡೆ ಸೇರಿದಂತೆ ಇತರೆ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಆಸಕ್ತಿ ಹೊಂದಿದ್ದು, ಅವರ ಆಸಕ್ತಿಗೆ ಅನುಗುಣವಾಗಿ ಪ್ರೋತ್ಸಾಹ ನೀಡಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಬಿ.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಮೈಸೂರಿನ ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಲೇಜು ಶಿಕ್ಷಣ ಇಲಾಖೆ ಸಹಯೋಗದಲ್ಲಿ 2024–25ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ರಾಷ್ಟ್ರೀಯ ರೆಡ್‌ಕ್ರಾಸ್ ಸಮಿತಿಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಕರು ಮತ್ತು ಪಾಲಕರು ಮಕ್ಕಳ ಪ್ರತಿಭೆಯನ್ನು ಗುರುತಿಸುವ ಕೆಲಸವಾಗಬೇಕು. ಆಗ ಮಾತ್ರ ಅವರಲ್ಲಿರುವ ಪ್ರತಿಭೆ ಹೊರಹೊಮ್ಮಲು ಸಾಧ್ಯ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಓದುವುದರ ಜೊತೆಗೆ ಕಲೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು. ಪ್ರಾಥಮಿಕ ತರಗತಿಯಿಂದ ಕಾಲೇಜುವರೆಗಿನ ವ್ಯಾಸಂಗದವರೆಗೂ ಸಂಸ್ಕೃತಿ, ಕಲೆ, ಆಟೋಟ, ಮನರಂಜನೆ ಸ್ಪರ್ಧೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಕಾಲೇಜುಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಹಿರಿಯ ಪತ್ರಕರ್ತ ಶಿವಮೂರ್ತಿ ಜುಪ್ತಿಮಠ ಮಾತನಾಡಿ, ಪ್ರತಿಯೊಬ್ಬರಲ್ಲೂ ಒಂದೊಂದು ಕಲೆ ಇದೆ. ಬರವಣಿಗೆ, ವಾಕ್ ಚಾತುರ್ಯ, ಕ್ರೀಡೆಯಲ್ಲಿ ಕೌಶಲಗಳನ್ನು ಹೊಂದಿರುತ್ತಾರೆ. ಇವುಗಳನ್ನು ನೀವು ಪ್ರೋತ್ಸಾಹಿಸಬೇಕು. ವಿದ್ಯಾಭ್ಯಾಸದೊಂದಿಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ನಿಮ್ಮ ಕೌಶಲ ಬೆಳಸಲಿವೆ ಎಂದರು.

ನಂತರ ಮಿಮಿಕ್ರಿ ಗೋಪಿ ವಿದ್ಯಾರ್ಥಿ ಜೀವನದಲ್ಲಿ ನಡೆಯುವ ಘಟನೆಗಳನ್ನು ಹಾಸ್ಯಮಯವಾಗಿ ನಗೆಗಡಲಲ್ಲಿ ತೇಲಿಸಿ, ಕನ್ನಡ ನಟರು, ಕಾಮಿಡಿಯನ್, ರಾಜಕೀಯ ನಾಯಕರ ಧ್ವನಿಯಲ್ಲಿ ಮಿಮಿಕ್ರಿ ಮಾಡಿ ಎಲ್ಲರ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಅತಿ ಹೆಚ್ಚು ಅಂಕಗಳಿಸಿದ ಕಾಲೇಜಿನ ವಿದ್ಯಾರ್ಥಿಗಳಾದ ಮಧುಕುಮಾರ್, ಬಿ.ಆರ್.ರಂಜಿತ್ ಅವರಿಗೆ ನಗದು ಬಹುಮಾನ ನೀಡಿ, ಗೌರವಿಸಲಾಯಿತು. ಜೊತೆಗೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಿ.ವಿಶ್ವಸಾಗರ್, ಉಪಾಧ್ಯಕ್ಷರಾದ ಸಿ.ಚಂದನ, ಕಾರ್ಯದರ್ಶಿ ಎಂ.ಮಹೇಂದ್ರ, ಜಂಟಿ ಕಾರ್ಯದರ್ಶಿ ಹೆಚ್.ರಚನನಾಥ್ ಅವರನ್ನು ಅಭಿನಂದಿಸಲಾಯಿತು. ಸಾಂಸ್ಕೃತಿಕ ಸಮಾರೋಪದ ಹಿನ್ನೆಲೆಯಲ್ಲಿ ಕಾಲೇಜಿನ ವತಿಯಿಂದ ನಡೆಸಿದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ವಿಜೇತರಾದವರಿಗೆ ಬಹುಮಾನ ನೀಡಲಾಯಿತು. ಈ ಸಂದರ್ಭದಲ್ಲಿ ತಿ.ನರಸೀಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ವಿ.ಉದಯ ಕುಮಾರ್, ಕಾಲೇಜಿನ ಪ್ರಾಂಶುಪಾಲ ಡಾ.ಪುಟ್ಟರಾಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಲ್ಲಿ ನಡೆದ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ರಾಷ್ಟ್ರೀಯ ರೆಡ್‌ಕ್ರಾಸ್ ಸಮಿತಿ ಸಮಾರೋಪ ಸಮಾರಂಭವನ್ನು ಡಾ.ಬಿ.ಚಂದ್ರಶೇಖರ್ ಉದ್ಘಾಟಿಸಿದರು.

ದಾಖಲಾತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 7– ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜು ವರಕೋಡು, ಮೈಸೂರು ತಾಲೂಕು, ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜು, ಎಸ್ ಹೊಸಕೋಟೆ ಮತ್ತು ಅಟಲ್ ಬಿಹಾರಿ ವಾಜಪೇಯಿ ವಸತಿ ವಿಜ್ಞಾನ ಕಾಲೇಜು ತಗಡೂರು, ನಂಜನಗೂಡು ತಾಲೂಕುಗಳಲ್ಲಿ ವಿಜ್ಞಾನ ವಿಭಾಗದ PCMB ಮತ್ತು PCMC ಸಂಯೋಜನೆಗಳ ದಾಖಲಾತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತ ವಸತಿ, ಪಠ್ಯ–ಪುಸ್ತಕ, ಸಮವಸ್ತ್ರ ಮತ್ತು ಇನ್ನಿತರ ಸೌಲಭ್ಯಗಳನ್ನು ನೀಡಲಾಗುವುದು. JEE/CET/NEET ಕೋರ್ಸ್‌ಗಳಿಗೆ ಉಚಿತ ತರಬೇತಿ ನೀಡಲಾಗುವುದು. ಅರ್ಜಿಯನ್ನು ಮೇ 3 ರಿಂದ ವಿತರಿಸಲಾಗುವುದು. ಅರ್ಜಿ ಸಲ್ಲಿಸಲು ಮೇ 14 ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿಗಳನ್ನು ಮೈಸೂರು ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ನೀಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಹಿಟ್ (ಕ) + ಹಿಟ್ (ತೆ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ರೇಡ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಟ್ರೋ (ತ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ನಾನ್ ಪೋಲಿ (ಕ) + ರಿಕ್ಷಾ ಚಾಲಕ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿದ್ಯಾರ್ಥಿಗಳಿಗೆ ಮೇ 12ರಂದು ಎಜುಕೇಷನ್ ಎಕ್ಸ್‌ಪೋ 2025



ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಹಾಗೂ ಆರ್.ಧ್ರುವನಾರಾಯಣ್ ಎಜುಕೇಷನಲ್ ಟ್ರಸ್ಟ್ ಆಯೋಜಿಸಿರುವ ಎಜುಕೇಷನ್ ಎಕ್ಸ್‌ಪೋ 2025 ಪೋಸ್ಟರ್ ಅನ್ನು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಚುದನ್‌ಕುಮಾರ್ ಬಿಡುಗಡೆ ಮಾಡಿದರು.

ಮೈಸೂರು, ಮೇ 7(ಎಂಟಿವೈ)– ನಂಜನಗೂಡು ಪಟ್ಟಣದ ದೇವೀರಮ್ಮನಹಳ್ಳಿ ವೃತ್ತದಲ್ಲಿರುವ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ಮೇ 12ರಂದು ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ಇಲ್ಲವೇ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎಜುಕೇಷನ್ ಎಕ್ಸ್‌ಪೋ 2025 ಅನ್ನು ಆಯೋಜಿಸಲಾಗಿದೆ ಎಂದು ಎಕ್ಸ್ಪೋ ವ್ಯವಸ್ಥಾಪಕ ಪ್ರಕೃತ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಂಜನಗೂಡು ತಾಲೂಕು ಯುವ ಕಾಂಗ್ರೆಸ್ ಸಮಿತಿ ಹಾಗೂ ಆರ್.ಧ್ರುವನಾರಾಯಣ್ ಎಜುಕೇಷನಲ್ ಟ್ರಸ್ಟ್ ಸಹಯೋಗದಲ್ಲಿ ಈ ಎಜುಕೇಷನ್ ಎಕ್ಸ್‌ಪೋ 2025 ನಡೆಯುತ್ತಿದ್ದು, ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ಇಲ್ಲವೇ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲಾಗುತ್ತದೆ. ಈ ಎಕ್ಸ್‌ಪೋದಲ್ಲಿ 75ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಪಾಲ್ಗೊಳ್ಳಲಿವೆ. ರಾಜ್ಯದ ವಿವಿಧ ಸರ್ಕಾರಿ ಶಿಕ್ಷಣ ಸಂಸ್ಥೆಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು, ಪಾಲಿಟೆಕ್ನಿಕ್, ವೈದ್ಯಕೀಯ, ಇಂಜಿನಿಯರಿಂಗ್, ಕಾನೂನು ಶಿಕ್ಷಣ ಸಂಸ್ಥೆಗಳು ಭಾಗವಹಿಸುತ್ತಿದ್ದು, ತಮ್ಮಲ್ಲಿ ಲಭ್ಯವಿರುವ ಶೈಕ್ಷಣಿಕ ಕೋರ್ಸ್‌ಗಳ ಬಗ್ಗೆ ಉಪಯುಕ್ತ ಮಾಹಿತಿ ಒದಗಿಸಿಕೊಡಲಿದ್ದಾರೆ. ಅಂದು ಬೆಳಗ್ಗೆ 10ರಿಂದ ಸಂಜೆ 6.30ರವರೆಗೆ ಈ ಕಾರ್ಯಕ್ರಮ ನಡೆಯಲಿದ್ದು, ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಜಿಲ್ಲೆಗಳಿಗೆ ಸೇರಿದ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಇದರ ಉಪಯೋಗ ಪಡೆಯಬೇಕೆಂದು ಮನವಿ ಮಾಡಿದರು. ಪ್ರವೇಶ ಉಚಿತ. ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಚಂದನ್ ಕುಮಾರ್, ನಂಜನಗೂಡು ತಾಲೂಕು ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳಾದ ವಿಜಯ್ ಕುಮಾರ್, ಆದರ್ಶ್, ಹರೀಶ್‌ಕುಮಾರ್, ಸುಗುಕುಮಾರ್, ಮಹೇಶ್‌ಕುಮಾರ್ ಇದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹರೀಶ್‌ಗೌಡರಿಂದ ಚಾಲನೆ




ಮೈಸೂರು ನಗರಪಾಲಿಕೆ ವಾರ್ಡ್ ನಂ.18, 21, 40 ಮತ್ತು 41ರ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಬುಧವಾರ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಮೇ 7(ಎಂಕೆ)– ಮೈಸೂರು ನಗರಪಾಲಿಕೆ ವಾರ್ಡ್ ನಂ.18, 21, 40 ಮತ್ತು 41ರ ವ್ಯಾಪ್ತಿಯಲ್ಲಿ 3.5 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಇಂದು ಗುದ್ದಲಿ ಪೂಜೆ ನೆರವೇರಿಸಿದರು.

ವಾರ್ಡ್ ನಂ.21ರ ಗಂಗೋತ್ರಿ ಬಡಾವಣೆಯ ಗಣಪತಿ ದೇವಸ್ಥಾನದ ಮುಂಭಾಗದ ರಸ್ತೆಗಳು ಮತ್ತು ಚರಂಡಿ ಅಭಿವೃದ್ಧಿ, ಕುದುರೆಮಾಳದಿಂದ ಸಾಹುಕಾರ ಚೆನ್ನಯ್ಯ ರಸ್ತೆವರೆಗೂ ರಸ್ತೆ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ 18ರ ವ್ಯಾಪ್ತಿಯ ವಿವೇಕಾನಂದ ರಸ್ತೆಯಲ್ಲಿರುವ ದೊಡ್ಡ ಚರಂಡಿ ಸೇತುವೆ ನಿರ್ಮಾಣ ಕಾಮಗಾರಿ, ವಾರ್ಡ್ ನಂ.40ರ ಹೈದರಗುಂಟೆ ಪಾರ್ಕ್ ಪಕ್ಕದ ರಸ್ತೆಗಳು, ವಾರ್ಡ್ ನಂ.41ರ ಹಳ್ಳದ ಕೇರಿ ಕೆಎಸ್‌ಆರ್‌ಟಿಸಿ ಬಸ್ ಹಿಂಭಾಗದ ಮುಖ್ಯ ರಸ್ತೆ, ಕೆ.ಟಿ ರಸ್ತೆಯಿಂದ ಶ್ರೀಕಂಠೇಶ್ವರ ಟಿ.ವಿ ಶೋರೂಂ ವರೆಗೆ ಹಾಗೂ ಹಳ್ಳದಕೇರಿ ಗಣೇಶ್ ಪ್ಯಾಲೇಸ್ ಹಾಗೂ ಸಂಗಮ್ ಟಾಕೀಸ್ ರಸ್ತೆ ಮುಂಭಾಗ ಮತ್ತು ಸುಮಂಗಲಿ ಬಟ್ಟೆ ಅಂಗಡಿವರೆಗಿನ ಒಳಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಆರಂಭವಾಗಿದೆ. ವಿಶೇಷ ಅನುದಾನದಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಮಳೆಗಾಲ ಆರಂಭವಾಗುತ್ತಿದ್ದು, ಒಳಚರಂಡಿ, ಚರಂಡಿ ವ್ಯವಸ್ಥೆ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ ಎಂದರು.

ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮಾಜಿ ಮೇಯರ್‌ಗಳಾದ ಪುಷ್ಪಲತ ಚಿಕ್ಕಣ್ಣ, ಮೋದಾಮಣಿ, ನಗರಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಮುಖಂಡರಾದ ವಿಶ್ವ, ಚಿಕ್ಕಣ್ಣ, ರಾಜಣ್ಣ, ಶ್ರೀನಿವಾಸ್, ನಾಗರಾಜ್, ಸಿ.ಎಸ್.ರಘು, ಕುಮಾರ್, ರಾಮಚಂದ್ರು, ಮಹೇಶ್, ಮಾಜಿ ಸದಸ್ಯರಾದ ಎಂ.ಡಿ.ನಾಗಭೂಷಣ್, ಬಾಲರಾಜ್, ದೇವರಾಜ ಬ್ಲಾಕ್ ಅಧ್ಯಕ್ಷ ರಮೇಶ್ ರಾಯಪ್ಪ, ದರ್ಶನ್ ಸುರೇಂದ್ರನಾಥ್, ಕುಮಾರ್, ಮೋಹನ್ ಕುಮಾರ್, ಎಸ್.ಆರ್.ರವಿಕುಮಾರ್ ಮತ್ತಿತರರಿದ್ದರು.

ನಾಳೆಯಿಂದ 12ರವರೆಗೆ ರಿಯಲ್ ಎಸ್ಟೇಟ್ ಪ್ರದರ್ಶನ ಮೈ ರಿಯಾಲ್ಟಿ–2025



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ 'ಮೈರಿಯಾಲ್ಟಿ 2025' ರಿಯಲ್ ಎಸ್ಟೇಟ್ ಪ್ರದರ್ಶನ ಕುರಿತು ಮೈ ರಿಯಾಲ್ಟಿ–2025ರ ಅಧ್ಯಕ್ಷ ಕೆ.ಸಿ.ನಂದಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮೇ 7(ಎಂಟಿವೈ)– ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಮೇ 9ರಿಂದ 12ರವರೆಗೆ 18ನೇ ಆವೃತ್ತಿಯ 'ಮೈರಿಯಾಲ್ಟಿ 2025' ರಿಯಲ್ ಎಸ್ಟೇಟ್ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಮೈರಿಯಾಲ್ಟಿ 2025ರ ಅಧ್ಯಕ್ಷ ಕೆ.ಸಿ.ನಂದಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಘಟಕ, ಕಾನ್ಫೆಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ಸ್ ಆಫ್ ಇಂಡಿಯಾ (ಕ್ರೆಡಾಯ್) ಮೈಸೂರು ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಮೈರಿಯಾಲಿಟಿ ಪ್ರದರ್ಶನ ಆಯೋಜಿಸಲಾಗಿದೆ. ಈ ಪ್ರದರ್ಶನದಿಂದ ರಿಯಲ್ ಎಸ್ಟೇಟ್ ಉದ್ಯಮದ ತಜ್ಞರು, ಹೂಡಿಕೆದಾರರು, ಮನೆ ಖರೀದಿದಾರರಿಗೆ ಅನುಕೂಲಕರವಾದ ಪ್ರದರ್ಶನವಾಗಲಿದೆ. ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿರುವ ಇತ್ತೀಚಿನ ಟ್ರೆಂಡ್‌ಗಳು, ನಾವೀನ್ಯತೆಗಳು ಮತ್ತು ಅವಕಾಶಗಳನ್ನು ಪ್ರದರ್ಶಿಸಲಾಗುತ್ತಿದೆ. ಹಸಿರು ಮತ್ತು ತೆರೆದ ಸ್ಥಳಗಳಿಂದ ಹೊಸ ವಿನ್ಯಾಸವನ್ನು ಹೊಂದಿದೆ. ಎಲ್ಲಾ ರಿಯಲ್ ಎಸ್ಟೇಟ್ ಡೆವಲಪರ್‌ಗಳು, ಪ್ರಮೋಟರ್‌ಗಳು ಮತ್ತು ಬ್ಯಾಂಕ್‌ಗಳನ್ನು (ಹಣಕಾಸು ಸಂಸ್ಥೆಗಳು) ಒಂದೇ ಸೂರಿನಡಿ ದೊರಕಲಿದ್ದಾರೆ. ಈ ಮೆಗಾ ಪ್ರಾಪರ್ಟಿ ಪ್ರದರ್ಶನದ ಮುಖ್ಯ ಗುರಿಯಾಗಿದೆ ಎಂದರು.

ಮೈ ರಿಯಾಲ್ಟಿ 2025ರ ಪ್ರದರ್ಶನದಲ್ಲಿ 30ಕ್ಕೂ ಹೆಚ್ಚು ಮಳಿಗೆಗಳಿದ್ದು, ಪ್ಲಾಟಿನಂ, ಗೋಲ್ಡ್, ಸಿಲ್ವರ್ ಮತ್ತು ರೆಗ್ಯುಲರ್ ಎಂದು 4 ವರ್ಗದ ಸ್ಟಾಲ್‌ಗಳನ್ನು ವಿಂಗಡಿಸಲಾಗಿದೆ. ಹೆಸರಾಂತ ರಿಯಲ್ ಎಸ್ಟೇಟ್ ಸಂಸ್ಥೆಗಳು ಗ್ರಾಹಕರಿಗೆ ಮಾಹಿತಿ ಒದಗಿಸಲಿವೆ. ಪ್ರದರ್ಶನವನ್ನು ಪ್ರತಿದಿನ ಬೆಳಗ್ಗೆ 10 ರಿಂದ ರಾತ್ರಿ 8.30ರವರೆಗೆ ವೀಕ್ಷಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9945809000, 9945171737 ಸಂಪರ್ಕಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಮೈರಿಯಾಲಿಟಿ 2025 ಗೌರವ ಕಾರ್ಯದರ್ಶಿ ಅಕ್ಷಯ್ ಕುಮಾರ್, ಕ್ರೆಡೈ ಮೈಸೂರು ಅಧ್ಯಕ್ಷ ಹರೀಶ್ ಶೆಣೈ, ಬಿಎಐ ಅಧ್ಯಕ್ಷ ವಿ.ಶ್ರೀನಾಥ್, ಸಿ.ಡಿ.ಕೃಷ್ಣ, ನಾಗರಾಜ ಬೈರಿ ಇದ್ದರು.

ಪ್ರತಿಷ್ಠೆ ಬಿಟ್ಟು ವಿಪ್ರ ಸಮುದಾಯ ಒಂದಾಗಬೇಕು

• ಶಾಸಕ ಶ್ರೀವತ್ಸ ಕರೆ • ಬ್ರಾಹ್ಮಣ ಮಹಾಸಭಾ ನೂತನ ಪದಾಧಿಕಾರಿಗಳಿಗೆ ಅಭಿನಂದನೆ; ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ರಾಮಮಂದಿರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನೂತನ ಪದಾಧಿಕಾರಿಗಳಿಗೆ ಅಭಿನಂದನೆ ಹಾಗೂ ಸದಸ್ಯತ್ವ ಅಭಿಯಾನ ಕಾರ್ಯಕ್ರಮ ನಡೆಯಿತು.

ಮೈಸೂರು, ಮೇ 7(ಎಂಕೆ)– ಪ್ರತಿಷ್ಠೆ ತ್ಯಜಿಸಿ ವಿಪ್ರ ಸಮುದಾಯದ ಎಲ್ಲಾ ಒಳಪಂಗಡಗಳು ಒಂದಾಗಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಕರೆ ನೀಡಿದರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ರಾಮಮಂದಿರದಲ್ಲಿ ಮೈಸೂರು ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನೂತನ ಪದಾಧಿಕಾರಿಗಳಿಗೆ ಅಭಿನಂದನೆ ಹಾಗೂ ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿದ್ದು, ವಿಪ್ರರಲ್ಲಿ ಒಗ್ಗಟ್ಟು ಮೂಡಬೇಕಾದರೆ ಪ್ರತಿಷ್ಠೆ ತ್ಯಜಿಸಿ ತ್ರಿಮತಸ್ಥರೆಲ್ಲಾ ಒಂದಾಗಬೇಕು ಎಂದು ತಿಳಿಸಿದರು.


ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ ಸುಮಾರು 2 ಲಕ್ಷ ಮಂದಿ ಬ್ರಾಹ್ಮಣರಿದ್ದು, ಕೇವಲ 4 ಸಾವಿರ ಮಂದಿಯಷ್ಟೇ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯರಾಗಿರುವುದು ಬೇಸರದ ಸಂಗತಿಯಾಗಿದೆ. ಸದಸ್ಯರಿಲ್ಲಾ ಎಂದರೆ ಸಮುದಾಯದ ಏಳಿಗೆ ಸಾಧ್ಯವಿಲ್ಲ. ಪ್ರತಿಯೊಬ್ಬರು ಕುಟುಂಬದ ಜವಾಬ್ದಾರಿಯ ಜೊತೆಗೆ ಸಮುದಾಯ ಮತ್ತು ಸಮಾಜದ ಜವಾಬ್ದಾರಿಯನ್ನು ನಿಭಾಯಿಸುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಮಾತನಾಡಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಕೇಂದ್ರಗಳಲ್ಲಿ ಮೈಸೂರು ಮೊದಲ ಸ್ಥಾನದಲ್ಲಿದೆ. ಹಾಗೆಯೇ ಎಲ್ಲಾ ಜಿಲ್ಲೆಗಳಲ್ಲಿಯೂ ಭದ್ರವಾಗಿದೆ. ಮುಂದಿನ ದಿನಗಳಲ್ಲಿ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಬ್ರಾಹ್ಮಣ ಸಮುದಾಯ ಶ್ರೇಯೋಭಿವೃದ್ಧಿಗಾಗಿ ಕೆಲಸ ಮಾಡಲಿದೆ ಎಂದರು.

ಸದಸ್ಯತ್ವ ಅಭಿಯಾನ: ಇದೆ ವೇಳೆ ಹಲವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ನೀಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ನಂತರ ನೂತನ ರಾಜ್ಯ ಉಪಾಧ್ಯಕ್ಷರಾಗಿ ನೇಮಕಗೊಂಡ ನಂ.ಶ್ರೀಕಂಠಕುಮಾರ್, ಎನ್.ಎಂ.ನವೀನ್ ಕುಮಾರ್, ಅನಿಲ್ ಕುಮಾರ್, ರವಿಶಂಕರ್ ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಮೇಲುಕೋಟೆ ಇಳೈ ಆಳ್ವಾರ್ ಸ್ವಾಮೀಜಿ, ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ್, ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ. ಪಾರ್ಥಸಾರಥಿ, ಎಂ.ಆರ್.ಬಾಲಕೃಷ್ಣ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಹೆಚ್.ಎನ್. ಶ್ರೀಧರಮೂರ್ತಿ, ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ರಾಕೇಶ್ ಭಟ್, ವಿಜಯ್‌ಕುಮಾರ್, ಟಿ.ಎಸ್.ಅರುಣ್, ಚಕ್ರಪಾಣಿ, ಸುಚಿಂದ್ರ, ಪ್ರಶಾಂತ್, ಆರ್.ಎಸ್.ಸತ್ಯನಾರಾಯಣ್, ಶ್ರೀನಿವಾಸ್ ಪ್ರಸಾದ್ ಮತ್ತಿತರರಿದ್ದರು.

ಟ್ರಿ ಅಥಾರಿಟಿ ರಚನೆಗೆ ಡಿಎಫ್‌ಓ ಡಾ.ಮಾಲತಿ ಪ್ರಿಯರಿಗೆ ಎಂಜಿಪಿ ಮನವಿ



'ಟ್ರಿ ಅಥಾರಿಟಿ' ರಚಿಸುವಂತೆ ಒತ್ತಾಯಿಸಿ ಮೈಗ್ರಾಪ, ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯ ಅವರಿಗೆ ಮಂಗಳವಾರ ಮನವಿ ಸಲ್ಲಿಸಿತು.

ಮೈಸೂರು, ಮೇ 7(ಎಸ್‌ಪಿಎನ್)– 2009ರಿಂದಲೂ ಮೈಸೂರಲ್ಲಿ ಟ್ರಿ ಅಥಾರಿಟಿ ಪುನರ್ ರಚನೆ ಮಾಡಿಲ್ಲ. ಹಾಗಾಗಿ ನೂತನ ಸದಸ್ಯರ ಟ್ರಿ ಅಥಾರಿಟಿ ರಚಿಸುವಂತೆ ಒತ್ತಾಯಿಸಿ ಮೈಸೂರು ಗ್ರಾಹಕ ಪರಿಷತ್, ಅರಣ್ಯ ಇಲಾಖೆ ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯ ಅವರಿಗೆ ಮಂಗಳವಾರ ಮನವಿ ಸಲ್ಲಿಸಿತು.

ಮೈಸೂರಲ್ಲಿ ಇತ್ತೀಚೆಗೆ ರಸ್ತೆಬದಿಯಲ್ಲಿನ ಮರಗಳ ಹನನಕ್ಕೆ ಅರಣ್ಯ ಇಲಾಖೆ ಬೇಕಾಬಿಟ್ಟಿ ಅನುಮತಿ ನೀಡುತ್ತಿದೆ. ಇದಕ್ಕೆ 2009ರಿಂದ 'ಟ್ರಿ ಅಥಾರಿಟಿ' ಪುನರ್ ರಚನೆ ಮಾಡದಿರುವುದೇ ಕಾರಣ. ಹಾಗಾಗಿ ನೂತನ ಸದಸ್ಯರನ್ನೊಳಗೊಂಡ ಟ್ರಿ ಅಥಾರಿಟಿ ರಚಿಸುವಂತೆ ಮನವಿ ಮಾಡಲಾಗಿದೆ ಎಂದರು.

ಮುಂದುವರೆದು ದಟ್ಟಗಳ್ಳಿಯಲ್ಲಿ ಹೆಚ್ಚುವರಿ ವಿದ್ಯುತ್ ಸಂಪರ್ಕದ ಕಂಬ ನಿಲ್ಲಿಸಲು ನೂರಾರು ಮರಗಳ ಹನನ ಮಾಡಲಾಗುತ್ತಿದೆ. ಈ ಹಿಂದೆ ಹೈದರಾಲಿ ರಸ್ತೆಯಲ್ಲಿ ಹತ್ತು–ಹಲವು ಮರಗಳನ್ನು ಹನನ ಮಾಡಲಾಗಿದೆ. 1976ರ ಆಕ್ಟ್ ಪ್ರಕಾರ 'ಟ್ರಿ ಅಥಾರಿಟಿ' ಪುನರ್ ರಚನೆ ಮಾಡಿದ್ದರೆ, ಇಷ್ಟೊಂದು ಅನಾಹುತ ಆಗುತ್ತಿರಲಿಲ್ಲ ಎಂದು ಡಾ.ಮಾಲತಿ ಪ್ರಿಯ ಅವರ ಗಮನಕ್ಕೆ ತಂದರು.

ಈಗಾಗಲೇ ಕೆಪಿಟಿಸಿಎಲ್ ಅಧೀಕ್ಷಕ ಅಭಿಯಂತರ ರಮೇಶ್ ಅವರಿಗೆ ಮರಗಳ ಹನನಕ್ಕೆ ಕಡಿವಾಣ, ವೈಜ್ಞಾನಿಕ ರೀತಿ ವಿಲೇವಾರಿಗೆ ಮನವಿ ಮಾಡಿದ್ದ ಪ್ರಸಂಗವನ್ನು ವಿವರಿಸಿದರು. ಮುಡಾ ಆಯುಕ್ತರಿಗೂ ಮರಗಳನ್ನು ಉಳಿಸುವ ನಿಟ್ಟಿನಲ್ಲಿ ಸುಧಾರಿತ ಕ್ರಮಗಳನ್ನು ಅನುಸರಿಸುವಂತೆ ಮನವಿ ಮಾಡಲಾಗುವುದು ಎಂದು ಮೈಗ್ರಾಪ ಸಂಚಾಲಕ ಡಿ.ವಿ.ದಯಾನಂದ ಸಾಗರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ಈ ವೇಳೆ ಮೈಗ್ರಾಪ ಕಾರ್ಯಾಧ್ಯಕ್ಷೆ ಶೋಭನಾ ಸಾಂಬಶಿವ, ಖಜಾಂಚಿ ಶಂಕರ್, ಪರಿಸರವಾದಿ ಭಾನುಮೋಹನ್, ಪ್ರಣಿತ ಉಪಸ್ಥಿತರಿದ್ದರು.

ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿಯ ಕಲ್ಯಾಣೋತ್ಸವ



ಮೈಸೂರು, ಮೇ 7– ಮೈಸೂರಿನ ವಾರ್ಡ್ ನಂ.23ರ ವ್ಯಾಪ್ತಿಯ ಹಳೆ ಬಂಡಿಕೇರಿಯ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ವಾರ್ಷಿಕ ಕಲ್ಯಾಣೋತ್ಸವ ಬುಧವಾರ ವಿಜೃಂಭಣೆಯಿಂದ ನೆರವೇರಿತು.

ವಿವಿಧ ಪೂಜಾ ಕೈಂಕರ್ಯದಲ್ಲಿ ಭಾಗವಹಿಸಿದ್ದ ಶಾಸಕ ಕೆ.ಹರೀಶ್‌ಗೌಡ ಅವರ ಕುಟುಂಬಸ್ಥರಾದ ಶ್ರೀಮತಿ ಗೌರಿ, ಪುತ್ರ ಕಿಶನ್ ವಿಶೇಷ ಪೂಜೆ ಸಲ್ಲಿಸಿ ಪ್ರಸಾದ ವಿತರಣೆ ಮಾಡಿದರು. ದೇವಸ್ಥಾನದ ಸದಸ್ಯರಾದ ರಾಮು, ಸುದರ್ಶನ್, ವಿಘ್ನೇಶ್ವರ ಭಟ್, ನರೇಂದ್ರ, ವಿನೋತ, ಸತೀಶ್, ಜಗ್ಗೇಶ್ ಮತ್ತಿತರರಿದ್ದರು.